'ಪ್ರತಿಭೆಗಳು ಗುಡಿಸಲಿನಲ್ಲಿ ಹುಟ್ಟುತ್ತವೆ' ಎನ್ನುವ ಮಾತೊಂದಿದೆ. ಗ್ರಾಮ ಪರಿಸರ ಬದುಕುವುದನ್ನು ಕಲಿಸುತ್ತದೆ. ಸಮಾಜದಲ್ಲಿ ತಲೆ ಎತ್ತಿ ನಡೆಯುವುದನ್ನು ತೋರಿಸುತ್ತದೆ. ಅಂತಹ ಪರಿಸರದಿಂದ ಮೇಲೆದ್ದು ಬಂದವರೇ ಡಾ.ಸಿದ್ಧಲಿಂಗಪ್ಪ ಕೊಟ್ನೆಕಲ್‌ರವರು. ಹಂತ ಹಂತವಾಗಿ ಮೇಲೇರುತ್ತಾ ಬಂದವರು. ಜನಪದ ತಾಯಿ "ಬಡತನ ನನಗಿರಲಿ ಬಾಳ ಮಕ್ಕಳಿರಲಿ" ಎಂದು ಹೇಳುವಂತೆ ಬಡತನ ಗೆದ್ದು ಬಂದವರು. ವಿದ್ಯೆ ಹಾಗೂ ಸಂಸ್ಕಾರಕ್ಕೆ ಖನಿಯಾಗಿ ರೂಪುಗೊಂಡವರು ಡಾ.ಸಿದ್ಧಲಿಂಗಪ್ಪ ಕೊಟ್ನೆಕಲ್‌ರವರು. ಕನ್ನಡ ಉಪನ್ಯಾಸಕರಾಗಿ, ಸಂಶೋಧಕರಾಗಿ ಜನಮಾನಸದಲ್ಲಿ ಚಿರಪರಿಚಿತರಾಗಿದ್ದಾರೆ. 'ಕೊಪ್ಪಳ ಜಿಲ್ಲೆಯ ಶಾಸನಗಳು ಮತ್ತು ಸಾಂಸ್ಕೃತಿಕ ಇತಿಹಾಸ' ಎಂಬ ವಿಷಯ ಕುರಿತು ಸಂಶೋಧನೆ ನಡೆಸಿ ಪಿಎಚ್.ಡಿ ಪದವಿಯನ್ನು ಪಡೆದುಕೊಂಡಿದ್ದಾರೆ. ಅದನ್ನು ಪುಸ್ತಕ ರೂಪದಲ್ಲಿ ಪ್ರಕಟಪಡಿಸಿ ಇತಿಹಾಸಕಾರರ ಹುಬ್ಬೇರಿಸುವಂತೆ ಮಾಡಿದ್ದಾರೆ.

ಕನ್ನಡ ಸಾಹಿತ್ಯ ಸಾಗರಕ್ಕೆ ಡಾ.ಸಿದ್ದಲಿಂಗಪ್ಪ ಕೊಟ್ನೆಕಲ್‌ರವರು ತಮ್ಮದೇ ಛಾಪು ಮೂಡಿಸಿದ ಉಪನದಿಯೊಂದನ್ನು ಹರಿಯಬಿಟ್ಟಿದ್ದಾರೆ. ಅದುವೇ 'ಸಂಸಾರ ಸಗ್ಗ'. ಇದು ಅವರು ಕನ್ನಡ ಸಾಹಿತ್ಯಕ್ಕೆ ನೀಡಿದ ವಿಶಿಷ್ಟ ಕೊಡುಗೆಯಾಗಿದೆ. ಕುಟುಂಬದಲ್ಲಿ ಪ್ರತಿದಿನ ನಡೆಯುವ ಸಂಭಾಷಣೆ, ಮಾತುಗಳಲ್ಲಿ ನವಿರಾದ ಹಾಸ್ಯ ತುಂಬಿದ್ದಾರೆ. ಗದ್ಯ ಮಾಧ್ಯಮವೊಂದರ ಮೂಲಕ ಓದುಗರಿಗೆ ವಿಶಿಷ್ಠ ಅನುಭವ ನೀಡುವ ಡಾ.ಸಿದ್ಧಲಿಂಗಪ್ಪನವರು ಒಂದೊಮ್ಮೆ ಅಮಾಯಕತ್ವವನ್ನೂ, ಮಗದೊಮ್ಮೆ ಜಾಣತನವನ್ನೂ ಪ್ರದರ್ಶಿಸುತ್ತಾರೆ. ಬದುಕಿನ ಬವಣೆಗಳನ್ನು ಮುಗುಳ್ನಗೆಯೊಂದಿಗೆ ಸ್ವೀಕರಿಸುವ ಲೇಖಕರು ಮಧ್ಯಮವರ್ಗದ ಎಲ್ಲಾ ಆಯಾಸ, ಪ್ರಯಾಸಗಳನ್ನು ಸ್ವೀಕರಿಸುವ ಭರವಸೆ ತೋರುತ್ತಾರೆ.

'ಸಂಸಾರ ಸಗ್ಗ' 2014ರಲ್ಲಿ ಡಾ.ಸಿದ್ಧಲಿಂಗಪ್ಪ ಕೊಟ್ನೆಕಲ್‌ರವರ ಕೈಯಲ್ಲಿ ಅರಳಿದ ಕುಸುಮ. ಇದೀಗ ಇದು ಮೂರನೆಯ ಮುದ್ರಣ ಕಾಣುತ್ತಿರುವುದು ಹೆಮ್ಮೆಯ ಸಂಗತಿ. ಈ ಕೃತಿ 150 ಚುಟುಕು ಹಾಸ್ಯ ಪ್ರಕರಣಗಳನ್ನು ಒಳಗೊಂಡಿದೆ. ಅಪ್ಪನಿಗೆ ಮದ್ವೆ ಮಾಡಬೇಕು, ತಲಿಮ್ಯಾಗ ಸುರ್ಕ, ಅಮ್ಮ ಒಳಗೆ ಇದ್ದಾಳ ಬಾ, ಚಡ್ಡಿನ್ಯಾರು ನೊಡ್ತಾರ?, ನಾನೇ ದಿಗಂಬರ ಆಗಿನಿ, ತಾಳಿ ತೋರಿಸ್ತಿನಿ, ಮುಂತಾದ ನಗೆಹನಿಗಳು ಗಮನ ಸೆಳೆಯುತ್ತವೆ; ಮತ್ತೆ ಮತ್ತೆ ಓದಬೇಕೆನಿಸುತ್ತವೆ. ಮೊದಲ ಪುಟ ತೆರೆದಾಗ ಅಪರಿಚಿತರಾಗಿದ್ದ ಕುಟುಂಬ ಸದಸ್ಯರು ಸಗ್ಗವನ್ನು ಓದಿ ಮುಗಿಸುವ ಹೊತ್ತಿಗೆ ತೀರಾ ಪರಿಚಿತರಾಗಿ ನಮ್ಮ ಕಣ್ಮುಂದೆ ನಿಲ್ಲುತ್ತಾರೆ. ಇಲ್ಲಿ ಲೇಖಕನ ಶ್ರಮ ಸಾರ್ಥಕ. ಲೇಖಕರ ವಿಶಿಷ್ಟ ಈ ಪ್ರಯತ್ನಕ್ಕೆ ನಾನು ಅಭಿನಂದಿಸುತ್ತೇನೆ.

–ಬಸವರಾಜ ಆಕಳವಾಡಿ

ಅಧ್ಯಕ್ಷರು, ಕರ್ನಾಟಕ ಜಾನಪದ ಪರಿಷತ್ತು, ಕೊಪ್ಪಳ

ಐಶ್ವರ್ಯ ಪ್ರಿಂಟಿಂಗ್ ಪ್ರೆಸ್, ಕೊಪ್ಪಳ #8147348440

ಸಂಸಾರ ಸಗ್ಗ

ಡಾ. ಸಿದ್ಧಲಿಂಗಪ್ಪ ಕೊಟ್ನೆಕಲ್



ಸಂಸಾರ ಸಗ್ಗ

(ನಮ್ಮ ಕುಟುಂಬದಲ್ಲಿ ನಡೆದ ಹಾಸ್ಯ ಪ್ರಸಂಗಗಳು)

(ಪರಿಷ್ಕೃತ ತೃತೀಯ ಮುದ್ರಣ)

ಸಂಸಾರ ಸಗ್ಗ

(ನಮ್ಮ ಕುಟುಂಬದಲ್ಲಿ ನಡೆದ ಹಾಸ್ಯ ಪ್ರಸಂಗಗಳು)
(ಪರಿಷ್ಕೃತ ತೃತಿಯ ಮುದ್ರಣ)

ಡಾ. ಸಿದ್ಧಲಿಂಗಪ್ಪ ಕೊಟ್ನೆಕಲ್
ಎಂ.,ಎ.,ಎಂ.ಫಿಲ್.,ಪಿ.ಎಚ್.ಡಿ

2020

ಪ್ರಕಾಶನ :
ಮೇಘನಾ ಪ್ರಕಾಶನ
'ಕನಸು' ನಿಲಯ
ಮಹಾಂತಯ್ಯನಮಠ ಶಾಲೆ ಎದುರಿಗೆ, ಬಿ. ಟಿ. ಪಾಟೀಲ ನಗರ
ಕೊಪ್ಪಳ – 583 231.

"SAMSAARA SAGGA" (HUMOUR INCIDENT HELD IN OUR FAMILY)
by Dr. Siddalingappa Kotnekal, Kannada Senior Lecturer
Sri Gavisiddheshwar P. U. College, Koppal-583231 M:9448570340

ಸಂಸಾರ ಸಗ್ಗ : (ನಮ್ಮ ಕುಟುಂಬದಲ್ಲಿ ನಡೆದ ಹಾಸ್ಯ ಪ್ರಸಂಗಗಳು)
ಲೇಖಕರು : **ಡಾ. ಸಿದ್ಧಲಿಂಗಪ್ಪ ಕೊಟ್ನೆಕಲ್, ಹಿರಿಯ ಶ್ರೇಣಿ ಕನ್ನಡ ಉಪನ್ಯಾಸಕರು,**
ಶ್ರೀ ಗವಿಸಿದ್ಧೇಶ್ವರ ಪದವಿ ಪೂರ್ವ ಮಹಾವಿದ್ಯಾಲಯ, ಕೊಪ್ಪಳ.

ಮೊಬೈಲ್ ನಂ. : **9448570340**

Email : **skotnekal@gmail.com**

ಪ್ರಕಾಶಕರು : ಶ್ರೀಮತಿ ಮಂಜುಳಾ ಕೊಟ್ನೆಕಲ್
"ಕನಸು" ನಿಲಯ
"ಮಹಾಂತಯ್ಯನಮಠ ಶಾಲೆ ಎದುರಿಗೆ,
ಬಿ. ಟಿ. ಪಾಟೀಲ ನಗರ, ಕೊಪ್ಪಳ-583 231.

© : ಲೇಖಕರವು

ಪ್ರಥಮ ಮುದ್ರಣ : 2014
ಪರಿಷ್ಕೃತ ದ್ವಿತೀಯ ಮುದ್ರಣ : 2017
ಪರಿಷ್ಕೃತ ತೃತೀಯ ಮುದ್ರಣ : 2020

ISBN No. : **978-93-5419-761-1**

ಪ್ರತಿಗಳು : 1000

ಪುಟಗಳು : **XXXIV+88+02=124**

ದರ : ರೂ. 120/-

ಅಳತೆ : ಕ್ರೌನ್ 1/8

ಬಳಸಿದ ಕಾಗದ : 70 ಜಿ.ಎಸ್.ಎಮ್. ಮ್ಯಾಪಲಿಥೋ

ಮುದ್ರಣ : : ಐಶ್ವರ್ಯ ಪ್ರಿಂಟಿಂಗ್ ಪ್ರೆಸ್
ಡಾ॥ ಬಿ. ಆರ್. ಅಂಬೇಡ್ಕರ ಸರ್ಕಲ್, ಕೊಪ್ಪಳ.
ಮೊ: 8147348440, 9448300070

ಅರ್ಪಣೆ :

ಶ್ರೀ ಜಯರಾಜ್ ಕಮತರ ವಕೀಲರು

ಮತ್ತು ಶ್ರೀಮತಿ ವೀಣಾ ಜಯರಾಜ್

ಸಾ॥ ಕೊಪ್ಪಳ.

ಗ್ರಂಥ ದಾನಿಗಳು



ಶ್ರೀ ಸಿ. ವಿ. ಚಂದ್ರಶೇಖರ

ರಾಜಕೀಯ ಧುರೀಣರು, ಕೊಪ್ಪಳ

ಮುನ್ನುಡಿ (ಪರಿಷ್ಕೃತ ತೃತೀಯ ಮುದ್ರಣಕ್ಕೆ)

ಆತ್ಮೀಯ ಕಿರಿಯ ಮಿತ್ರ ಡಾ. ಸಿದ್ಧಲಿಂಗಪ್ಪ ಕೊಟ್ನೆಕಲ್ ಅವರು ತಮ್ಮ 'ಸಂಸಾರ ಸಗ್ಗ'ದ ಮೂರನೆಯ ಆವೃತ್ತಿಯನ್ನು ಹೊರತರುತ್ತಿರುವುದು ಸಂತಸದ ಸಂಗತಿ; ಈ ಮೊದಲಿನ ಪ್ರಕಟಿತ ಕೃತಿಗಳಲ್ಲಿ ಕೆಲವು ತಮ್ಮ ಮನೆಯ ದಿನನಿತ್ಯದ ಮಾತುಗಳಲ್ಲಿ ಅಡಗಿರುವ ಮುಗುಳ್ನಗೆ ಸೂಸುವ ಸಂಗತಿಗಳನ್ನು ಓದಿದಾಗ ಹೀಗೂ ಬರೆಯಲೂ ಸಾಧ್ಯವೇ? ಎಂದು ಅಚ್ಚರಿ ಪಟ್ಟಿದ್ದೆ, ಆದರೆ ಅದೇ ಕೃತಿಯನ್ನು ಮೂರನೆಯ ಆವೃತ್ತಿಗೆ ಪ್ರಕಟಿಸಲು ಸಿದ್ಧಪಡಿಸಿಕೊಂಡು ಅದಕ್ಕೆ ಮತ್ತೆ ಹದಿನಾಲ್ಕು ಹೊಸ ಹಾಸ್ಯ ಸಂಗತಿಗಳನ್ನು ಸೇರಿಸುವ ಹಸ್ತ ಪ್ರತಿಯೊಂದಿಗೆ ನನಗೆ ಮೂರನೆಯ ಮುನ್ನುಡಿ ಬರೆಯಲು ಸಿದ್ಧಲಿಂಗಪ್ಪನವರು ಕೊಟ್ಟಾಗ ಈಗಾಗಲೇ ಇಷ್ಟು ಜನಪ್ರಿಯವಾದ ಈ ಕೃತಿಗೆ ಓದುಗರೆ ಮೆಚ್ಚುಗೆಯ ಮುನ್ನುಡಿ ನೀಡಿರುವಾಗ ಅದಕ್ಕೆ ನನ್ನ ಮುನ್ನುಡಿಯ ಅಗತ್ಯವಿದೆಯೆ? ಎನ್ನಿಸಿತು. ಈ ಹಿಂದಿನ ಪ್ರಥಮ ಆವೃತ್ತಿಗೆ ಕನ್ನಡ ಭಾಷೆ ಮತ್ತು ಅನುವಾದ ಅಧ್ಯಯನ ವಿಭಾಗ ದ್ರಾವಿಡ ವಿಶ್ವವಿದ್ಯಾಲಯ ಆಂಧ್ರಪ್ರದೇಶ ಕುಪ್ಪಂನ ಪ್ರಾಧ್ಯಾಪಕಿ ಡಾ. ಕೆ. ಶಾರದಾರವರು ಮತ್ತು ಪರಿಷ್ಕೃತ ದ್ವಿತೀಯ ಮುದ್ರಣಕ್ಕೆ ಸ್ನೇಹಿತರಾದ ಬಂಡಾಯ ಸಾಹಿತಿ ಪ್ರೊ. ಅಲ್ಲಮಪ್ರಭು ಬೆಟ್ಟದೂರವರು ತುಂಬಾ ಮೆಚ್ಚುಗೆಯ ಮುನ್ನುಡಿ ಬರೆದಿದ್ದಾರೆ. ಆದರೂ ಡಾ. ಸಿದ್ಧಲಿಂಗಪ್ಪ ಕೊಟ್ನೆಕಲ್‌ರವರ ಪ್ರೀತಿಯ ಆಗ್ರಹವನ್ನು ನಿರಾಕರಿಸಲಿಕ್ಕಾಗದೆ ಮತ್ತೊಮ್ಮೆ ಎಲ್ಲವನ್ನೂ ಗಮನವಿಟ್ಟು ಓದಿದೆ.

ತಮ್ಮ ಕುಟುಂಬದಲ್ಲಿ ನಿತ್ಯ ನಡೆಯುವ ಮಾತುಕತೆಗಳಲ್ಲಿಯೇ ಅಡಗಿದ್ದ ಹಾಸ್ಯವನ್ನು ಈ ರೀತಿ ಬರೆದು ಹೊರ ಹಾಕಬೇಕಾದರೆ ಆ ಬರಹಗಾರನಿಗೆ ನಿಜಕ್ಕೂ ಮುಕ್ತವಾದ ಹೃದಯವಿರಬೇಕು; ಆತ್ಮ ವಿಮರ್ಶಿಸಿಕೊಳ್ಳುವ ಛಾತಿಬೇಕು. ಹೆಂಡರು

ಮಕ್ಕಳನ್ನು ಹೊಗಳುವ ಅಥವಾ ಕೆಲವೊಂದು ಸಂದರ್ಭದಲ್ಲಿ ತೆಗಳಿ ವಿಮರ್ಶಿಸಿ ಬುದ್ಧಿ ಹೇಳಿದಾಗ ಅಂತಃಕಲಹ ಉಂಟಾಗಿ ವೈಮನಸ್ಸು ಬೆಳೆದು ಕುಟುಂಬದ ಸ್ವಾಸ್ಥ್ಯಕ್ಕೇನೆ ಆತಂಕ ಉಂಟಾಗಬಹುದು. ಉದಾಹರಣೆಗೆ ನೋಡುವುದಾದರೆ ಪ್ರಸಂಗ ಒಂಬತ್ತರಲ್ಲಿ "ಲೇ ಮಗನೆ ಅಳಬೇಡ ನಿಮ್ಮಮ್ಮ ಮಠಕ್ಕೆ ಹೋಗ್ತಾಳೆ, ಮಠದ ಹಿಂದಕ್ಕಲ್ಲ" ಎನ್ನುವ ಮಾತಿನಲ್ಲಿ ಸುಡುಗಾಡಿಗಲ್ಲ ಎನ್ನುವ ಅರ್ಥ ಅಡಗಿದೆ. ಅದೇ ರೀತಿ 29ನೇ ಪ್ರಸಂಗ "ಎಮ್ಮೆ ಹಿಂದೆ ಕೋಣಗರ" ಎನ್ನುವ ಶೀರ್ಷಿಕೆ ಅಡಿಯಲ್ಲಿ ಮಗ ತಾಯಿಯ ಹಿಂದೆ ತಿರುಗುವುದನ್ನು ತಂದೆ ಗೇಲಿ ಮಾಡುತ್ತ "ಅಂಗ್ಯಾಕ ಅವನು ಯಾವಾಗ್ಲೂ ಅಮ್ಮನ ಹಿಂದೆ ತಿರುಗ್ತಾ ಇರ್ತಾನ" ಎಂದು ಹೆಂಡತಿಗೆ ಪ್ರಶ್ನೆ ಕೇಳಿದಾಗ

ಹೆಂಡತಿ:– ಆಕಳ ಹಿಂದೆ ಕರು ಇದ್ದಂಗ

ಗಂಡ:– ಅಲ್ಲೋ ಅದು ಎಮ್ಮೆ ಹಿಂದೆ ಕೋಣಗರನಂತೆ ತಿರುಗುತ್ತಾನ.
ಎಂದು ಉತ್ತರಿಸಿದ ಮಾತನ್ನು ಸೂಕ್ಷ್ಮವಾಗಿ ಗಮನಿಸಿದಾಗ ಇಲ್ಲಿ ಎಮ್ಮೆಯ ಹಿಂದೆ ಕೋಣಗರ ಎನ್ನುವ ಮಾತು ಅಪಾರ್ಥಕ್ಕೂ ಎಡೆ ಮಾಡಿಬಿಡಬಹುದು.

ಇಂಥದ್ದನ್ನೆಲ್ಲ ಓದಬಲ್ಲ ಹೆಂಡತಿಯರಿದ್ದಾಗ ಸಮಸ್ಯೆ ಉಂಟಾಗಲಾರದೆ? ಎನ್ನುವ ಪ್ರಶ್ನೆ ನನ್ನನ್ನು ಕಾಡಿದಾಗ ಮಿತ್ರ ಸಿದ್ಧಲಿಂಗಪ್ಪನವರಿಗೆ ಕೇಳಿದೆ "ಅಂಥ ಯಾವ ಸಮಸ್ಯೆಯೂ ನಿಮ್ಮ ಕುಟುಂಬದಲ್ಲಿ ಇದು ಪ್ರಕಟವಾದಾಗ ಬರಲಿಲ್ಲವೆ?" ಎಂದು, ಅದಕ್ಕೆ ಅವರು ಉತ್ತರಿಸಿದ್ದನ್ನು ಕೇಳಿದಾಗ ನನ್ನ ಊಹೆ ಸರಿಯಾಗಿತ್ತು. ಪುಸ್ತಕ ಬಿಡುಗಡೆಯಾದ ನಂತರ ಅದನ್ನು ಓದಿದ ಕೆಲವರು ಅವರ ಶ್ರೀಮತಿಯವರಿಗೆ ಈ ಕುರಿತು ಹೇಳಿದ್ದರಿಂದ ಮುಗ್ಧ ಹೃದಯದ ಅವರು ಅತ್ತು ರಂಪ ಮಾಡಿ ತಮ್ಮ ತಂದೆಯವರೆಗೆ ಪ್ರಕರಣ ಹೋದಾಗ ಅವರು ಮಗಳಿಗೆ ಅದೆಲ್ಲ ಸಾಹಿತ್ಯದಲ್ಲಿ ಹಾಗೆ ಬರೆದಿರುತ್ತಾರೆ, ಅಂಥದ್ದನ್ನು

ಹಚ್ಚಿಕೊಳ್ಳಬಾರದು ನಿನ್ನ ಗಂಡ ಸಾಹಿತಿಯಾದ ಬಗ್ಗೆ ಅಭಿಮಾನ, ಹೆಮ್ಮೆ ಪಡಬೇಕೆಂದು ಬುದ್ಧಿವಾದ ಹೇಳಿದಾಗ ಸಮಸ್ಯೆ ಬಗೆ ಹರಿದಿದೆ.

ಎರಡು ಆವೃತ್ತಿಯಲ್ಲಿರುವ 136 ಪ್ರಸಂಗಗಳು ಮತ್ತು ಹೊಸದಾಗಿ ಪ್ರಸ್ತುತ ಪ್ರಕಟಣೆಗೆ ಸೇರಿರುವ 14 ಪ್ರಸಂಗಗಳು ಹೀಗೆ ಒಟ್ಟು 150 ಪ್ರಸಂಗಗಳೆಲ್ಲ ಮನೆಯ ಸುತ್ತಲೇ ನಡೆದವುಗಳೇ ಹೊರತು ಬೇರೆಯಾವುದೇ ನಗೆಚಟಾಕಿಯನ್ನು ತಂದು ಸೇರಿದವುಗಳಲ್ಲ. ಆದರೂ ಇವು ಬಹುತೇಕ ನಗೆ ಚಟಾಕಿಗಳಿಗೆ ಹೋಲಿಕೆಯಾಗುತ್ತವೆ. ಉದಾಹರಣೆಗೆ ಹೊಸ ಸೇರ್ಪಡೆಯ 3ನೇ ಪ್ರಸಂಗ (ಪ್ರಸಂಗ 139) "ಡ್ರಿಂಕ್ಸ್ ಕುಡಿತಾರಲ್ಲಾ ಹೆಂಗಿರ್‍ತಾದಾ?" ಎನ್ನುವುದರಲ್ಲಿ, ಹೆಂಡತಿ ಟಿ.ವಿ.ಯಲ್ಲಿ ಡ್ರಿಂಕ್ಸ್ ಪಾರ್ಟಿ ಮಾಡುವುದನ್ನು ತದೇಕ ಚಿತ್ತದಿಂದ ನೋಡುತ್ತಿರುವುದನ್ನು ಗಮನಿಸಿ ಗಂಡ "ಅದೇನು? ಅವರು ಕುಡಿಯುವುದನ್ನು ಅಷ್ಟು ಆಸಕ್ತಿಯಿಂದ ನೋಡ್ತಾ ಇದ್ದಿ?" ಎಂದು ಪ್ರಶ್ನಿಸಿದಾಗ, ಹೆಂಡ್ತಿ: ಇಲ್ಲಾ ಅವರು ಅಷ್ಟು ರುಚಿಮಾಡಿ ಕುಡ್ಯಾಕ ಹತ್ಯರಲ್ಲಾ ಅದ್ಕೆ ನೋಡಾಕ ಹತ್ತಿನಿ ಎಂದುತ್ತರಿಸಿದ್ದಕ್ಕೆ "ಅದಕ್ಕೆನೀಗಾ?" ಎಂದು ಮರು ಪ್ರಶ್ನೆ ಹಾಕಿದ್ದರಲ್ಲಿ, ನೀನೂ ಕುಡಿಯಬೇಕಂತಿಯಾ ಎನ್ನುವ ಭಾವವಿದೆಯಾದರೂ ಹೆಂಡ್ತಿ; ಅಲ್ಲಾ ಅವರು ರುಚಿರುಚಿ ಮಾಡಿ ಕುಡ್ಯಾಕ ಅತ್ಯರಲ್ಲಾ ಅದು ಸಿಹಿ ಇರ್‍ತಾದಾ? ಎಂದು ಕೇಳುತ್ತಾಳೆ. ಅದಕ್ಕೆ ಲೇಖಕರ ಪ್ರಾಮಾಣಿಕ ಉತ್ತರ "ನಂಗೇನು ಗೊತ್ತು?", ಈ ಮಾತಿನ ಹಿಂದೆ ನಾನು ಕುಡಿಯುವವನಲ್ಲ ಅದರ ರುಚಿ ನನಗೆ ಗೊತ್ತಿಲ್ಲ ಎನ್ನುವ ಭಾವ ಅಡಗಿದೆ. ಇದೇ ಜೋಕನ್ನು ನಾನು ಬೇರೆ ರೀತಿಯಲ್ಲಿ ಓದಿದ್ದ ನೆನಪಾಯಿತು.

ಹೀಗೆಯೇ ಟಿ.ವಿ.ಯ ದೃಶ್ಯ ನೋಡಿ ಅದನ್ನು ಕುಡಿಯ ಬಯಸಿದ ತನ್ನ ಹೆಂಡತಿಗೆ ಒಮ್ಮೆ ವಿಸ್ಕಿ ಕುಡಿಸಿದ ಗುಂಡ
ಹೆಂಡ್ತಿ: ಏನ್ರಿ ಇದು ಎಂಥ ಕಹಿ ಮತ್ತು ಘಾಟು ವಾಸನೆಯಿದೆ?
ಗುಂಡ: ನೋಡಿದೆಯಾ ನೀನು ಒಂದು ಗುಟುಕು ಕುಡಿಯಲಿಕ್ಕೆ ಇಷ್ಟು

ಕಷ್ಟಕಟ್ಟೆ, ನಾನು ನಿನ್ನನ್ನು ಮದುವೆಯಾದ ಸಂಕಟಕ್ಕೆ ಇಲ್ಲಿಯವರೆಗೆ ಇದೇ ರೀತಿ ದಿನನಿತ್ಯ ಕಷ್ಟಪಟ್ಟು ಕಂಠದವರೆಗೆ ಬರುವಂತೆ ಕುಡಿಯುತ್ತೇನೆ ಸಂಕಟ ಮರೆಯಲು, ಅಂದಾಗ ನನ್ನ ಗತಿ ಹೇಗಿರಲಿಕ್ಕಿಲ್ಲ?

ಈ ನಗೆ ಚಟಾಕೆ ಒಂದು ಅಸ್ತವ್ಯಸ್ತ ಬದುಕಿನದಾದರೆ, ಸಿದ್ಧಲಿಂಗಪ್ಪನವರು ನಿರೂಪಿಸಿದ ಪ್ರಸಂಗಗಳು ಆರೋಗ್ಯ ಪೂರ್ಣ ಬದುಕಿನದಾಗಿವೆ. ಇಲ್ಲಿರುವ ಎಲ್ಲಾ ಪ್ರಸಂಗಗಳಿಗೆ ದ್ವಂದ್ವಾರ್ಥ ಮತ್ತು ಅಶ್ಲೀಲದ ಲೇಪವಿಲ್ಲದೆ ಆರೋಗ್ಯ ಪೂರ್ಣ ನಸುನಗೆ ಸೂಚಿಸಿ ಹೃದಯ ಹಗುರಾಗಿಸಿಕೊಳ್ಳುವವುಗಳಾಗಿವೆ. ಹಾಗಾಗಿ ಇದು ಸ್ವಾಗತಾರ್ಹವಾಗಿದೆ. ಇದನ್ನು ಗಮನಿಸಿದಾಗ ಟಿ.ವಿ.ಯಲ್ಲಿ ಬರುತ್ತಿದ್ದ ಹಾಸ್ಯ ಧಾರವಾಹಿ 'ಪಾಪಾ ಪಾಂಡು'ವಿನ ನೆನಪು ಬರುತ್ತದೆ. ಒಟ್ಟಾರೆಯಾಗಿ ಹಾಸ್ಯ ಕಲಾವಿದರು ಹೇಳುವಂತೆ ನಮ್ಮ ಸುತ್ತಮುತ್ತಲಿನವರ ಮಾತುಗಳಲ್ಲಿಯೇ ಹಾಸ್ಯ ಅಡಗಿರುತ್ತದೆ. ಅದನ್ನು ನಾವು ಗುರುತಿಸಿ ಹೊರ ತೆಗೆಯಬೇಕಷ್ಟೆ ಎಂದಂತೆ, ಡಾ. ಸಿದ್ಧಲಿಂಗಪ್ಪ ಕೊಟ್ನೆಕಲ್‌ರವರು ನಿತ್ಯ ತಮ್ಮ ಮನೆಯಲ್ಲಿಯೇ ನಡೆದ ಹೆಂಡರು–ಮಕ್ಕಳ ಸಾಂಸಾರಿಕ ಬದುಕಿನ ಮಾತುಗಳಲ್ಲಿ ಬರುವುದನ್ನೆಲ್ಲ ಹಾಸ್ಯಕ್ಕೆ ಪರಿವರ್ತಿಸಿ 'ಸಂಸಾರ ಸಗ್ಗ' ಕೃತಿ ರಚಿಸಿದ್ದಾರೆ. ಸಂಸಾರವನ್ನು ಕಗ್ಗವಾಗಿಸಿಕೊಂಡು ಒದ್ದಾಡುವುದಕ್ಕಿಂತ ಎಲ್ಲವನ್ನು ಸರಳವಾಗಿಸಿಕೊಂಡು ಅದನ್ನು ಸಗ್ಗವಾಗಿಸಿಕೊಳ್ಳುವ ಬದುಕೆ ಒಂದು ಅಪೂರ್ವವಾದ ಸಂಗತಿ. ಇದೇ ನಿಜವಾದ ಸಂಸಾರದ ಸವಿ ಅನುಭವಿಸಲು ಸೋಪಾನ. ಈ ರೀತಿಯ ಸಂಸಾರವಿದ್ದರೆ ಗೃಹಸ್ಥನಾಗಿರುವುದೇ ಲೇಸು, ಅದು ಸಗ್ಗ ಹೋಗಿ ಕಗ್ಗವಾದರೆ ಸನ್ಯಾಸಿಯಾಗುವುದೇ ಲೇಸು ಎಂದಂತೆ ಈ ರೀತಿಯ ಬದುಕನ್ನು ರೂಪಿಸಿಕೊಳ್ಳಲು ಈ ಕೃತಿ ಸಹಕಾರವಾಗುವ ಕಾರಣಕ್ಕಾಗಿ ಇದನ್ನು ಎಲ್ಲರೂ ಕೊಂಡು ಓದಿ, ಹೃದಯ ಹಗುರವಾಗಿಸಿಕೊಂಡು

ಲೇಖಕರಿಗೆ ಅಭಿನಂದಿಸುತ್ತಾರೆಂಬ ಭರವಸೆಯಿದೆ. ಈಗಾಗಲೇ ಕೊಪ್ಪಳ ಜಿಲ್ಲೆಯ ಶಾಸನಗಳು ಮತ್ತು ಸಾಂಸ್ಕೃತಿಕ ಇತಿಹಾಸ, ಮಾನವಿ ತಾಲೂಕಿನ ಇತಿಹಾಸ ಮತ್ತು ಸಂಸ್ಕೃತಿ, ತುಂಗಾಲಹರಿ, ಮಾನ್ವಿಯ ಮಹನೀಯರು, ಸಮಕಾಲಿನ ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ ಮುಂತಾದ ಸ್ವತಂತ್ರ ಮತ್ತು ಸಂಪಾದಿತ ಕೃತಿಗಳನ್ನು ರಚಿಸಿರುವ ಡಾ. ಸಿದ್ಧಲಿಂಗಪ್ಪ ಕೊಟ್ನೆಕಲ್ ಅವರು ಸಾಹಿತ್ಯದಲ್ಲಿ ಸಾಕಷ್ಟು ಹೆಸರು ಮಾಡಿದವರಾಗಿ ಈ ಕೃತಿಯು ಆ ಸಾಲಿಗೆ ಸೇರಿದೆ.

–ವಿಠ್ಠಪ್ಪ ಗೋರಂಟ್ಲಿ

ಹಿರಿಯ ಸಾಹಿತಿಗಳು,

ಭಾಗ್ಯನಗರ

■■

ಮೂರು ಮಾತು (ಪರಿಷ್ಕೃತ ತೃತಿಯ ಮುದ್ರಣಕ್ಕೆ)

ಬದುಕಿನಲ್ಲಿ ಉಳಿದವುಗಳಿಗಿಂತ ಹಾಸ್ಯ ಬಹುಬೇಗ ಮನಸ್ಸಿಗೆ ಮುಟ್ಟುತ್ತದೆ ಮತ್ತು ನಿಲ್ಲುತ್ತದೆ. ಸಂಸಾರ ಸಾಗರದ ಜಂಜಾಟದಲ್ಲಿ ದುಃಖ ಉಣ್ಣುವುದೇ ಜಾಸ್ತಿ, ಆದರೂ ದುಃಖ ದೂರ ಸರಿಸಿ, ಖುಷಿಯನ್ನು ಸ್ಮರಿಸಬೇಕು. ಆಗ ಮಾತ್ರ ಬದುಕು ಒಂದಿಷ್ಟು ಕಾಲ ಹೆಚ್ಚು ಸುಖಿಯಾಗಿರುತ್ತದೆ. ಅಂತಹ ಖುಷಿಯನ್ನು ಹಂಚುವ ಕಾರ್ಯವನ್ನು ಈ ಕೃತಿ ಮಾಡಲಿದೆ ಎಂಬುದು ನನ್ನ ಭಾವನೆ.

'ಸಂಸಾರ ಸಗ್ಗ' ಕೃತಿ ಓದಿದ ಪ್ರತಿಯೊಬ್ಬರು ನನ್ನನ್ನು ಅಭಿನಂದಿಸದೇ ಇರರು. ಅದರಲ್ಲಿ ವಿಶೇಷವಾಗಿ ಹೆಣ್ಣುಮಕ್ಕಳಂತೂ ಈ ಕೃತಿಯನ್ನು ಓದಿ "ಈ ಪ್ರಸಂಗಗಳು ನಮ್ಮ ಮನೆಯಲ್ಲಿಯೂ ನಡೆದಿವೆ. ಈ ಕೃತಿ ಓದುತ್ತಾ ಹೋದಾಗ ಹಿಂದೆ ಎಂದೊ ನಡೆದ ಘಟನೆ ನೆನಪಿಗೆ ಬರುತ್ತವೆ" ಎಂದು ಎಷ್ಟೋ ಹೆಣ್ಣುಮಕ್ಕಳು ನನ್ನ ಮುಂದೆ ಹೇಳಿದ್ದಾರೆ. "ಮನೆಯಲ್ಲಿ ನಡೆದ ಒಂದು ಚಿಕ್ಕ ಪ್ರಸಂಗವಾದರೂ ನೀವು ಕಟ್ಟಿ ಕೊಡುವ ಕಲೆ ಅದ್ಭುತ. ಒಂದು ಪ್ರಸಂಗದ ಹಿನ್ನೆಲೆಯನ್ನು ನೀವು ಚೆನ್ನಾಗಿ ನಿರೂಪಿಸಿದ್ದೀರಿ" ಎಂದು ಕೊಂಡಾಡಿರುವುದು ನನಗೆ ಕೊಂಚ ಮೇಲಕ್ಕೇರಿಸಿದೆ ಎಂದು ನಾನು ಭಾವಿಸಿದ್ದೇನೆ. ಹೀಗಾಗಿಯೇ ನಾನು ಈ ಸಗ್ಗವನ್ನು ಹೆಚ್ಚಾಗಿ ಹೆಣ್ಣುಮಕ್ಕಳಿಗೆ ಕೊಡುತ್ತಿದ್ದೆ. ಪುರುಷರಿಗೆ ಕೊಟ್ಟರೂ ಮನೆಯಲ್ಲಿ ಅಕ್ಕಂದಿರಿಗೆ ಓದಲು ಕೊಡಿ ಎಂದು ಹೇಳುತ್ತಿದ್ದೆ.

2014ರಲ್ಲಿ ಈ ಸಂಸಾರ ಸಗ್ಗವನ್ನು ಮೊದಲ ಮುದ್ರಣ (1 ರಿಂದ 121 ಪ್ರಸಂಗಗಳು) ಮಾಡಿಸಿದ್ದೆ. ಅದರಲ್ಲಿ ಒಚಿದಿಷ್ಟು ಗ್ರಂಥಾಲಯಕ್ಕೆ ಆಯ್ಕೆಯಾದವು. ಉಳಿದ ಪುಸ್ತಕಗಳು ಬೇಗ ಖಾಲಿಯಾದವು. ಮೊದಲನೇ ಮುದ್ರಣದ ನಂತರ ಮತ್ತೂ ಕೆಲ ಹಾಸ್ಯ ಪ್ರಸಂಗಗಳು ನಮ್ಮ ಮನೆಯಲ್ಲಿ ಘಟಿಸಿದವು. ಅವುಗಳನ್ನೊಳಗೊಂಡು ಪುನಃ 2017ರಲ್ಲಿ ಎರಡನೆ ಪರಿಷ್ಕೃತ

ಮುದ್ರಣ (122 ರಿಂದ 136 ಪ್ರಸಂಗಗಳು ಸೇರ್ಪಡೆ ಮಾಡಿ) ತಂದರೂ ಎರಡು ವರ್ಷದಲ್ಲಿ ಒಂದೂ ಪ್ರತಿ ಇಲ್ಲದಂತೆ ಖಾಲಿಯಾದವು. ಈ ಪುಸ್ತಕ ಬೇಡಿಕೆ ಎಷ್ಟಿತ್ತೆಂದರೆ ನನ್ನ ವಿದ್ಯಾರ್ಥಿಗಳಿಗೆ ಕೊಡುವಾಗ ನಾಲ್ಕಾರು ವಿದ್ಯಾರ್ಥಿಗಳಿಗೆ ಒಂದು ಕೃತಿಯಂತೆ ಕೊಟ್ಟರೂ ತೆಗೆದುಕೊಳ್ಳುತ್ತಿರಲಿಲ್ಲ. "ಇಲ್ಲ ಸರ್ ನಮಗೆ ಒಬ್ಬೊಬ್ಬರಿಗೆ ಒಂದೊಂದು ಪುಸ್ತಕ ಬೇಕು, ಅದು ಅಷ್ಟು ಹಾಸ್ಯವಾಗಿದೆ. ಓದುವುದಕ್ಕೆ ಖುಷಿ ಎನಿಸುತ್ತದೆ" ಎಂದು ಹಠ ಹಿಡಿದು ಒಬ್ಬೊಬ್ಬರು ಒಂದೊಂದು ಪುಸ್ತಕ ಪಡೆದುಕೊಳ್ಳುತ್ತಿದ್ದರು. ಹೀಗಾಗಿ ಎರಡನೇ ಮುದ್ರಣದ ಎಲ್ಲಾ ಪ್ರತಿಗಳು ಖಾಲಿಯಾದವು. ಅದಕ್ಕಾಗಿ ಮೂರನೇ ಮುದ್ರಣದ ಯೋಚನೆ ಮಾಡುವಂತಾಯಿತು. ಎರಡನೇ ಮುದ್ರಣ ಕಂಡ ನಂತರವೂ ನಮ್ಮ ಮನೆಯಲ್ಲಿ ಇನ್ನೂ ಕೆಲ ಹಾಸ್ಯ ಪ್ರಸಂಗಗಳು ನಡೆದವು. ಅವುಗಳನ್ನೂ ಸೇರಿಸಿ ಒಟ್ಟು 150 ಪ್ರಸಂಗಗಳೊಂದಿಗೆ (137 ರಿಂದ 150 ಪ್ರಸಂಗಗಳು) ಮೂರನೆ ಮುದ್ರಣವನ್ನು ಹೊರತರುತ್ತಿದ್ದೇನೆ.

ಈ ಕೃತಿಯನ್ನು ಪ್ರಕಟಿಸಲು ಸಹಕಾರ ನೀಡಿದ ಉಪನ್ಯಾಸಕ ಮಿತ್ರರಾದ ಶ್ರೀ ರಾಜು ಹೊಸಮನಿ, ಶ್ರೀ ಅರುಣ ಎ.ಜಿ, ಡಾ. ಕರಿಬಸವೇಶ್ವರ, ಡಾ. ಶಶಿಕಾಂತ ಉಮ್ಮಾಪುರೆ, ಶ್ರೀ ವಿನೋದ ಸಿ.ಎಂ, ಶ್ರೀ ವೆಂಕಟೇಶ ನಾಯ್ಕ, ಸಂಗಮೇಶ ಬೇವಿನಗಿಡದ, ಶಿವಯ್ಯ ಎನ್.ಬಿ, ಮಾರುತಿ ಗುರಿಕಾರ, ಮಂಜುನಾಥ ಬಡಿಗೇರ, ಪುಂಡಲೀಕರಡ್ಡಿ ಆರ್.ಬಿ, ಶಿವನಗೌಡ ಪೋಲಿಸ ಪಾಟೀಲ್, ರಮೇಶ ದೊಡ್ಡವಾಡ, ಶ್ರೀಧರ ಎಸ್ ವಾಣಿ, ಪ್ರದೀಪ ಪಲ್ಲೇದರವರಿಗೆ ಧನ್ಯವಾದಗಳು. ಕಛೇರಿ ಸಿಬ್ಬಂದಿಗಳಾದ ಶ್ರೀ ಅರುಣ ಪಾಟೀಲ್, ಶ್ರೀ ಮಾನಪ್ಪ ಕಮ್ಮಾರ, ಶ್ರೀ ಅಶೋಕ ಗೋಗಿ, ಶ್ರೀ ವೀರೇಶ ಕವಳಕೇರಿ, ಶ್ರೀ ಗವಿಸಿದ್ದಪ್ಪ ಕಡೇಮನಿ, ಕುಮಾರಸ್ವಾಮಿ ನಾಯಕ, ಶ್ರೀ ಶಫಿ ಸರದಾರವರಿಗೆ ಕೃತಜ್ಞತೆಗಳು.

ವಿದ್ಯಾರ್ಥಿ ಮಿತ್ರರಾದ ಗೀತಾ ಕಸ್ತೂರಿ, ಪಾರ್ವತಿ ಮೆಳ್ಳಿಕೇರಿ, ಗೀತಾ ಹಿರೇಮಠ, ವೀಣಾ ಹಡಪದ, ನಿವೇದಿತಾ

ಅಂಡಗಿ, ವೀಣಾ ವಿ. ಚೆಲ್ಲಾ, ಶರಣಪ್ಪ ಉಚ್ಚಲಕುಂಟೆ, ಮಂಜುನಾಥ ಮೇಟಿ, ಕೆ. ಗಂಗಾ, ದೇವಮ್ಮ, ರಹಿಮಸಾಬ್ ಆರ್.ಗಂಗನಾಳ, ಲಕ್ಷ್ಮಿ ಪಿ. ಬನ್ನಿಮಠ, ಪವಿತ್ರ ಎ.ಕೆ, ಪೂಜಾ ಕೂಕನಪಳ್ಳಿ, ನಿರ್ಮಲಾ ಪಿ.ಕೆ, ರಕ್ಷಿತಾ ಕೆ.ಸಿ, ಜಗದೀಶ ಕನಕಾಪೂರ, ವಿರುಪಾಕ್ಷಿ ಜಿ, ರಮೇಶ ಎಸ್. ಹಿರೆಖೇಡ, ಪ್ರೇಮಾ ಚವ್ಹಾಣ, ಸುಪ್ರಿತಾ ಮೇಟಿ, ಪವಿತ್ರಾ ಎಸ್. ಕುದರಿರವರ ಸಹಕಾರಕ್ಕೆ ಧನ್ಯವಾದಗಳು.

ಈ ಮೂರನೆ ಮುದ್ರಣದ ಕೃತಿಗೆ ಮುನ್ನುಡಿ ಬರೆದ ಶ್ರೀ ವಿಠ್ಠಪ್ಪ ಗೋರಂಟ್ಲಿ ಹಾಗೂ ಬೆನ್ನುಡಿ ಬರೆದ ಶ್ರೀ ಬಸವರಾಜ ಆಕಳವಾಡಿ ಹಾಗೂ ಗ್ರಂಥದಾನಿಗಳಾದ ಶ್ರೀ ಸಿ. ವ್ಹಿ. ಚಂದ್ರಶೇಖರ ರಾಜಕೀಯ ಧುರೀಣರು, ಕೊಪ್ಪಳ ಇವರಿಗೆ ಅನಂತ ಧನ್ಯವಾದಗಳು. ಜೊತೆಗೆ ಈ ಕೃತಿಯನ್ನು ಪ್ರಕಟಿಸುವದಕ್ಕಾಗಿ ಸಾಲದ ರೂಪದಲ್ಲಿ ಧನಸಹಾಯ ನೀಡಿದ ಕೊಪ್ಪಳದ ತಿರುಳ್ಗನ್ನಡ ಸಾಹಿತಿಗಳ ಸಹಕಾರ ಸಂಘಕ್ಕೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

–ಡಾ. ಸಿದ್ದಲಿಂಗಪ್ಪ ಕೊಟ್ನೆಕಲ್
ಕನ್ನಡ ಉಪನ್ಯಾಸಕರು, ಕೊಪ್ಪಳ

■■

ಮುನ್ನುಡಿ (ಪರಿಷ್ಕೃತ ದ್ವಿತೀಯ ಮುದ್ರಣ)

ಡಾ. ಸಿದ್ಧಲಿಂಗಪ್ಪ ಕೊಟ್ನೆಕಲ್‌ರವರ 'ಸಂಸಾರ ಸಗ್ಗ' ಎಂಬ ನಗೆಹನಿಗಳ ಸಂಕಲನ ಎರಡನೆಯ ಮುದ್ರಣ ಕಾಣುತ್ತಿದೆ. ನಗಿಸುವ ಕಾರ್ಯಕ್ರಮಗಳಿಗೆ ಆಧುನಿಕ ಕಾಲದಲ್ಲಿ ಜನಪ್ರಿಯತೆ ಪ್ರಾಪ್ತವಾಗಿದೆ. ಜನ ಏನನ್ನೂ ಸ್ವಂತ ಬುದ್ಧಿಯಿಂದ ಮಾಡುತ್ತಿಲ್ಲ. ಜನರಲ್ಲಿ ರಸಿಕತೆಯೂ ಕಡಿಮೆಯಾಗಿದೆ. ಹೀಗಾಗಿ ವಯಾಗ್ರದ ಮೊರೆ ಹೋಗುತ್ತಿದ್ದಾರೆ.

ಜೀವನದಲ್ಲಿ ಹಾಸ್ಯವಿದೆ. ಅದನ್ನು ಗುರುತಿಸುವ, ಅನುಭವಿಸುವ ಮನೋಧರ್ಮದ ಅಗತ್ಯವಿದೆ. ಇಲ್ಲಿಯ ನಗೆಹನಿಗಳಲ್ಲಿ ಗಂಡ–ಹೆಂಡತಿ–ಮಕ್ಕಳ ಸುತ್ತ ಗಿರಕಿ ಹೊಡೆಯುವದನ್ನು ಕಾಣುತ್ತೇವೆ. ಅನುಭವದ ವ್ಯಾಪ್ತಿ ವಿಸ್ತರಿಸಿದಂತೆ ಅದರ ಕ್ಷೇತ್ರ ದೊಡ್ಡದಾಗಬಹುದು.

ರಾಯಚೂರು ಭಾಷೆಯಲ್ಲಿ ವಿಶೇಷವಾಗಿ ಗ್ರಾಮೀಣ ಭಾಷೆಯಲ್ಲಿ ಬಹುವಚನವಿಲ್ಲ. ಗಂಡ–ಹೆಂಡತಿ ಸರಸ, ವಿನೋದಲ್ಲಿಯೇ ಇರಲಿ, ಜಗಳವಾಡುತ್ತಿರಲಿ ಏಕವಚನ ಬಳಸಿ ನಾನು–ನೀನು ಎಂದು ಪರಸ್ಪರರನ್ನು ಉದ್ಧೇಶಿಸಿ ಹೇಳುವಾಗ ಸಾಮಾನ್ಯವಾಗಿ ಬಳಸುತ್ತಾರೆ. ಉತ್ತರ ಕರ್ನಾಟಕದಲ್ಲಿ ಗಂಡನನ್ನು ಹೆಂಡತಿ ಉದ್ಧೇಶಿಸಿ ಮಾತಾಡುವಾಗ ಬಹುವಚನ ಬಳಸಿ 'ನೀವು' ಎಂದು ಹೇಳುತ್ತಾರೆ. ಆದರೆ ಗಂಡ ಅಪ್ಪಿ ತಪ್ಪಿಯೂ ಬಹುವಚನ ಬಳಸುವುದಿಲ್ಲ. ನಾಗರಿಕ ಜಗತ್ತಿನ ಗಂಡ–ಹೆಂಡತಿಯರೂ ಇದೇ ಸೂತ್ರದಡಿಯಲ್ಲಿ ಬರುತ್ತಾರೆ.

ರಾಯಚೂರು ಭಾಷೆಯ ಸತ್ವವನ್ನು, ಅದರ ವಿಶೇಷತೆಯನ್ನು ಮಾನ್ವಿ ನರಸಿಂಗರಾವ್ ಗುರುತಿಸಿದ್ದಾರೆ. ಹೈದ್ರಾಬಾದ್ ಕರ್ನಾಟಕ ಭಾಗದ ಭಾಷಾದೋಷದ ಬಗ್ಗೆ ಹೇಳುವಾಗ 'ಅ'ಕಾರ ಇದ್ದಲ್ಲಿ

'ಹ'ಕಾರ, 'ಹ'ಕಾರ ಇದ್ದಲ್ಲಿ 'ಅ'ಕಾರ ಬಳಸುವುದು ಸರ್ವೆ ಸಾಮಾನ್ಯ ಸಂಗತಿ. ಆಡುಮಾತಿನಲ್ಲಿ ಎಂಥ ದೋಷವು ಮಾನ್ಯ. ಆದರೆ ಗ್ರಾಂಥಿಕ ಭಾಷೆಯಲ್ಲಿ ಇದು ಸರಿಯಲ್ಲ. 'ಹೆಣ್ಣುಮಕ್ಕಳು' ಎನ್ನುವ ಗ್ರಾಂಥಿಕ ಶಬ್ದ ಆಡುಮಾತಿನಲ್ಲಿ 'ಎಣಮಕ್ಕಳು' ಆಗುತ್ತದೆ. ಜಾನಪದ ಕಾವ್ಯವೆಲ್ಲಾ ಆಡುಮಾತಿನಲ್ಲೇ ಬರೆದದ್ದು. ಆಡುಮಾತಿಗಿರುವ ಸತ್ವ ಗ್ರಾಂಥಿಕ ಭಾಷೆಗಿಲ್ಲ. ಡಾ. ಸಿದ್ಧಲಿಂಗಪ್ಪ ಕೊಟ್ನೆಕಲ್‌ರವರ ನಗೆಹನಿಗಳಲ್ಲಿ ಗ್ರಾಂಥಿಕ ಹಾಗೂ ಆಡುಮಾತಿನ ಮಿಶ್ರಣವಿದೆ. ಅವರ ನಡೆನುಡಿಯಲ್ಲಿ ರಾಯಚೂರತನ ಎದ್ದು ಕಾಣುತ್ತದೆ. ಎಲ್ಲರನ್ನೂ ಆತ್ಮೀಯವಾಗಿ ಕಾಣುವುದು, ಸರಳತೆ, ಸಹಜತೆ ಎಲ್ಲವನ್ನು ಹೇಳಿಕೊಳ್ಳುವ ಮನೋಧರ್ಮ ಇವು ರಾಯಚೂರಿನ ಗುಣಗಳು.

ಈ ಕೃತಿಯಲ್ಲಿ 136 ನಗೆಹನಿಗಳಿವೆ. ಕೋಣ ಓದು, ಏಳರಿಂದ ಹತ್ತುಗಂಟೆ ನಾಲ್ಕೇತಾಸು, ಅಪ್ಪನಿಗೆ ಮದ್ವೆಮಾಡಬೇಕು, ನಿನ್ನಂಗ, ಬಂಗಾರ ಕೊಡಸ್ತಿದ್ಯಾ?, ನನ್ ಕಾಲೊತ್ತು, ತಲಿಮ್ಯಾಗ ಸುರ್ಕ, ಅಪ್ಪನ್ನೇ ಈ ತೊಟ್ಟಿಲದಾಗ ಹಾಕಿ ಹೋಗಾಮು, ನಾನು ಫೋಟೋದಾಗ ಇಲ್ವಲ್ಲಪ್ಪಾ, ಡುಮ್ಮಿಮಿಸ್, ಅಮ್ಮ ಒಳಗೆ ಇದ್ದಾಳ ಬಾ, ಎಲ್ರೂ ಅಳ್ತಿರ್ತರಲ್ಲಾ ಅದ್ಕೆ ನಾನೂ ಅಳ್ತೀನಿ, ನಿನ್ನ ಬಳ್ಳಾರಿ ಸೆಂಟ್ರಲ್ ಜೈಲಿಗೆ ಕಳುಹಿಸಬೇಕು, ಗಾಂಧಿತಾತ ಕೇಕ್ ಚಾಕಲೇಟ್ ಕೊಡ್ತಾನಾ? ಚಡ್ಡಿನ್ಯಾರು ನೋಡ್ತಾರ?, ಮಮ್ಮಿ ಹೊರಗ ನೆಲದ ಮ್ಯಾಲೆ ಚಿತ್ರ ಬಿಡಸಾಕತ್ಯಾಳ, ಮೊದಲು ಆದರ್ಶ ಹೆಂಡತಿ ಆಗು ಸಾಕು, ನಾನೇ ದಿಗಂಬರ ಆಗಿನಿ, ತಣ್ಣಗ ಮಾಡಬೇಕಾ?, ತಾಳಿ ತೋರಿಸ್ತಿನಿ, ನನ್ನ ಸೀರೆ ಇರದಿದ್ರೆ ನಿನ್ನ ಪ್ಯಾಂಟ್ ಎಲ್ಲಿರ್ತಿತ್ತು?, ಡಿಸ್ಟರ್ಬ ಮಾಡ್ಬೇಡಿ ನಾನು ಸೀರಿಯಸ್ ಆಗಿ ಓದ್ಬೇಕು, ಹಂದಿನ ಹಿಡ್ಯಾಕತ್ಯಾರ, ನಂದಾದೀಪ, ಅಂಗಳ ಕಸ ಬಳಿದು, ನೀರು ಹಾಕಿ ರಂಗೋಲಿ ಹಾಕು ಅಂದ್ರೆ?, ಮಿಸನ್ ಬಿಟ್ಟು ಎಲ್ರೂ ಇಷ್ಟಪಡ್ತಾರ, ಎಣ್ಣೆಮಜ್ಜನ ಮುಂತಾದ ನಗೆಹನಿಗಳು ಗಮನ ಸೆಳೆಯುತ್ತವೆ.

ವ್ಯಕ್ತಿ ವಿಮರ್ಶೆಗೊಳಗಾಗದಿದ್ದರೆ ತನ್ನ ಸರಿಯಾದ ವ್ಯಕ್ತಿತ್ವ ಗೊತ್ತಾಗದು. ಟೀಕೆ ಬಹುಮುಖ್ಯ, ಅದು ಹಾಸ್ಯ ಲೇಪಿತವಾದಾಗ ಸ್ವೀಕಾರರ್ಹವಾಗುತ್ತದೆ. ಗಾಂಧಿ ಜಯಂತಿ ದಿನ ಗಾಂಧಿತಾತ ಏನು ಕೊಡುತ್ತಾನೆ? ಎಂದು ಮಗು ಕೇಳಿದಾಗ ಗಾಂಧಿ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟಾನ ಎಂಬ ಮಾತು ಮಗುವಿಗೆ ತಿಳಿದೀತಾದರೂ ಹೇಗೆ? ಇಂಥ ಕೆಲವು ನಗೆಹನಿಗಳು ಗಹನವಾಗಿವೆ. ಈ ನಗೆಹನಿಗಳಲ್ಲಿ ಗಮನ ಸೆಳೆಯುವದು ಸಹಜ ವಾಸ್ತವಿಕ ಪ್ರಜ್ಞೆ ಹಾಗೂ ರಾಯಚೂರಿನ ಆಡು ನುಡಿ. 'ಗೌಡ್ರಗದ್ಲ' ಎಂಬ ಬಿ.ವಿ. ಈಶರ ನಾಟಕ ಮೊಟ್ಟಮೊದಲು ರಾಯಚೂರು ಭಾಷೆ ಬಳಸಿ ಗಮನ ಸೆಳೆಯಿತು. ಈ ನಗೆಹನಿಗಳಲ್ಲಿ ಗ್ರಾಂಥಿಕ ಭಾಷೆ ಬಳಸಿದ್ದು ಕಡಿಮೆ. ಕಾರಣವೆಂದರೆ ಎಲ್ಲರಿಗೂ ಗ್ರಾಮೀಣ ಸೊಗಡು ಅರ್ಥವಾಗಲಿ ಎಂದು ಪ್ರಾದೇಶಿಕ ಭಾಷೆ ಬಳಸಿದ್ದಾರೆ.

ಡಾ. ಸಿದ್ಧಲಿಂಗಪ್ಪ ಕೊಟ್ನೆಕಲ್‌ರವರ 'ಸಂಸಾರ ಸಗ್ಗ' ಇಹವನ್ನೇ ಪ್ರತಿಪಾದಿಸುವ ನಗೆಹನಿಗಳು. ಸಂಸಾರ ಬೇಸರ ತರಬಹುದು. ಆದರೆ ಅದಕ್ಕೆ ಪರ್ಯಾಯವಿಲ್ಲ. ಕುಟುಂಬದಲ್ಲಿ ಟೀಕೆಗೆ ಅವಕಾಶವಿದ್ದರೆ ಮಾತ್ರ ಎಲ್ಲರೂ ಸಮಾನರಾಗಬಲ್ಲರು. ಆಳುವವರಿಗೆ ಕೇಳುವರಿರಬೇಕು. ನಮ್ಮ ಕುಟುಂಬ ವ್ಯವಸ್ಥೆಯಲ್ಲಿ ತಂದೆ ಆಳುವ ಪಕ್ಷವಾದರೆ, ಹೆಂಡತಿ-ಮಕ್ಕಳು ವಿರೋಧ ಪಕ್ಷ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕುಟುಂಬ ಮಹತ್ವದ ಘಟಕ. ಅಲ್ಲಿ ಟೀಕೆ ಟಿಪ್ಪಣಿ, ವಿರೋಧ ಇದ್ದರೆ ಅಲ್ಲಿ ಹಾಸ್ಯವಿದೆಯೆಂದರ್ಥ. ಇಂಥ ಕುಟುಂಬ ನರಕವಲ್ಲ ಸ್ವರ್ಗ.

ಪ್ರೊ. ಅಲ್ಲಮಪ್ರಭು ಬೆಟ್ಟದೂರು

ಬಂಡಾಯ ಸಾಹಿತಿಗಳು,

ಅಮರ ಚೇತನ,

ಕಲ್ಯಾಣ ನಗರ, ಕೊಪ್ಪಳ-೫೮೩ ೨೩೧.

ಮೋ: ೯೮೪೪೮೦೪೯೨೦೫

ನನ್ನ ನುಡಿ

(ಪರಿಷ್ಕೃತ ದ್ವಿತೀಯ ಮುದ್ರಣಕ್ಕೆ)

'ಸಂಸಾರ ಸಗ್ಗ' ಈ ಕೃತಿಯಲ್ಲಿ ಕೆಲ ಸಣ್ಣ ಪುಟ್ಟ ತಪ್ಪುಗಳಿವೆ ಎಂದು ಪ್ರೊ. ಅಲ್ಲಮಪ್ರಭು ಬೆಟ್ಟದೂರರವರು ನೆನಪಾದಾಗಲೆಲ್ಲಾ ನನಗೆ ಹೇಳುತಿದ್ದರು. ನಮ್ಮ ಕುಟುಂಬದಲ್ಲಿ ನಡೆದ ನಗೆ ಚಟಾಕಿಗಳ ಪ್ರಸಂಗಗಳನ್ನು ಸಹಜವಾಗಿ ಆಡುವ ಭಾಷೆಯಲ್ಲಿ, ವಿಶೇಷವಾಗಿ ರಾಯಚೂರು ಪ್ರದೇಶದ ಗ್ರಾಮ್ಯ ಭಾಷೆಯಲ್ಲಿಯೇ ಈ ಕೃತಿಯನ್ನು ರಚಿಸಿರುವುದರಿಂದ ನಾನು ಪ್ರೊ. ಬೆಟ್ಟದೂರರವರ ಮಾತುಗಳನ್ನು ಅಷ್ಟು ಗಂಭೀರವಾಗಿ ಪರಿಗಣಿಸಿರಲಿಲ್ಲ. 2014ರಲ್ಲಿ ಈ ಕೃತಿಯನ್ನು ಮೊದಲ ಮುದ್ರಣವಾಗಿ ಹೊರತಂದಿದ್ದೆ. ಇದೇ ವರ್ಷದಲ್ಲಿ 'ಮಾನ್ವಿಯ ಮಹನೀಯರು' ಎಂಬ ಕೃತಿಯನ್ನು ಸಂಪಾದಿಸಿ ಪ್ರಕಟಿಸಿದ್ದೆ. 2010 ರಲ್ಲಿ ಪಿಎಚ್.ಡಿ ಮಹಾಪ್ರಬಂಧವಾದ 'ಕೊಪ್ಪಳ ಜಿಲ್ಲೆಯ ಶಾಸನಗಳು ಮತ್ತು ಸಾಂಸ್ಕೃತಿಕ ಇತಿಹಾಸ' ಎಂಬ ಕೃತಿಯನ್ನೂ ಹೊರ ತಂದಿದ್ದೆ. ಈ ಎಲ್ಲಾ ಕೃತಿಗಳ ಜೊತೆ ಬೇರೆ ಬೇರೆ ರೀತಿಯಲ್ಲಿ ಸಂಪಾದಿಸಿದ ಕೃತಿಗಳ ಎಲ್ಲಾ ಪ್ರತಿಗಳೂ ಮುಗಿದು ಹೋದವು. ಆತ್ಮೀಯರಿಗೆ ಕೊಡಲು ಒಂದು ಪುಸ್ತಕವೂ ಇಲ್ಲದಾಯಿತು. ಹೊಸ ಕೃತಿಗಳನ್ನು ಹೊರ ತರಲು ಇನ್ನೂ ಸ್ವಲ್ಪ ಸಮಯ ಬೇಕಿತ್ತು. ಹೀಗಾಗಿ 'ಸಂಸಾರ ಸಗ್ಗ' ಕೃತಿಯನ್ನು ಪ್ರೊ. ಅಲ್ಲಮಪ್ರಭು ಬೆಟ್ಟದೂರುರವರಿಗೆ ನೀಡಿ ಲೋಪ–ದೋಷಗಳನ್ನು ತಿದ್ದಿಕೊಡಲು ವಿನಂತಿಸಿದೆ. ಆ ಪ್ರಕಾರವಾಗಿ ಅವರು 4–6 ದಿನಗಳಲ್ಲಿ ತಿದ್ದಿ ವಾಪಸು ನೀಡಿದರು. 2014ರಲ್ಲಿ ಮೊದಲ ಮುದ್ರಣವಾಗಿ ಈ ಕೃತಿಯು ಹೊರ ಬಂದ ಮೇಲೆ

ಮನೆಯಲ್ಲಿ ಇನ್ನೂ ಅನೇಕ ಹಾಸ್ಯ ಪ್ರಸಂಗಗಳು ನಡೆದಿದ್ದವು. (ಪ್ರಸಂಗ 122 ರಿಂದ 136 ರವರೆಗೆ) ಅವುಗಳನ್ನೂ ಸಂಗ್ರಹಿಸಿ ಪರಿಷ್ಕರಿಸಿದ ಈ ಕೃತಿಯಾಗಿದೆ. ಎರಡನೇ ಮುದ್ರಣಕ್ಕೆ ತಿದ್ದಿ–ತೀಡುವುದರ ಜೊತೆಗೆ ಮುನ್ನುಡಿ ಬರೆದು ಕೊಟ್ಟ ಹಿರಿಯ ಸಾಹಿತಿಗಳಾದ ಪ್ರೊ. ಅಲ್ಲಮಪ್ರಭು ಬೆಟ್ಟದೂರರವರಿಗೆ ಹಾಗೂ ಗ್ರಂಥ ಪ್ರಕಟಣೆಗೆ ಧನಸಹಾಯ ನೀಡಿದ ಶಿಕ್ಷಣ ಪ್ರೇಮಿಗಳಾದ ಶ್ರೀ ಹೆಚ್. ಶರ್ಪುದ್ದೀನ್ ಪೋತ್ನಾಳ ಮತ್ತು ಮಾನ್ವಿಯ ಪತ್ರಕರ್ತರಾದ ಶ್ರೀ ಪಿ. ಪರಮೇಶ ಇವರಿಗೆ ಅನಂತ ಕೃತಜ್ಞತೆಗಳು.

ಸದಾ ಸಲಹೆ ನೀಡುವ ಉಪನ್ಯಾಸಕರಾದ ಆದೇಶ ಎ. ಜಿ., ಗುರುರಾಜ ವೈ. ಜಿ., ಪ್ರತಾಪ ಬಿ. ಎ., ರಾಮಣ್ಣ ಕೆ. ಹೆಚ್, ಈಶಪ್ಪ ದೊಡ್ಡಮನಿ ಮುಂತಾದವರಿಗೆ ಹಾಗೂ ಆತ್ಮೀಯರಾದ ರುದ್ರೇಶ ಇಟಗಿ, ಮಾರುತಿ ಬಿಲ್ಲರ, ಪ್ರದೀಪ ಬಳ್ಳೊಳ್ಳಿಯವರಿಗೆ ಕೃತಜ್ಞತೆಗಳು. ವಿದ್ಯಾರ್ಥಿಗಳಾದ ವೆಂಕಟೇಶ ಜಿ. ಭೋವಿ, ನವೀನ್‌ಕುಮಾರ ಪೋತ್ನಾಳ, ವೀರಭದ್ರ, ಸುನೀತಾ ಜಿ, ಸುಧಾ ಆರ್. ಕುಲಕರ್ಣಿ, ಕಾವೇರಿ ಮೇಟಿ ಮುಂತಾದವರಿಗೆ ಧನ್ಯವಾದಗಳು. ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಈ ಕೃತಿ ಹೊರತರಲು ಸಹಕರಿಸಿದವರಿಗೆ ಅನಂತ ಕೃತಜ್ಞತೆಗಳು.

–ಡಾ. ಸಿದ್ಧಲಿಂಗಪ್ಪ ಕೊಟ್ನೆಕಲ್

▪▪

ಮುನ್ನುಡಿ

(ಮೊದಲ ಮುದ್ರಣ)

ಆಧುನಿಕ ಸಂದರ್ಭದಲ್ಲಿ ಕಾಣಿಸಿಕೊಂಡ ಚುಟುಕಿನಂತಹ ಕಾವ್ಯ ಪ್ರಕಾರದ Lighting Flash ಅನುಭವವನ್ನು ನೀಡುವ ಗದ್ಯದ ಈ ಚುಟುಕುಗಳು ಜೋಕ್‌ಗಳಲ್ಲ. ಆದರೆ ಇವು ತುಟಿ ಅರಳಿಸುತ್ತವೆ. ಸಮಯ ಸ್ಫೂರ್ತಿಯನ್ನೇ ಬುನಾದಿ ಮಾಡಿಕೊಂಡ ಈ ಮಾತಿನ ಚಕಮುಕಿಗಳು ಹಾಸ್ಯ ಚಟಾಕಿಗಳಾಗಿ ನಮ್ಮ ಅನುಭವಗಳನ್ನು ನೆಮರು ಹಾಕುವಂತೆ ಮಾಡುತ್ತವೆ. ಬದುಕಿನ ಮುಗ್ಧ ಅನುಭವಗಳೇ ರೋಮಾಂಚನ ಗೊಳಿಸುವಂತಹ Punchಗಳಾಗಿ ಸಾಹಿತ್ಯದ ಸಮ್ಮಾನವನ್ನು ಪಡೆದು ಸಾಹಿತ್ಯದ ವೇದಿಕೆಯನ್ನೇರುತ್ತವೆ.

ಇಂತಹ ಗದ್ಯ ಮಾಧ್ಯಮವೊಂದರ ಮೂಲಕ ವಿಶಿಷ್ಟ ರೀತಿಯ ಅನುಭವವನ್ನು ನೀಡುವ ಡಾ. ಸಿದ್ಧಲಿಂಗಪ್ಪ ಕೊಟ್ನೆಕಲ್‌ರವರು ಮಧ್ಯಮವರ್ಗವೊಂದರ ಎಲ್ಲಾ ಅಮಾಯಕತ್ತ್ವವನ್ನು, ಜಾಣತನವನ್ನು ಕಾಣಿಸುತ್ತಾರೆ. ಮಧ್ಯಮವರ್ಗದ ಎಲ್ಲಾ ಆಯಾಸ, ಪ್ರಯಾಸಗಳನ್ನೂ ಬದುಕಿನ ಬವಣೆಗಳನ್ನೂ ಮುಗುಳ್ನಗೆಯೊಂದಿಗೆ ಸ್ವೀಕರಿಸುವ, ವ್ಯಾಖ್ಯಾನಿಸುವ ಲೇಖಕರು ಆ ಮೂಲಕ ಓದುಗನಲ್ಲಿಯೂ ಬದುಕನ್ನು ಸ್ವೀಕರಿಸುವ ಬಗೆಯಲ್ಲಿ ಭರವಸೆಯನ್ನು ಮೂಡಿಸುತ್ತಾ, ಆ ಮೂಲಕ ಮಧ್ಯಮ ವರ್ಗದ ಎಲ್ಲಾ ತನಗಳೂ ಸಹ್ಯವಾಗುವ ಸಾಧ್ಯತೆಗಳನ್ನು ತೋರುತ್ತಾರೆ.

ಇಲ್ಲಿಯ ಲೇಖಕರಿಗೆ ಕುಟುಂಬದ ಸದಸ್ಯರೇ ಗ್ರಾಸ. ಕುಟುಂಬದ ಸದಸ್ಯರೇ ಇವರ ಆಯುಧಗಳು. ಈ "ಸಂಸಾರ ಸಗ್ಗ"ದ ಮೊದಲ ಪುಟ ತೆರೆದಾಗ ಅಪರಿಚಿತರಾದ ಇವರು ಸಗ್ಗವನ್ನು ಮುಗಿಸುವ ಹೊತ್ತಿಗೆ ತೀರಾ ಪರಿಚಿತರಾಗಿ ಆಪ್ತರಾಗಿ ಬಿಡುತ್ತಾರೆ. ಒಮ್ಮೆ ಅವರನ್ನು ಕಾಣಬೇಕೆಂಬ ಹಂಬಲವೂ ಓದುತ್ತಾ ಹೋದಂತೆ ಬೆಳೆಯುತ್ತದೆ. ಗಂಡ–ಹೆಂಡತಿ,

ತಂದೆ–ಮಗ, ತಾಯಿ... ಮಗ... ಮಗಳು... ಹೀಗೆಯೇ ಅವರ ನಡುವಿನ ಒಂದು ಸಣ್ಣ ಘಟನೆ, ಅದಕ್ಕಿಂತಲೂ ಸಣ್ಣದೊಂದು ಎರಡು ಸಾಲಿನ ಸಂಭಾಷಣೆ ಕಚಗುಳಿಯಿಡುತ್ತದೆ. ಮುಂಜಾನೆಯ ಸಂಸಾರವೊಂದರ ಗಲಿಬಿಲಿ, ರಜೆಯ ಅರಾಮದ ಸೊಗಡು, ಮಧ್ಯಮವರ್ಗೀಯ ಮಾಸ್ತರನೊಬ್ಬನ ತಳಮಳಗಳು...... ತುಂಬು ಕುಟುಂಬದ ಜೀವಂತಿಕೆಯನ್ನು ಸಾರುತ್ತವೆ. ಜೀವನ ಪ್ರೀತಿಯನ್ನು ಹೆಚ್ಚಿಸುತ್ತವೆ. ಕೆಲವೆಡೆ ತೀರಾ ಸರಳ ಅನುಭವಗಳೂ ಕೆಲವೊಮ್ಮೆ ದೊಡ್ಡ ಸಂದೇಶವನ್ನು ಕೋಣ ಓದು (೧) ಎಂಬುವ ಹಾಸ್ಯದಲ್ಲಿದೆ. ಕೆಲವು ತೀರಾ ವಾಚ್ಯಪಾತಳಿಯಲ್ಲಿ ನಿಂತು ವರದಿಗಳೆನಿಸಿದರೂ ಅವುಗಳಲ್ಲಿ ಕೆಲವು ನಮ್ಮ ಅನುಭವಗಳೇ ಆದುದರಿಂದ ನಮ್ಮನ್ನೊಮ್ಮೆ ನೋಡಿಕೊಳ್ಳುವಂತೆ ಮಾಡುತ್ತವೆ. ಕೆಲವಂತೂ ಚಡ್ಡಿ ಬಚ್ಚಿಡ್ತಿದ್ಯಲ್ಲಾ ? (೧೩), ನೀನೇನು ನನ್ನ ಮ್ಯಾಲೆ ಕುಂತಿದ್ಯಾ ? (೧೮), ನಾನುನೂ ಅಂಬಾನೆ (೩೫), ಹೆಂಡ್ತಿ ಮೊದ್ಲೆ ನಂಗೆ ಜೋಳಿಗೆ ಕೊಟ್ಟಾಳ (೩೬), ಮತ್ತ್ಯಾಕ ಆ ಕೆಟ್ಟ ಗಳಿಗೆನ ನೆನಪ ಮಾಡ್ತಿ ? (೮೦) ಉತ್ತಮ ತುಣುಕುಗಳು.

ಡಾ. ಸಿದ್ಧಲಿಂಗಪ್ಪ ಕೊಟ್ನೆಕಲ್‌ರವರನ್ನು ಸಂಶೋಧನಾ ವಿದ್ಯಾರ್ಥಿಯಾಗಿ, ಸಂಶೋಧಕರಾಗಿ ಕನ್ನಡ ಉಪನ್ಯಾಸಕರಾಗಿ ಬಲ್ಲೆ. ಈಗ ಲೇಖಕರಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ಅದಮ್ಯ ಉತ್ಸಾಹಿಗಳಾದ ಇವರ ಸೃಜನಕ್ರಿಯೆ ಹೀಗೆಯೇ ಅದಮ್ಯ ಉತ್ಸಾಹದೊಂದಿಗೆ ಮುಂದು ವರಿಯಲೆಂದು ಆಶಿಸುತ್ತೇನೆ.

–ಡಾ. ಕೆ. ಶಾರದಾ
ಪ್ರಾಧ್ಯಾಪಕರು
ಕನ್ನಡ ಭಾಷೆ ಮತ್ತು ಅನುವಾದ ಅಧ್ಯಯನ ವಿಭಾಗ
ದ್ರಾವಿಡ ವಿಶ್ವವಿದ್ಯಾಲಯ
ಶ್ರೀನಿವಾಸವನಂ, ಕುಪ್ಪಂ–೫೧೭ ೪೨೬
(ಆಂದ್ರಪ್ರದೇಶ)

■■

ಪ್ರಸ್ತಾವನೆ

(ಮೊದಲ ಮುದ್ರಣ)

ಮನುಷ್ಯನ ಬದುಕು ಸುಖ, ನೆಮ್ಮದಿ, ನಲಿವುಗಳ ಜೊತೆ ಜೊತೆಗೆ ಕಷ್ಟ–ಕಾರ್ಪಣ್ಯಗಳೂ ಸೇರಿಕೊಂಡಿವೆ. ಸಂಸಾರದಲ್ಲಿ ಸಾಕೆನ್ನುವಷ್ಟು ನೋವು ಬಂದರೂ ಕುಟುಂಬದ ಸದಸ್ಯರ ಮಾತುಗಳು ಬದುಕಿಗೆ ಚೈತನ್ಯವನ್ನು ನೀಡುತ್ತವೆ. ಆ ಮಾತುಗಳು ಮುಂದಿನ ದಾರಿಗೆ ಪ್ರೇರಣೆಯಾಗುತ್ತವೆ. ಕುಟುಂಬದಲ್ಲಿ ಬರೀ ಗಂಭೀರವಾಗಿ ಮಾತನಾಡುವುದಾಗಲಿ ಇಲ್ಲವೇ ಕುಟುಂಬದ ಎಲ್ಲಾ ಸದಸ್ಯರನ್ನು ಮಾತುಗಳಿಂದ ಉಸಿರುಗಟ್ಟಿದಂತ ಪರಿಸ್ಥಿತಿಯನ್ನೇ ನಿರ್ಮಾಣ ಮಾಡುವುದರಿಂದ ಅಲ್ಲಿ ಹೆಚ್ಚಿನದೇನೂ ನಿರೀಕ್ಷಿಸಲು ಸಾಧ್ಯವಿಲ್ಲ. ಸಂಸಾರವೂ ನಗುತಾ, ನಲಿಯುತಾ ಸಾಗಿದಲ್ಲಿ ಅದರಿಂದ ಭರವಸೆ ಉಂಟಾಗಿ ಹೆಚ್ಚು–ಹೆಚ್ಚು ಕಾಲ ಬದುಕಲು ಸಾಧ್ಯವಿದೆ.

ಹಾಸ್ಯ ಎಂದರೆ ಕೇವಲ ಪುಸ್ತಕದಲ್ಲೋ ಇಲ್ಲವೆ ಎಲ್ಲೋ ನಡೆದ ಕಾರ್ಯಕ್ರಮಗಳಲ್ಲಿ ವಾಗ್ಮಿಗಳ ಮಾತಿನಿಂದ ಹೆಚ್ಚಿನದೇನೂ ದೊರೆಯಲಾರದು. ಹಾಸ್ಯ ಪ್ರಸಂಗಗಳು ಮನಸ್ಸಿಗೆ ಚೈತನ್ಯ ನೀಡುವ ಸನ್ನಿವೇಶಗಳು ನಮ್ಮ ನಡುವೆಯೇ ನಡೆಯುತ್ತಿರುತ್ತವೆ. ನಮ್ಮ ಕುಟುಂಬದ ಸದಸ್ಯರ ಮಾತುಗಳೇ ಎಷ್ಟೋ ಸಾರಿ ದಾರಿ ದೀಪಗಳಾಗುತ್ತವೆ. ಆದರೆ ಇಂತಹ ಮಾತುಗಳನ್ನು ನಾವು ಹೆಚ್ಚಾಗಿ ಗಣನೆಗೆ ತೆಗೆದುಕೊಳ್ಳದೆ ಅಷ್ಟಕ್ಕೆ ಬಿಟ್ಟು ಬಿಡುವುದು ಬಹಳ ವಿಷಾದದ ಸಂಗತಿ. ಮಹಾತ್ಮಗಾಂಧಿ, ಶಿವಾಜಿಯಂತಹ ಮಹಾತ್ಮರಿಗೆ ಕುಟುಂಬದ ಸದಸ್ಯರ ಉತ್ತೇಜನದ ಮಾತುಗಳು ಅವರನ್ನು ದೊಡ್ಡವರನ್ನಾಗಿಸಿವೆ. ಆದರೆ ಅವು ಹಾಸ್ಯದ ಮಾತುಗಳಲ್ಲ; ಅವು ಗಂಭೀರವಾದ ಚೈತನ್ಯದ ಮಾತುಗಳಿರಬಹುದು. ಆದರೆ ಆ ಸನ್ನಿವೇಶಗಳನ್ನು ನಾವು ಯಾವತ್ತೂ ಮರೆಯುವಂತಿಲ್ಲ. ನಮ್ಮ

ಮನೆಯಲ್ಲಿ ನಡೆದ ಹಾಸ್ಯ ಪ್ರಸಂಗದ ಮಾತುಗಳನ್ನು ಸಂಗ್ರಹಿಸಿ 'ಸಂಸಾರ ಸಗ್ಗ' ಎಂಬ ಕೃತಿಯ ರೂಪದಲ್ಲಿ ಸಾರಸ್ವತ ಲೋಕಕ್ಕೆ ಅರ್ಪಿಸುತ್ತಿದ್ದೇನೆ.

ನಮ್ಮ ಮನೆಯ ನಾಲ್ಕು ಗೋಡೆಗಳ ಮಧ್ಯ ನಡೆದ ಹಾಸ್ಯದ ಚಟಾಕಿಗಳನ್ನು ಸಮಾಜಕ್ಕೆ ತಿಳಿಹೇಳುವ ಪ್ರಯತ್ನವನ್ನು ಮಾಡುತ್ತಿದ್ದೇನೆ. ನಮ್ಮ ಕುಟುಂಬ ಎಂದರೆ ನಾನು, ನನ್ನ ಹೆಂಡತಿ, ಮಗ ಮತ್ತು ಮಗಳು, ಎಲ್ಲರೂ ವಾಗ್ಮಿಗಳೇ. ಎಲ್ಲರೂ ತುಟಿ ಹೊಂದದಂತೆ ಮಾತನಾಡುವ ಚತುರರು. ಒಬ್ಬರಿಂದ ಒಬ್ಬರಿಗೆ ಹೇಳುವ ಮಾತುಗಳು ಚಾಟಿಂಗ್ (Chatting) ನಂತೆ ಇರುತ್ತವೆ. ಈ ಚಾಟಿಂಗ್‌ನಲ್ಲಿ ಒಬ್ಬರಿಗಿಂತ ಒಬ್ಬರು ಮೇಲು. ಇಂತಹ ಹಾಸ್ಯಭರಿತ ನಗೆ ಚಟಾಕಿಗಳನ್ನು ತಮ್ಮ ಮುಂದೆ ಇಡುತ್ತಿದ್ದೇನೆ.

–ಡಾ. ಸಿದ್ಧಲಿಂಗಪ್ಪ ಕೊಟ್ನೆಕಲ್

ಪ್ರಾಚಾರ್ಯರು,

ಶ್ರೀ ಗವಿಸಿದ್ಧೇಶ್ವರ ಪದವಿ ಪೂರ್ವ

ಮಹಾವಿದ್ಯಾಲಯ, ಕೊಪ್ಪಳ–೫೮೩೨೩೧

ಮೋ: ೯೪೪೮೫೭೦೩೪೦

■■

ಯಾರ್‍ಯಾರ ನೆನೆಯಲಿ

(ಮೊದಲ ಮುದ್ರಣ)

ಪೂಜ್ಯಶ್ರೀ ಮ.ನಿ.ಪ್ರ. ಜಗದ್ಗುರು ಶ್ರೀ ಗವಿಸಿದ್ಧೇಶ್ವರ ಮಹಾಸ್ವಾಮಿಗಳ ಆಶೀರ್ವಾದಕ್ಕೆ ಪ್ರಣಾಮಗಳು.

ಶ್ರೀ ಗ.ವಿ.ವ.ಟ್ರಸ್ಟಿನ ಅಧ್ಯಕ್ಷರಾದ ಶ್ರೀ ಟಿ.ಜಿ.ಹಿರೇಮಠ, ಕಾರ್ಯದರ್ಶಿಗಳಾದ ಶ್ರೀ ಎಸ್. ಮಲ್ಲಿಕಾರ್ಜುನ, ಸದಸ್ಯರುಗಳಾದ ಶ್ರೀ ಎಸ್. ಆರ್. ನವಲಿಹಿರೇಮಠ, ಶ್ರೀ ಗವಿಸಿದ್ದಪ್ಪ ಆರೇರ್ ಹಾಗೂ ಶ್ರೀ ಸಂಜಯ ಕೊತಬಾಳ ಇವರಿಗೆ ಧನ್ಯವಾದಗಳು.

ವಿದ್ಯಾರ್ಥಿಗಳಾದ ಪೃಥ್ವಿರಾಜ್ ಚಾಕಲಬ್ಬಿ, ನಾಗರಾಜ ಡೊಳ್ಳಿನ, ಮಾರುತಿ ಕಿರುಬಂಡಿ, ಮಹಾಲಕ್ಷ್ಮಿ ಕಂದಾರಿ, ಸಾಗರ ಎಸ್.ಎಂ, ಹನುಮಂತ ಗಾಳಿ, ಲಾಡ್‌ಸಾಬ್, ವಿದ್ಯಾ ಜೋಷಿ, ಸಬೇರಾಬಾನು, ಪೂರ್ಣಿಮಾ ಗ್ಯಾನಪ್ಪನವರ್, ಕಾವೇರಿ ಕಣವಿ, ಜಿ.ಲಕ್ಷ್ಮಿ, ಮಾಲತಿ ಮಾಳೆಕೊಪ್ಪ, ಅಂಜನಾ ಕಂದಾರಿ, ಪರಶುರಾಮ ಹೊಸಮನಿ, ಮಾರುತಿ ಇಂದ್ರಮ್ಮನವರ್, ಜಿ.ಎನ್.ರೋಹಿತ್‌ಕುಮಾರ, ಪ್ರಭುರಾಜಗೌಡ ನಿಂಬನಗೌಡ್ರ ಇವರಿಗೆ ಧನ್ಯವಾದಗಳು.

ಉಪನ್ಯಾಸಕರುಗಳಾದ ಡಾ.ಪಾರ್ವತಿ ಪೂಜಾರ್, ಡಾ.ಬಸವರಾಜ ಪೂಜಾರ್, ಪ್ರೊ. ಎಸ್. ಎಲ್. ಮಾಲಿಪಾಟೀಲ್ ಪ್ರೊ. ಎಸ್. ಬಿ. ಹಿರೇಮಠ, ಪ್ರೊ. ಎಂ. ಎಸ್. ದಾದ್ಮಿ, ಪ್ರೊ. ಎಂ. ಎಂ. ಕಂಬಾಳಿಮಠ, ಪ್ರೊ. ಬಿ. ಎಸ್. ಹಡಗಲಿ, ಡಾ.ದಯಾನಂದ ಸಾಳುಂಕೆ, ಪ್ರೊ. ಶರಣಬಸಪ್ಪ ಬಿಳೆಯಲಿ, ಅಶೋಕ ಓಜನಳ್ಳಿ, ಉಮೇಶ ಕಾತರಕಿ, ಡಾ.ಪ್ರಕಾಶ ಬಳ್ಳಾರಿ, ಶಿವುಕುಮಾರ ಕುಕನೂರ, ಕೆ.ಎಸ್.ದಂಡಿನ್, ಬಿ.ಎನ್.ತಳವಾರ, ಸಂತೋಷಗೌಡ, ಡಾ. ವಿರೇಶಕುಮಾರ.ಎನ್.ಎಸ್,

ಶ್ರೀಮತಿ ಪ್ರತಿಭಾ ಸೋಮಲಾಪೂರ, ಶ್ರೀಮತಿ ದೀಪಾ ಬೆಟಗೇರಿ ಶ್ರೀಮತಿ ಕಮಲ ಅಳವಂಡಿ, ಶರಣಪ್ಪ ಉಮಚಗಿ, ಐ.ಎನ್.ಪಾಟೀಲ್, ಶಂಕ್ರಯ್ಯ ಅಬ್ಬಿಗೇರಿಮಠ, ಡಾ. ಹಂದ್ರಾಳ ಮಾರ್ಕಂಡೇಯರವರಿಗೆ ಕೃತಜ್ಞತೆಗಳು.

ಆತ್ಮೀಯರಾದ ಶ್ರೀ ರಾಮಚಂದ್ರಪ್ಪ, ಪಿ.ಪರಮೇಶ, ಹ್ಯಾರಿಸ್ ಕೊಟ್ನೆಕಲ್, ಶ್ರೀಕಾಂತ ಪೋತ್ನಾಳ್, ಗೋಣಿಬಸಪ್ಪ ಗುಡ್ಲಾನೂರ, ಪ್ರಭುಗೌಡ ಪಾಟೀಲ್, ಶಿವರಾಜ ಹೊಸಮನಿ, ಪರತಗೌಡ ಬಿ. ಎನ್., ಮಹೇಶ ಬಳ್ಳಾರಿ, ಅನಂತ ದೇಸಾಯಿ ಇಂದಿರಾ ಝುರಾಕ್ಸ್, ಜಗದೀಶ ಅಂಗಡಿ ಗವಿಶ್ರೀ ನೆಟ್, ಶಿವಪುತ್ರಪ್ಪ, ಡಾ. ಮಲ್ಲೇಶಪ್ಪ ಸಿದ್ರಾಂಪೂರ, ಡಾ. ಮಲ್ಲಪ್ಪ ಆರ್. ಛಲವಾದಿ, ಡಾ.ಮಹಾದೇವ ನಾಗರಾಳ ಇವರಿಗೆ ಧನ್ಯವಾದಗಳು.

ವಿದ್ಯಾ ಗುರುಗಳಾದ ಡಾ. ಸಿ. ನಾಗಭೂಷಣ, ಹಿರಿಯರಾದ ಹೆಚ್.ಎಸ್.ಪಾಟೀಲ್, ವಿಠ್ಠಪ್ಪ ಗೋರಂಟ್ಲಿ, ಬಸವರಾಜ ಬೊಳ್ಳೊಳ್ಳಿ, ಗವಿಸಿದ್ಧಪ್ಪ ಕೊಪ್ಪಳ, ಡಾ. ವಿ. ಬಿ. ರಡ್ಡೇರ, ಡಾ. ಮಹಾಂತೇಶ ಮಲ್ಲನಗೌಡರ್, ಬಿ.ಎಸ್.ಪಾಟೀಲ್, ಹನುಮಂತಪ್ಪ ಅಂಡಗಿ, ಮಂಜುನಾಥ ಗೊಂಡಬಾಳ, ಜಿ.ಎಸ್.ಗೋನಾಳ, ರಾಜಶೇಖರ ಅಂಗಡಿ, ಜಿ.ಪವನ್‌ಕುಮಾರ, ಬಸಪ್ಪ ನಾಗೋಲಿ, ರಮೇಶ ಗಬ್ಬೂರು, ಡಾ.ಎಸ್.ಶಿವರಾಜ, ಡಾ. ಜಾಜಿ ದೇವೇಂದ್ರಪ್ಪ, ವೈದ್ಯರಾದ ಡಾ. ಚಿನ್ಮಯಿ ಶ್ರೀನಿವಾಸ, ಅಂತರ್‌ರಾಷ್ಟ್ರಿಯ ಕೊಳಲುವಾದಕ ಶ್ರೀ ಬಾಪು ಪದ್ಮನಾಭ ಇವರ ಸಹಕಾರಕ್ಕೆ ಕೃತಜ್ಞತೆಗಳು.

ಸಂಬಂಧಿಗಳಾದ ಶ್ರೀಮತಿ ವೀಣಾ ಹಿರೇಮನಿ, ಜಯರಾಜ ವಕೀಲರು, ರವೀಂದ್ರ ಹಿರೇಮನಿ, ಗದುಗಿನ ಪಂಪಾಪತಿ ಕೊಟ್ನೆಕಲ್, ಈರಪ್ಪ ಕೊಟ್ನೆಕಲ್ ಇವರ ಸಹಕಾರಕ್ಕೆ ಕೃತಜ್ಞತೆಗಳು.

ಚಿಕ್ಕಪ್ಪ–ಚಿಕ್ಕಮ್ಮರಾದ ಶ್ರೀ ಕೊಟ್ನೆಕಲ್ ವೆಂಕೋಬ, ಶ್ರೀಮತಿ ಜೋತೆಮ್ಮ, ಅಕ್ಕ–ಭಾವರಾದ ಶ್ರೀ ಜ್ಞಾನಮಿತ್ರ ಶ್ರೀಮತಿ ರೇಣುಕಮ್ಮ ಇವರಿಗೆ ಧನ್ಯವಾದಗಳು

ತಂದೆ–ತಾಯಿಗಳಾದ ಶ್ರೀ ಇಸಾಕಪ್ಪ ಮತ್ತು ಶ್ರೀಮತಿ ಯಲ್ಲಮ್ಮ ಹಾಗೂ ಧರ್ಮಪತ್ನಿಯಾದ ಶ್ರೀಮತಿ ಮಂಜುಳಾ ಕೊಟ್ನೆಕಲ್, ಮಕ್ಕಳಾದ ಕುಮಾರಿ ಮೇಘನಾ, ಕುಮಾರ ಶಶಾಂಕ ಇವರ ಸಹಕಾರಕ್ಕೆ ಧನ್ಯವಾದಗಳು.

ಪುಸ್ತಕ ಪ್ರಕಟಣೆಯ ದಾನಿಗಳಾದ ಶ್ರೀ ಹೆಚ್. ಶರ್ಪುದ್ದೀನ್ ಪೋತ್ನಾಳ್ ಮತ್ತು ಮುನ್ನುಡಿ ಬರೆದ ನನ್ನ ಗುರುಗಳಾದ ಡಾ. ಕೆ. ಶಾರದಾ ಮೇಡಂ ಹಾಗೂ ಬೆನ್ನುಡಿ ಬರೆದ ನನ್ನ ಗುರುಗಳಾದ ಡಾ. ಹೆಚ್. ಟಿ. ಪೋತೆ ಇವರಿಗೆ ಕೃತಜ್ಞತೆಗಳು.

–ಡಾ. ಸಿದ್ಧಲಿಂಗಪ್ಪ ಕೊಟ್ನೆಕಲ್

ಪರಿವಿಡಿ

೧. ಕೋಣ ಓದು
೨. ಏಳರಿಂದ ಹತ್ತು ಗಂಟೆ ನಾಲ್ಕೇ ತಾಸು
೩. ಅಪ್ಪನಿಗೆ ಮದ್ವೆ ಮಾಡಬೇಕು
೪. ನಿನ್ನಂಗ
೫. ಟೂರ್‌ಗೆ ಹೋಗೋಣ್ವಾ ?
೬. ಬಂಗಾರ ಬಳೆ ಕೊಡಸ್ತಿದ್ಯಾ ?
೭. ನೀನು ಬುದ್ಧಿವಂತ ಆಗಿದ್ರೆ ನಾವ್ಯಾಕ ಇಷ್ಟುದಿನ ಬಾಡಿಗೆ ಮನ್ಯಾಗ ಇರ್ತಿದ್ವಿ ?
೮. ನಾಳೆ ಪರೀಕ್ಷೆ ಐತಲ್ಲ ಅದ್ಕೆ ಓದಾಕತ್ತಿನಿ
೯. ನಿಮ್ಮಮ್ಮ ಮಠದ ಹಿಂದಕ್ಕೆ ಹೋಗಲ್ಲ
೧೦. ನನ್ ಕಾಲೊತ್ತು
೧೧. ಒಬ್ಬಾಕಿ ಎಲ್ಲಿತನ ಮಾಡ್ಲಿ ?
೧೨. ತಲೆಮ್ಯಾಗ ಸುರ್ಕ
೧೩. ಚಡ್ಡಿ ಬಚ್ಚಿಡ್ತಿದ್ಯಲ್ಲಾ?
೧೪. ಸಿಟ್ಟು ಪಾತ್ರೆಗಳ ಮೇಲೆ ತೋರ್ಸದು
೧೫. ನಿದ್ದೆ ಮಾಡು
೧೬. ಜೀವನ ಬ್ಯಾಸರ ಆಗೈತಿ
೧೭. ನಿನ್ನ ಕೂದಲನ ನಾನು ಕಿತ್ತಿನ್ಯಾ ?
೧೮. ನೀನು ಕುಂದ್ರದ ಗಾಡಿಮ್ಯಾಲ ನನ್‌ಮ್ಯಾಲ ಅಲ್ಲ
೧೯. ಅಪ್ಪನ್ನೇ ಈ ತೊಟ್ಟಿಲದಾಗ ಹಾಕಿ ಹೋಗಾಮು
೨೦. ಬಾಚಣಿಕೆಗೆ ದಾರ ನೀನೇ ಕಟ್ಟಿಗ್ಯಾ
೨೧. ಪರ್ಸನಲ್ ನಂಬರ್ ಅದು

೨೨. ಕೊಪ್ಪಳನೇ ಕೇಳ್ತಿದ್ದಿ
೨೩. ನಾನು ಈ ಫೋಟೋದಾಗ ಇಲ್ವಲ್ಲಪ್ಪಾ ?
೨೪. ಹೊಸರುಚಿ ನನ್ನ ಮೇಲೆ ಪ್ರಯೋಗನಾ ?
೨೫. ಒಂದು ಸಲ ಮಾಡಿದ ತಪ್ಪನ್ನ ಮತ್ತೊಮ್ಮೆ ಮಾಡಲ್ಲ
೨೬. ಮಮ್ಮಿ ನಂದ್ಯಾವಾಗ ವೆಡ್ಡಿಂಗ್ ಎನ್ವಿರ್ಸರಿ ?
೨೭. ಡುಮ್ಮಿ ಮಿಸ್
೨೮. ಅಮ್ಮ ಒಳಗ ಇದ್ದಾಳ ಬಾ
೨೯. ಎಮ್ಮೆ ಹಿಂದೆ ಕೋಣಗರ
೩೦. ಇಬ್ಬರು ಮೂರ್ಖರು ಸಿದ್ಧವಾದಂತೆ
೩೧. ಎಲ್ರೂ ಅಳ್ತಿರ್ತರಲ್ಲಾ ಅದ್ಕೆ ನಾನೂ ಅಳ್ತೀನಿ
೩೨. ಶಾಲೆ ಇಲ್ಲಂತ ಹೇಳಮ್ಮ
೩೩. ನಿನ್ನನ್ನೂ ಅಪ್ಪಿಕೊಂಡು ಹೆಗಲ ಮ್ಯಾಲೆ
ಹೊತ್ತುಕೊಂಡು ತಿರಗ್ತಿದ್ದೆ
೩೪. ನಿನ್ನ ಮಾರಿದ್ರ ಎಷ್ಟು ಹಣ ಬರಬಹುದು?
೩೫. ನಾನುನೂ ಅಂಬಾನೆ
೩೬. ಹೆಂಡ್ತಿ ಮೊದ್ಲೆ ನಂಗೆ ಜೋಳಿಗೆ ಕೊಟ್ಟಾಳ
೩೭. ಯಾವುಟ್ರದಂತ ಕೇಳ್ಲಿ ?
೩೮. ಸೊಳ್ಳೆ ವಾಕಿಂಗ್ ಹೋಗ್ತಾವ
೩೯. ನಮ್ಮಪ್ಪಗೂ ನಿಂಗೂ ಸೇಮ್ ಹೊಟ್ಟೆ ಬಂದೈತಿ
೪೦. ಗುಂಡು ಹಾರ್ಸಿ ಬಿಡ್ತಿನಿ
೪೧. ನಿನ್ನ ಬಳ್ಳಾರಿ ಸೆಂಟ್ರಲ್ ಜೈಲಿಗೆ ಕಳುಹಿಸಬೇಕು
೪೨. ಬಾತ್‌ರೂಮ್ ನಾನ್ಯಾಕ್ ತೊಳಿಲಿ ?
೪೩. ನಾವೆಷ್ಟು ತಲೆ ಕಾಣ್ತೇವಿ ?
೪೪. ಓ!...... ಜೋಕಾ ?
೪೫. ಗಾಂಧಿತಾತ ಕೇಕ್–ಚಾಕಲೇಟ್ ಕೊಡ್ತಾನಾ ?
೪೬. ಎಲ್ರೂ ಹುಚ್ರೇ
೪೭. ಎರಡ್ರ ಕಾಲಾಗ ಸಾಕಾಗೈತಿ
೪೮. ಹೋಗಿ ಬಿಟ್ಟಿತ್ತಾ ?

೪೯. ನಿದ್ದೆ ಬರ್ತಿಲ್ಲ ಅದಕ್ಕೆ ಅಳಾಕತ್ತಿನಿ

೫೦. ನಾನು ಮದ್ವೆ ಮಾಡಿಕೊಂಡು ಹೋದ ಮೇಲೆ ಮನ್ಯಾಗ ನೀನೊಬ್ಬಾಕೆ ಇರಬೇಕಲ್ಲಾ

೫೧. ಹೊಸ ಅಮ್ಮನ ತರಮು

೫೨. ನೀನು ಧಾರವಾಹಿ ನೋಡಾದು ಬಿಟ್ಟಾಗ

೫೩. ನಿನಗಾಡಿ ಮಾರಿ ನಂಗೆ ಸ್ಕೂಟಿ ಕೊಡ್ಸು

೫೪. ಹಾವು ನೋಡಿದಾಂಗ ನೋಡಬ್ಯಾಡ

೫೫. ನಿಮ್ ಸಾವಕಾರನ್ನೂ ಅರ್ಧರೇಟಿಗೆ ಮಾರಿಬಿಡು

೫೬. ಸಂಬಳ ಹೆಚ್ಚಾಗಿದ್ದು ನನ್ ಕಾಲಗುಣದಿಂದ

೫೭. ಏಡ್ಸ್ ರೋಗದವರ ಜೊತೆ ಸೇರ್ಕಂಡ್ಯಾ ?

೫೮. ಹಂದಿನ ಹಿಡ್ಕಂಡಿದ್ರೆ ಸ್ಕ್ಯಾನ್ ಮಾಡ್ತಿದ್ವಿ

೫೯. ನಾನು ತರದು ಮನುಷ್ಯರು ಉಜ್ಜೊ ಟೂತ್ ಬ್ರಶ್

೬೦. ನನ್ನ ನೈಟಿ ಇಸ್ತ್ರಿ ಮಾಡು

೬೧. ತಲಿಮ್ಯಾಲ ಸುರ್ಕಂಡು ಮೈ ತೊಳ್ಕಂಡು ಮನಿಗೆ ಬಾ

೬೨. ಮನ್ಯಾಗ ಹಾವು ಚೇಳು ಇದಾವ ಇನ್ನು ಇರುವೆಗೆ ಹೆದರ್ತಿನಾ ?

೬೩. ಅಡುಗೇನ ಹುಡಿಗಿ ಮಾಡಬೇಕು

೬೪. ಅಲ್ಲೆ ತಬಲ ಬಾರಿಸ್ಕ್ಯಂತ ಕುಂದ್ರು

೬೫. ಹೋಟೆಲ್‌ನ್ಯಾಗ ಬಾರಿಸಿದಂಗ ಬಾರಸ್ತಿ

೬೬. ನಿಮಪ್ಪ ಅಮ್ಮ ನಂಗೆ ಸುಣ್ಣದ ನೀರು ಕುಡಿಸಿದ್ರು

೬೭. ಚಡ್ಡಿನ್ಯಾರು ನೋಡ್ತಾರ ?

೬೮. ಕೋತಿಗಳಿಗೆ ಮನಿ ಕಟ್ಟಿಕೊಡಬೇಕು

೬೯. ಮಿಸ್ ಕೊಡ್ಲಿಲ್ಲಪ್ಪ

೭೦. ಅವುಟ್ರಗ ಇದೊಂದು ಸೇರ್ತು

೭೧. ಅಮ್ಮ-ತಾಯಿ ಅಂತ ಹೋದ್ರೆ ಇದಕ್ಕಿಂತ ಜಾಸ್ತಿ ಸಿಗ್ತಾದ

೭೨. ಮಮ್ಮಿ ಹೊರಗ ನೆಲದ ಮ್ಯಾಲೆ ಚಿತ್ರ ಬಿಡಿಸಾಕತ್ಯಾಳ

೭೩. ಹೂವಿನ ಚಿತ್ರ ಬಿಡಿಸಲಾ ?

೭೪. ಮೊದಲು ಆದರ್ಶ ಹೆಂಡತಿ ಆಗು ಸಾಕು

೭೫. ಮೂಗುದಾರ ಹಾಕಿ ಹಿಡಕ

೭೬. ಅಡುಗೆ ನೀನೇ ಮಾಡ್ಕಂಡು ಉಣ್ಣು
೭೭. ನಿನ್ನ ತಲಿ ಮ್ಯಾಲೆ ಕಲ್ಲಿಟ್ರೆ ?
೭೮. ಅಪ್ಪ ಕನ್ನಡ ಸಾರ್ ಅಲ್ಲ ಅದ್ಕೆ ಇಂಗ್ಲೀಷ ಬರಲ್ಲ
೭೯. ಮನಿಗೆ ಬಂದಾತಾ ಬಾತ್‌ರೂಂಗೆ ಬರಲ್ಲೇನು ?
೮೦. ಮತ್ತ್ಯಾಕ ಆ ಕೆಟ್ಟ ಗಳಿಗೆನ ನೆನಪ ಮಾಡ್ತಿ ?
೮೧. ನಮಪ್ಪಂದು ಅಂಬುಲೆನ್ಸ್ ಐತಿ
೮೨. ನಮ್ಮಪ್ಪ ಅಮ್ಮ ಬಹಳ ಬುದ್ಧಿವಂತ್ರು
೮೩. ನೀನಿಲ್ಲದಿದ್ರೆ ಇನ್ನೊಬ್ಬಾಕಿ ಬರ್‍ತಿದ್ಲು
೮೪. ಪ್ಯಾಂಟಿನಾಗ ಕಾಲು ತೂರ್‍ಸಿ ರೆಡಿ ಆಗ್ತಿದ್ದಿ
೮೫. ತಿಂದು ತಿಂದು ದಪ್ಪ ಆಗಿದ್ದಿ
೮೬. ಒದ್ರಾದು ನಾಯಿ ಕೆಲ್ಸ
೮೭. ಬರೇ ಆಕಿದ್ವೆ ಆಕ್ತಾರ
೮೮. ರೊಕ್ಕ ಇಲ್ಲಂದ್ರೆ ನಂಗೆ ನಿದ್ದೆ ಬರಲ್ಲ
೮೯. ನಾನೇ ದಿಗಂಬರ ಆಗಿನಿ
೯೦. ನಾನು ಚಂದ್ರ ಇದ್ದಂಗ
೯೧. ಅವ್ರುಗೆ ಅದ್ರ ಬದ್ಲು ಇದು ಕೊಟ್ಯೇಗಿ
೯೨. ತಣ್ಣಗ ಮಾಡಬೇಕಾ ?
೯೩. ಮಮ್ಮಿ ಆ ಪುಸ್ತಕ ಓದು
೯೪. ತಾಳಿ ತೋರಿಸ್ತಿನಿ
೯೫. ಎಂಟು ವರ್ಷ ಹಿಂದಕ
೯೬. ಹಳಸಿದ್ದು ಉಂಡಿದ್ದು ಮರ್ತುಬಿಟ್ಯಾ ?
೯೭. ನನಗೆ ಇನ್ನೊಬ್ಬಾಕಿನ ಹೆಂಡ್ತಿ ಕೆಲಸಕ್ಕೆ ಇಡು
೯೮. ಕುಂತು ಕುಂತು ಬ್ಯಾಸರ್ ಆಗ್ಯೆತಿ
೯೯. ನಮಪ್ಪ ನನ್ನನ್ನೇ ನಿನಗ ಅರ್ಪಿಸ್ಯಾನ
೧೦೦. ಬಸ್ಸಿನಾಗಾನಾ! ?
೧೦೧. ನಾನು ರಿಟೈರ್ ಆದ ಮೇಲೆ ಇಲ್ಲ ಸತ್ತ ಮ್ಯಾಲೆ
೧೦೨. ಹೆಂಡ್ತಿ ಬಂದ್ಲು, ಮಕ್ಕಳು ಬಂದ್ರು, ರೋಗಾನೂ ಬಂದ್ವು

೧೦೩. ನನ್ನ ಸೀರೆ ಇರದಿದ್ದರೆ ನಿನ್ನ ಪ್ಯಾಂಟ್ ಎಲ್ಲಿರ್ತಿತ್ತು ?
೧೦೪. ನನ್ನ ಹಿಡ್ಕಂಡು ಹೊದ್ರೆ ?
೧೦೫. ಮಕ್ಕಳನ್ನ ಹಿಡ್ಕಂಡು ಹೋಗು ಅಂತ ಯಾರಿಗಾದ್ರೂ ಫೋನ್ ಮಾಡಬೇಕು
೧೦೬. ಮನ್ಯಾಗ ಗಾಳಿನೋ ದೆವ್ವನೋ ಇರ್ಬೇಕು!
೧೦೭. ನಿಮ್ಮಪ್ಪನ ಎಗ್ರಸು
೧೦೮. ಅದ್ಕೆ ಇಬ್ರೂ ಸಮ ಇರ್ಬೇಕು ಅನ್ನದು
೧೦೯. ಹೊಟ್ಟೆ ತುಂಬಾ ಉಂಡ ಮ್ಯಾಲೆ ಕೇಕ್ ಹ್ಯಾಂಗ ತಿಂತಿರಿ?
೧೧೦. ಗಾಡಿನೂ ಬೀಳಬಹುದು ಆದರೆ ನಿಮಮ್ಮ ಮಾತ್ರ ಬೀಳಲ್ಲ
೧೧೧. ಡಿಗ್ರಿ ಪಾಸ್ ಆಗೋತನ ತಡಿಬೇಕಿತ್ತು
೧೧೨. ಆಕೆ ಪಲ್ಲೆ ವೇಷ್ಟು ಮಾಡಿದ್ದು ಮುಖ್ಯ ಅಲ್ಲ ಅವರಮ್ಮನ ಹಠ ಮುಖ್ಯ
೧೧೩. ಟಿ.ವಿ ಯಲ್ಲಿ ಮಾಡಿದ್ದು ಉಣ್ಣಂಗ ಅಗ್ಯಾದ
೧೧೪. ನನ್ನ ಕೈಲಿ ಪ್ರಾಣಿಗಳನ್ನು ಹೊತ್ತುಕೊಂಡು ಹೋಗಾಕ ಆಗಲ್ಲ
೧೧೫. ಲೆ ರೋಟಿ ಕಾವ್
೧೧೬. ನಿಂಗೆ ಅಷ್ಟು ರೇಟ್ ಬರಲ್ಲ
೧೧೭. ಸಾಂಬಾರನ ಮೈಮ್ಯಾಲೆಲ್ಲಾ ಚೆಲ್ಲಿಕಂಡಾರ ಅಂತಾರ
೧೧೮. ತಿಂದಿದ್ದು ತಲೆಗೆ ಏರ್‍ಯಾದ
೧೧೯. ಬರೆ ತಲೆ ಅಷ್ಟೆ ತೆಗಿತಾರ
೧೨೦. ಹೊಟ್ಟೆ ಗಡ ಗಡ
೧೨೧. ಡಿಸ್ಟರ್ಬ್ ಮಾಡ್ಬೇಡಿ ನಾನು ಸೀರಿಯಸ್ ಆಗಿ ಓದ್ಬೇಕು
೧೨೨. ಹಂದಿನ ಹಿಡ್ಯಾಕತ್ಯಾರ
೧೨೩. ಸತ್ತಿದ್ದು ಅಲ್ಲಿ; ಮಂಡಾಳು ಮನ್ಯಾಗ ಉಗ್ಯಾರ
೧೨೪. ಖರ್ಚಿಗೆ ಕಲೆಕ್ಷನ್ ಆಗ್ತದ
೧೨೫. ಬಗಲಾಗ ಬಂದು ಕುಂದ್ರತಾಳ
೧೨೬. ನಂದಾದೀಪ
೧೨೭. ಬೇರೆಯವರನ್ನ ತುಂಬಿಕೊಳ್ಳಬೇಕು

೧೨೮. ಭಿಕ್ಷುಕಿ ನನ್ನೂ ಬಾ ಅಂದ್ರೆ ?
೧೨೯. ಅಂಗಳ ಕಸ ಬಳಿದು, ನೀರ ಹಾಕಿ, ರಂಗೋಲಿ ಹಾಕು ಅಂದ್ರೆ?
೧೩೦. ಸಣ್ಣಪ್ಪ ಬಂದ
೧೩೧. ಮಿಸ್‌ನ ಬಿಟ್ಟು ಎಲ್ರೂ ಇಷ್ಟ ಪಡ್ತಾರ
೧೩೨. ಎಣ್ಣೆ ಮಜ್ಜನ
೧೩೩. ಇನ್ನೂ ಎರಡುನೂರು ರೂಪಾಯಿ ನೀನೇ ಕೊಡಬೇಕು
೧೩೪. ನಮ್ ಅಡುಗೆನಾ ನಾವೇ ಮಾಡ್ಕಬೇಕಾ?
೧೩೫. ಮೈನೂ ತೊಳ್ಕಬೇಡ ಅಂತಾನಾ
೧೩೬. ಇದೇನು ನಿಮ್ ಕಾಲೇಜ ಅಲ್ಲಾ
೧೩೭. ರಾಕೇಟ್ ತಗೋ
೧೩೮. ಹಲ್ಲುಸೆಟ್ಟು ದಾನ
೧೩೯. ಡ್ರಿಂಕ್ಸ್ ಕುಡಿತಾರಲ್ಲಾ ಹೆಂಗಿರ್ತಾದ?
೧೪೦. ತಿಪ್ಯಾಗ ಬಿದ್ದ ಚಪ್ಪಲಿ ಆಯ್ಕೊಂಡು ತಂದಿದ್ಯಾ?
೧೪೧. ೮:೩೦ಕ್ಕೆಲ್ಲಾ ಜ್ವರ ಹೊಂಟೋಗ್ತಾವ
೧೪೨. ನಂಗೆ 8th ಸೆನ್ಸ್ ಇದೆ ಬಿಡು
೧೪೩. ಚೂರಿ ಆಕದಷ್ಟೆ ಬಾಕಿ
೧೪೪. ಕನ್ನಡಿ ಒಡೆದು ಹೋಯ್ತು ಅದ್ನ ಒಗದ್ವಿ ನೀನು ಮತ್ತೆ ವಾಪಸ್ ಬಂದಲ್ಯಾ?
೧೪೫. ನಾನೇ ದೆವ್ವ ಆಗಿ ಕಾಡ್ತಿದ್ದೆ
೧೪೬. ಒಂದು ನಾಯಿನ್ನಾರ ಸಾಕ್ಬೇಕಿತ್ತು
೧೪೭. ಇಲ್ಲಾ ಯಾರಾದ್ರೂ ಸತ್ರೆ ಶಾಲೆಗೆ ರಜೆ ಕೊಡ್ತಾದ
೧೪೮. ಪುಸ್ತಕ ಮಾರಿದ್ರೆ ನೂರು–ಇನ್ನೂರು ರೂಪಾಯಿ ಬರಲ್ಲ
೧೪೯. ವರದಕ್ಷಣೆಗೆ ಮೂಮೆಂಟು, ಶಾಲು ಕೊಡ್ತಾನ
೧೫೦. ನಂಗೆ ಮುಂದಿನ ಬ್ಯಾಲೆನ್ಸ್ ಮುಖ್ಯ

ಲೇಖಕರ ಕೃತಿಗಳು

■■

೧. ಕೋಣ ಓದು

ನನ್ನ ಹೆಂಡತಿ ಅಷ್ಟೇನೂ ಓದಿದವಳಲ್ಲ. ಎಸ್.ಎಸ್.ಎಲ್.ಸಿ ಥರ್ಡ್ ಕ್ಲಾಸಿನಲ್ಲಿ ಪಾಸ್ ಆಗಿ ಪ್ರಥಮ ಪಿಯುಸಿ ಕಲಾ ವಿಭಾಗಕ್ಕೆ ಅಡ್ಮಿಷನ್ ಮಾಡಿಸಿ ಸರಿಯಾಗಿ ಕಾಲೇಜಿಗೆ ಹೋಗದೇ ಪಾಸ್ ಮಾಡಿಕೊಂಡು ದ್ವಿತೀಯ ಪಿಯುಸಿಗೆ ಅಡ್ಮಿಷನ್ ಮಾಡಿಸಿದ್ದಳು. ಆದರೆ ದ್ವಿತೀಯ ಪಿಯುಸಿ ಪರೀಕ್ಷೆನೇ ಬರೆಯಲಿಲ್ಲ. ಅಷ್ಟಕ್ಕೆ ಕೈ ಬಿಟ್ಟಿದ್ದಳು. ನಾನು ಎಂ.ಎ. ಪಾಸ್ ಆಗಿ ಉಪನ್ಯಾಸಕನಾಗಿ ನೌಕರಿ ಮಾಡುತ್ತಾ ಪಿಎಚ್.ಡಿ. ಸಂಶೋಧನೆ ಮಾಡುತ್ತಿದ್ದೆ. ವಿದ್ಯಾಭ್ಯಾಸದಲ್ಲಿ ನನಗೂ ಆಕೆಗೂ ಬಹಳ ವ್ಯತ್ಯಾಸ ಇತ್ತು. ಮದುವೆಯಾದ ಹೊಸತನದಲ್ಲಿ ಇಬ್ಬರು ಮಾತನಾಡುತ್ತಾ ಕುಳಿತಿದ್ದೆವು. ಆವಾಗ

ಹೆಂಡ್ತಿ : ನೀನು ಎಮ್ಮೆ ಓದಿದ್ಯಾ ?

ನಾನು : ಹೌದು

ಹೆಂಡ್ತಿ : ಮತೆ ನಾನೇನು ಓದ್ಲಿ ?

ನಾನು : ನಾನು ಎಮ್ಮೆ ಓದೀನಿ ನೀನು ಕೋಣ ಓದು

೨. ಏಳರಿಂದ ಹತ್ತು ಗಂಟೆ ನಾಲ್ಕೇ ತಾಸು

ನಮ್ಮ ಊರು ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನ ಹಿರೇಕೊಟ್ನೆಕಲ್ ಗ್ರಾಮ. ಅಲ್ಲೇ ಹತ್ತಿರವಿರುವ ಪೋತ್ನಾಳ್ ಗ್ರಾಮದ ಸರಕಾರಿ ಆಸ್ಪತ್ರೆಯಲ್ಲಿ ನಮ್ಮ ತಾಯಿ ಸರಕಾರಿ ನೌಕರಳಾಗಿ ಕೆಲ್ಸ ಮಾಡ್ತಿದ್ಲು ನಾವು ಕೆಲಸ ಮಾಡುವ ಕೊಪ್ಪಳದಿಂದ ಊರಿಗೆ ಆಗಾಗ ಹೋಗಿ ಬರ್ತಿದ್ದೆವು.

ಒಂದು ದಿನ ನನ್ನ ಹೆಂಡ್ತಿ ನಾನು ಬೆಳಗ್ಗೆ ಏಳು ಗಂಟೆಗೆ ಪೋತ್ನಾಳದಿಂದ ಹೊರಟು ಹತ್ತು ಗಂಟೆಗೆ ಕೊಪ್ಪಳಕ್ಕೆ ಬಂದ್ದಿದ್ದೆವು. ಆಗ

ನಾನು : ಏಳಕ್ಕೆ ಬಿಟ್ಟು ಹತ್ತಕ್ಕೆ ಬೇಗ ಬಂದ್ವಿ ನೋಡು

ಹೆಂಡ್ತಿ : ಬರೀ ನಾಲ್ಕೇ ತಾಸಿಗೆ ಬಂದ್ವಿ ನೋಡು

ನಾನು : ಏಳು ಗಂಟೆಗೆ ಬಿಟ್ಟು ಹತ್ತು ಗಂಟೆಗೆ ಬಂದ್ರೆ ನಾಲ್ಕು ತಾಸು ಹೆಂಗ ಆಗ್ತಾದ ? *(ಆಗ ಆಕಿ ಕೈ ಬೆರಳೆತ್ತಿ)*

ಹೆಂಡ್ತಿ : ಏಳು, ಎಂಟು, ಒಂಬತ್ತು, ಹತ್ತು ನಾಲ್ಕು ತಾಸು ಅಲ್ವ ? *(ಎಂದು ಲೆಕ್ಕ ಹಾಕಿ ತೋರಿಸಿದಳು)*

ನಾನು : ತಾಯಿ ಇಂಗ ಲೆಕ್ಕ ಮಾಡಿ ತೋರ್ಸಿ ಲೆಕ್ಚರ್ ಹೆಂಡ್ತಿ ಅಂತ ಎಲ್ಲೂ ಹೇಳಬ್ಯಾಡ. ಆವಾಗ ಮಂದಿ ನನ್ ಬಗ್ಗೆ ಲೆಕ್ಕ ಹಾಕ್ಯಾರು.

೩. ಅಪ್ಪನಿಗೆ ಮದ್ವೆ ಮಾಡ್ಬೇಕು

ನಾನು ಉಪನ್ಯಾಸಕನಾಗಿ ಸಾರ್ವಜನಿಕ ಜೀವನದಲ್ಲಿ ಇರುವುದರಿಂದ ನನಗೆ ಸ್ವಲ್ಪ ಜಾಸ್ತಿನೆ ಆಮಂತ್ರಣಗಳು. ಮದುವೆ, ನಾಮಕರಣ, ಗೃಹಪ್ರವೇಶ ಇತ್ಯಾದಿಗಳಿಗೆ ಬಹಳಷ್ಟು ಕಡೆ ಹೋಗುತ್ತಿದ್ದೆ. ನಾನಂತೂ ಯಾವುದಕ್ಕೂ ತಪ್ಪಿಸುವ ಪ್ರಯತ್ನ ಮಾಡುತ್ತಿರಲಿಲ್ಲ. ಮದುವೆ ಕಾಲದಲ್ಲಂತೂ ಕೆಲವೊಂದು ಶುಭದಿನಗಳಲ್ಲಿ ೮–೧೦ ಮದುವೆಗಳಿಗೆ ಹೋಗಿ ಶುಭಕೋರಿ ಬಂದಿದ್ದೂ ಇದೆ. ನನ್ನ ಮಗ ಶಶಾಂಕನಿಗೆ ಮೂರು ವರ್ಷ ಹತ್ರ ಇರಬಹುದು. ಆ ವರ್ಷ ಕುಟುಂಬ ಸಮೇತ ಹೆಚ್ಚು ಮದುವೆಗಳಿಗೆ ಹೋಗಿ ಬಂದಿದ್ದೆವು. ಅವೆಲ್ಲ ನೋಡಿದ ಶಶಾಂಕನಿಗೆ ಏನಂತ ತಿಳಿತೋ ಗೊತ್ತಿಲ್ಲ ಅವರ ಅಮ್ಮಗೆ.

ಶಶಾಂಕ : ಮಮ್ಮಿ ಅಪ್ಪಗ ಮದ್ವೆ ಮಾಡಮಾ ?

(ಅಂದ ನಂಗೆ ಸ್ವಲ್ಪ ನಗು ಮತ್ತು ಖುಷಿನೇ ಆಯ್ತು. ಆಗ ನನ್ನ ಹೆಂಡತಿಗೆ)

ನಾನು : ನೋಡು ನನ್ನ ಮಗ ನನ್ ಕಷ್ಟಾನ ಎಷ್ಟು ಅರ್ಥ ಮಾಡಿಕೊಂಡಾನಾ. ಹೆಣಗಳಲ್ಲಿ ಎರಡು ವಿಧ. ಒಂದು ಸತ್ತ ಹೆಣ ಮತ್ತೊಂದು ಬದುಕಿದ ಹೆಣ. ಅದ್ರಂಗ ನನ್ನ ಹೆಂಡ್ತಿ ಬದುಕಿದ ಹೆಣ ಆಗ್ಯಾಳ ಏನೂ ಉಪಯೋಗ ಇಲ್ಲ. ಅದಕ ಅವ ಇನ್ನೊಂದು ಮದ್ವೆ ಮಾಡುಮು ಅಂತಾನ. *(ಎಂದೆ ಅದಕ್ಕೆ ಆಕಿಗೆ ಸ್ವಲ್ಪ ಕೋಪಾನೇ ಬಂತು)*

ಹೆಂಡ್ತಿ : ನಿಮ್ಮಪ್ಪಗ ಮದ್ವೆ ಮಾಡಮಾ ? ಮಾಡಮು ಏನೂ ಚಿಂತೆ ಮಾಡಬ್ಯಾಡ. ಮದ್ವೆಗಳಲ್ಲಿ ಎರಡು ವಿಧ. ಒಂದು ಹುಡಿಗಿ ಜೊತೆ ಮಾಡದು ಮತ್ತೊಂದು ಬಡಿಗಿ ಜೊತೆ ಮಾಡದು. ನಿಮ್ಮಪ್ಪಗ ಮನ್ಯಾಗ ಕರ್‍ಕೊಂಡು ಹೋಗಿ ಬಡಿಗಿಲಿ ಮದುವೆ ಮಾಡಾಮು ಗುಂಡ.

೪. ನಿನ್ನಂಗ

ನಮ್ಮಪ್ಪ, ಅಮ್ಮ ಮೊದಲು ಬಹಳ ಕಷ್ಟ ಪಟ್ಟು ಬದುಕಿದವರು. ನಮ್ ತಾಯಿಗೆ ಸರಕಾರಿ ನೌಕರಿ ಮತ್ತು ನನಗೆ ಉಪನ್ಯಾಸಕ ನೌಕರಿ ಸಿಕ್ಕ ಮೇಲೆಯೇ ನಾವೆಲ್ಲ ಆರಾಮದಿಂದ ಜೀವನ ಸಾಗಿಸ್ತಾ ಇದ್ವಿ. ನಮ್ಮಪ್ಪ ದಿನಾ ಉಂಡು ಆರಾಮ ತಿರುಗಾಡುತ್ತಿದ್ದ. ಪೊತ್ನಾಳ್‌ದಿಂದ ಕೊಟ್ನೆಕಲ್ ಅಲ್ಲಿಂದ ಮಾನ್ವಿ ಹೀಗೆ ದಿನಾ ತಿರುಗಾಡುವುದೇ ಆತನ ಕೆಲಸ. ಹಿರಿಯ ನಾಗರಿಕರ ರಿಯಾಯ್ತಿ ಬಸ್‌ಪಾಸ್ ಬೇರೆ ತೆಗೆಸಿದ್ದ. ನನ್ನ ಮಗ ಶಶಾಂಕ ಎರಡು – ಮೂರು ವರ್ಷದವ ಇದ್ದ. ಅವ್ನ ಇನ್ನೂ ಶಾಲೆಗೆ ಸೇರಿಸಿರಲಿಲ್ಲ. ಅವ್ನನೂ ದಿನಾ ಊಟ ಮಾಡದು, ಟಿ.ವಿ. ನೋಡೋದು. ಅದರಲ್ಲಿ ಪೋಗೋ ಚಾನಲ್ ನೋಡ್ತಾ ಇದ್ದ. ಒಂದು ಸಲ ನಮ್ಮ ಅಪ್ಪ–ಅಮ್ಮ ಕೊಪ್ಪಳಕ್ಕೆ ಮೊಮ್ಮಕ್ಕಳನ್ನು ನೋಡುವುದಕ್ಕೆ ಬಂದಿದ್ದರು. ಶಶಾಂಕ ಉಂಡು ಟಿ.ವಿ. ಹಚ್ಚುತ್ತಿದ್ದ. ಟಿ.ವಿ. ಯಲ್ಲಿ ಪೋಗೋ ಚಾನಲ್ ಹಚ್ಚಿಕೊಂಡು ಬೇರೆ ಯಾರಿಗೂ ರಿಮೋಟ್ ಕೊಡುತ್ತಿರಲಿಲ್ಲ. ಅಲ್ಲದೆ ಬೇರೆ ಚಾನಲ್

ಹಚ್ಚುವುದಕ್ಕೂ ಬಿಡುತ್ತಿರಲಿಲ್ಲ. ನಮ್ಮಪ್ಪ ರಿಮೋಟ್ ತಗೊಂಡು ಬೇರೆ ಚಾನಲ್ ಹಚ್ಚಿದರೆ ಅಳುತ್ತಿದ್ದ. ಇದನ್ನು ಕಂಡು ನೋಡಿ ನೋಡಿ ಸಾಕಾಗಿ

ಅಪ್ಪ : ಇವನು ಶಾಲೆಗೆ ಹೋಗಲ್ಲ ಏನಿಲ್ಲ, ಬರೀ ದಿನ ಊಟ ಮಾಡುವುದು ಟಿವಿ ನೋಡುವುದು ಇವನಿಗೆ ಬೇರೆ ಏನು ಕೆಲಸ ಇಲ್ವಾ ?

ಅಮ್ಮ : ಅವುನಾ ? ನಿನ್ನಂಗ

೫. ಟೂರ್‌ಗೆ ಹೋಗೋಣ್ವಾ ?

ನಾನು ಮನೆ ಕಟ್ಟಿಸುವುದಕ್ಕೆ ಪ್ರಾರಂಭಿಸಿದ್ದೆ. ಯಾರಿಗೂ ಗುತ್ತಿಗೆ ಕೊಟ್ಟಿರಲಿಲ್ಲ. ಒಬ್ಬ ಇಂಜಿನಿಯರಿಗೆ ಮಾತ್ರ ಬಂದು ಸಲಹೆ ಕೊಟ್ಟು ಹೋಗುವುದಕ್ಕೆ ಮಾತ್ರ ಒಪ್ಪಿಕೊಂಡಿದ್ದೆವು. ಎಲ್ಲಾ ಸಾಮಾನುಗಳನ್ನು ನಾನೇ ತರ್ಸಿ, ಕಟ್ಟುವ ಮೇಸ್ತ್ರಿಗೆ ಕೊಡುತ್ತಿದ್ದೆ. ನನಗೆ ದಿನಾ ಮೇಸ್ತ್ರಿಗಳು ಕಲ್ಲು ಬೇಕು ಅಂತಿದ್ರು. ಕಲ್ಲು ತಂದು ಕೊಟ್ರೆ ಉಸುಕು ಅನ್ನೋರು, ಉಸುಕು ತಂದ್ರೆ ಕಬ್ಬಿಣ, ಸಿಮೆಂಟ್, ನೀರು ಮತ್ತೆ ಕಲ್ಲು, ಉಸುಕು ಹೀಗೆ ದಿನಕ್ಕೆ ೪–೬ ಸಾಮಾನು ಕೇಳಿ ನನ್ನ ಜೀವ ತಿಂತಾ ಇದ್ರು. ಅದ್ರಲ್ಲಿ ಮಳೆಗಾಲ ಬೇರೆ ಇತ್ತು. ಎಲ್ಲಿ ಮಳೆ ಬಂದು ಎಲ್ಲಾ ಕೆಲಸ ಕಾರ್ಯ ಕೆಟ್ಟು ಹೋಗ್ತಾವೋ ಅನ್ನು ಹೆದರಿಕೆ ಬೇರೆ. ದಿನಾ ನನ್ ಬದುಕು ಟೆನ್‌ಷೆನ್‌ನಲ್ಲಿ ಪ್ರಾರಂಭಗೊಂಡು ಟೆನ್‌ಷನ್‌ಲ್ಲೇ ಮುಕ್ತಾಯವಾಗುತ್ತಿತ್ತು. ರಾತ್ರಿ ಸರಿಯಾಗಿ ನಿದ್ದೆಯೂ ಸಹ ಬರುತ್ತಿರಲಿಲ್ಲ. ಹೊರಗಡೆ ಎಲ್ಲೂ ಹೋಗುವಂತಿರಲಿಲ್ಲ. ಹೆಜ್ಜೆ ಕಿತ್ತುವುದಕ್ಕೂ ಸಹ ಪುರುಸೊತ್ತು ಇರುತ್ತಿರಲಿಲ್ಲ. ಇಂತಹ ಟೆನ್‌ಷನ್‌ನಲ್ಲಿ ಇದ್ದೆ. ಇಂತಹ ಸಂದರ್ಭದಲ್ಲಿ ಹತ್ತಿರ ಬಂದು

ಹೆಂಡ್ತಿ : ಒಂದು ಹೇಳಲಾ ?

ನಾನು : ಏನೇಳು

ಹೆಂಡತಿ : ನಂಗೆ ಒಂದು ಆಸೆ ಆಗ್ಯಾದ

ನಾನು : ಏನದು ?

ಹೆಂಡ್ತಿ : ನಂಗೆ ಎಲ್ಲಿಗಾರ ಹೋಗೋಣ ಅನಿಸ್ಯಾದ ಅದಕ್ಕೆ ಎಲ್ಲಿಗ್ಯಾರ ಟೂರ್‌ಗೆ ಹೋಗೋಣ್ವ ?

೬. ಬಂಗಾರ ಬಳೆ ಕೊಡಸ್ತಿದ್ಯಾ ?

ನಾನು ಮನೆ ಕಟ್ಟಿಸ್ತಾ ಇದ್ದೆ. ಮನೆ ಕಟ್ಟಿಸೋದು ಅಂದ್ರ ಗೊತ್ತಲ್ಲ. ಖರ್ಚು ಎಷ್ಟು ಅಂತ. ಹಣ ನೀರು ಹರಿದಂಗೆ ಖರ್ಚು ಆಗ್ತಾ ಇತ್ತು. ಬ್ಯಾಂಕಿನಿಂದ, ಅವರಿವರಿಂದ ಸಾಲ ತಂದು ನಿಭಾಯಿಸುತ್ತಿದ್ದೆ. ಇಂತಹ ತುಟ್ಟಿ ಕಾಲದಲ್ಲಿ ಎಷ್ಟು ತಂದರೂ ಸಾಕಾಗ್ತಾ ಇರ್ಲಿಲ್ಲ. ಬೆಳಿಗ್ಗೆ ಎಷ್ಟು ಹಣ ತಂದ್ರೂ ಸಂಜೆ ಹೊತ್ತಿಗೆ, ಸಂಜೆ ತಂದ್ರೆ ರಾತ್ರಿ ಹೊತ್ತಿಗೆ ಖಾಲಿ ಆಗ್ತಿತ್ತು. ದಿನಾ ಹಣ ಕೂಡಿಸುವ ಯೋಚನೆಯಲ್ಲೇ ಇರ್ತಿದ್ದೆ. ಇದ್ದ ಹಣ, ಸಾಲ ತಂದ ಹಣ ಮುಗಿದು ಹೋಗಿತ್ತು. ಸಾಮಾನು ತರಿಸಬೇಕು, ಮೇಸ್ತ್ರಿಗಳಿಗೆ ಕೂಲಿ ಬೇರೆ ಕೊಡಬೇಕು. ಹೇಗೆ ಹಣ ಹೊಂದಿಸಬೇಕು ಎನ್ನುವ ಚಿಂತೆಯಲ್ಲಿ ಇದ್ದೆ, ಆವಾಗ ಬಂದ

ಹೆಂಡತಿ : ಬಂಗಾರ ರೇಟ್ ಕಡಿಮೆ ಆಗ್ಯೆತಿ ಅಂತ ಅದಕ್ಕೆ ನಂಗೆ ಒಂದರೆಡು ಬಂಗಾರ ಬಳೆ ಕೊಡಸ್ತಿದ್ಯಾ?

೭. ನೀನು ಬುದ್ಧಿವಂತ ಆಗಿದ್ರೆ ನಾವ್ಯಾಕ ಇಷ್ಟು ದಿನ ಬಾಡಿಗೆ ಮನ್ಯಾಗ ಇರ್ತಿದ್ವಿ ?

ನಾನು ನೌಕರಿ ಸೇರಿ ಸುಮಾರು ಒಂಬತ್ತು ವರ್ಷ ಆದ ಮೇಲೆ ಸ್ವಂತ ಮನೆ ಕಟ್ಟಿಸಿದ್ದು. ಅಲ್ಲಿತನ ಬಾಡಿಗೆ ಮನೇಲಿ ಇದ್ದೆವು. ನಾನು ಯಾವಾಗಾದ್ರೂ ಹೆಂಡಿಗೆ ಒಂದೆರಡು ಬುದ್ಧಿ ಮಾತು ಹೇಳುವುದಕ್ಕೆ ಹೋದಾಗ

ಹೆಂಡ್ತಿ : ನೀನು ಇಷ್ಟು ಬುದ್ಧಿವಂತ ಆಗಿದ್ರೆ ನಾವ್ಯಾಕ ಇಷ್ಟು ದಿನ ಬಾಡಿಗೆ ಮನ್ಯಾಗ ಇರ್ತಿದ್ವಿ ?.

೮. ನಾಳೆ ಪರೀಕ್ಷೆ ಐತಲ್ಲ ಅದ್ಕೆ ಓದಾಕತ್ತಿನಿ

ನನ್ನ ಹೆಂಡ್ತಿ ದ್ವಿತೀಯ ಪಿಯುಸಿ ಪರೀಕ್ಷೆನೇ ಬರೆಯಲಿಲ್ಲ. ಅದಕ್ಕೆ ನಾನು ಸ್ವಲ್ಪ ಜ್ಞಾನನಾರ ಬರ್ಲಿ ಅಂತ ಮುಕ್ತ ವಿಶ್ವವಿದ್ಯಾಲಯದಲ್ಲಿ ವಯಸ್ಸಿನ ಆಧಾರದ ಮೇಲೆ ಪದವಿ ಪ್ರವೇಶ ಕೊಡಿಸಿದ್ದೆ. ಅವ್ರು ಪ್ರವೇಶ ಕಾಲಕ್ಕೆ ಪುಸ್ತಕ ಕೊಟ್ಟಿದ್ರು. ಅವುಟ್ರನ ಓದುವುದು ದೂರ ಇರ್ಲಿ, ನೋಡ್ಲಿಲ್ಲ, ಮುಟ್ಟಿಲ್ಲ. ಯಂಗ ತಂದಿವಿ ಅಂಗ್ಯೆ ಇಟ್ಟಿದ್ಲು. ಒಂದು ದಿನ ಆ ಪುಸ್ತಕ ಓದುತ್ತಾ ಕುಂತಿದ್ಲು. ನನಗೆ ಆಶ್ಚರ್ಯ ಆಯ್ತು. ಅದಕ್ಕೆ

ನಾನು : ಏನು ಓದಕತ್ತಿದ್ದಿ ? ಏನು ವಿಶೇಷ ?

ಹೆಂಡ್ತಿ : ಏನಿಲ್ಲ ನಾಳೆ ಪರೀಕ್ಷೆ ಐತಲ್ಲ ಅದಕ್ಕೆ ಓದಾಕತ್ತಿನಿ

೯. ನಿಮಮ್ಮ ಮಠದ ಹಿಂದಕ್ಕೆ ಹೋಗಲ್ಲ

ಕೊಪ್ಪಳದಲ್ಲಿ ಶ್ರೀ ಗವಿಮಠ ಧಾರ್ಮಿಕವಾಗಿ ಬಹಳ ಪ್ರಸಿದ್ಧಿ ಪಡೆದಿದೆ. ಸಾಕಷ್ಟು ಭಕ್ತರು ಹೋಗಿ ಬರುವ ಅದೊಂದು ಪುಣ್ಯಕ್ಷೇತ್ರ. ಅದರ ಹಿಂದೆ ಸ್ಮಶಾನ ಇದೆ. ನನ್ನ ಹೆಂಡ್ತಿ ಕೆಲ ವಿಶೇಷ ಪೂಜಾ ದಿನಗಳಲ್ಲಿ ಶ್ರೀ ಮಠಕ್ಕೆ ಹೋಗ್ತಾ ಇದ್ಲು. ಒಂದು ಸಲ ನನ್ನ ಹೆಂಡತಿ ಮಠಕ್ಕೆ ಹೋಗುವಾಗ ಮೂರು ವರ್ಷದ ನನ್ನ ಮಗ ಶಶಾಂಕ ಅಳ್ತಾ ಇದ್ದ. ಅದಕ್ಕೆ

ನಾನು : ಲೇ ಮಗನೆ ಅಳಬೇಡ ನಿಮ್ಮಮ್ಮ ಮಠಕ್ಕೆ ಹೋಗ್ತಾಳ ಮಠದ ಹಿಂದಕ್ಕಲ್ಲ.

೧೦. ನನ್ ಕಾಲೊತ್ತು

ನಾನು ಸಾರ್ವಜನಿಕ ಬದುಕು ನಡೆಸುತ್ತಿದ್ದುದರಿಂದ ನನಗೆ ಕೆಲವೊಂದು ದಿನ ಕೆಲಸಗಳು ಬಹಳಷ್ಟು ಇರ್ತಾ ಇದ್ವು. ಗವಿಸಿದ್ದೇಶ್ವರ ಜಾತ್ರೆ, ಎನ್.ಎಸ್.ಎಸ್ ಕಾರ್ಯಚಟುವಟಿಕೆ ಇತ್ಯಾದಿ ಸಂದರ್ಭಗಳಲ್ಲಿ ನಾನು ಬಹಳಷ್ಟು ದಣಿಯುತ್ತಿದ್ದೆ. ರಾತ್ರಿ ಮಲಗುವಾಗ ಸಾಕು ಸಾಕಾಗ್ತಾ

ಇತ್ತು. ಮೈ–ಕೈ–ಕಾಲು ಎಲ್ಲವೂ ನೋಯ್ತಾ ಇದ್ವು, ಅದಕ್ಕೆ ರಾತ್ರಿ ಮಲಗಿದಾಗ ನನ್ನ ಹೆಂಡ್ತಿಗೆ.

ನಾನು : ಕೈ ಕಾಲು ನೋವಾಗ್ಯಾವ ಸ್ವಲ್ಪ ಒತ್ತು.

ಹೆಂಡ್ತಿ : ನಿನವೆಲ್ಲಿ ಒತ್ಲಿ ನಂಗೆ ಕೆಲ್ಸ ಮಾಡಿ ಸಾಕಾಗ್ಯಾದ ನನ್ವೆ ನೀನು ಸ್ವಲ್ಪ ಒತ್ತು. *(ಆಗ ನಾನು ಆರು ವರ್ಷದ ಮಗಳು ಮೇಘಾಳಿಗೆ)*

ನಾನು : ಮೇಘಾ ಸ್ವಲ್ಪ ಕಾಲು ಒತ್ತಮ್ಮ ನೋವಾಗ್ಯಾವ.

ಮೇಘ : ಅಯ್ಯಾ ಯಪ್ಪ ನಾನೆಲ್ಲಿ ಒತ್ಲಿ ನಾನೇ ಆಟ ಆಡಿ ನನಕಾಲೆ ನೋವಾಗ್ಯಾವ ಅದಕೆ ನನ ಕಾಲ ನೀನೇ ಒತ್ತು.

೧೧. ಒಬ್ಬಾಕೆ ಎಲ್ಲಿತನ ಮಾಡ್ಲಿ ?

ನನ್ನ ತಾಯಿ ಬೇರೆ ಊರಲ್ಲಿ ಸರಕಾರಿ ನೌಕರಿ ಮಾಡುತ್ತಿದ್ದುದರಿಂದ ಅಪ್ಪ, ಅಮ್ಮ ಅಲ್ಲೆ ಇದ್ರು. ಇಲ್ಲಿ ನಾನು ನನ್ನ ಹೆಂಡ್ತಿ ಮತ್ತು ಇಬ್ರು ಮಕ್ಳು ಇದ್ವಿ. ಅಪ್ಪ, ಅಮ್ಮ ಯಾವಗಾರ ಬಂದು ಹೋಗ್ತಾ ಇದ್ರು ಅಷ್ಟೆ. ಹೆಂಡ್ತಿಗೆ ಕೆಲ್ಸ ಮಾಡಿ ಮಾಡಿ ಸಾಕಾಗಿರಬಹುದು. ಮತ್ತು ಮನೆಯೊಳಗೆ ಹೆಣ್ಣುಮಕ್ಕಳ ಕೆಲಸ ಬಹಳ ಇರ್ತಾವ ಅನ್ನದೂ ನನಗೆ ಗೊತ್ತು. ನಾನು ಮನೆಯೊಳಗೆ ಬಂದಾಗ

ಹೆಂಡ್ತಿ : ಮನ್ಯಾಗ ಕೆಲ್ಸ ನೋಡಿದ್ರೆ ಬಹಳ ಐದಾವ, ನನಗ ಮಾಡಿ ಮಾಡಿ ಸಾಕಾಗ್ಯಾದ. ಆಕಡೆ ತಂಬಿಗೆ ಇಕಡೆ ಕೊಡಾರು ಇಲ್ಲ. ನನಗಂತೂ ಸಾಕಾಗ್ಯಾದ. ನಾನು ಒಬ್ಬಾಕಿ ಎಲ್ಲಿತನ ಅಂತ ಮಾಡ್ಲಿ ?

ನಾನು : ಒದ್ರಬ್ಯಾಡ ನಿನ್ನ ಕೈಲಿ ಆಗದಿದ್ರೆ ಹೇಳು, ನಿನ್ನ ಒಬ್ಬಾಕಿ ಕೈಲಿ ಕೆಲ್ಸ ಮಾಡಕ ಆಗಲ್ಲ ತಾನೇ? ಇನ್ನೂ ನಾಳೆನೇ ಇನ್ನೊಬ್ಬಕಿನ ಕರ್ಕಂಡು ಬರ್‍ತಿನಿ ಯಾಕ ಒಟಾಸತ್ತಿದ್ದಿ ?.

೧೨. ತಲಿಮ್ಯಾಗ ಸುರ್ಕ

ನಾನು ಮೊದ್ಲು ನೀರು ಸ್ವಲ್ಪ ಕುಡಿಯುತ್ತಿದ್ದೆ. ನಂತ್ರ ಯಾರೋ ಒಬ್ಬರು ನೀರು ಜಾಸ್ತಿ ಕುಡಿದಷ್ಟು ಆರೋಗ್ಯಕ್ಕೆ ಒಳ್ಳೆಯದು ಎಂದು ಹೇಳಿದ ಮೇಲೆ, ನಾನು ನೀರು ಸ್ವಲ್ಪ ಜಾಸ್ತಿ ಕುಡಿಯುವುದಕ್ಕೆ ಪ್ರಾರಂಭಿಸಿದ್ದೆ. ಒಂದೊಂದು ಸಲ ಗ್ಲಾಸ್ ತುಂಬ ಕುಡಿತಿದ್ದೆ. ಕೆಲವೊಂದು ಸಲ ನೀರಿನ ದಾಹ ಜಾಸ್ತಿ ಆದಾಗ ಒಂದು ತಂಬಿಗೆ ತುಂಬ ಕುಡಿತಿದ್ದೆ. ನನ್ನ ಹೆಂಡ್ತಿಗೆ ಕನ್‌ಫ್ಯೂಜನ್. ನಂಗೆ ಒಂದೊಂದು ಸಲ ತಂಬಿಗೆ ನೀರು ಬೇಕಾದಾಗ ಗ್ಲಾಸನಲ್ಲಿ ತರಿತಿದ್ಲು, ಮತ್ತೆ ಕೆಲ ಸಲ ಗ್ಲಾಸನಲ್ಲಿ ಬೇಕಾದಾಗ ತಂಬಿಗೆಯಲ್ಲಿ ತರುತಿದ್ಲು. ಅದಕ್ಕೆ ನಾನು ಆಕೆಗೆ ಮೊದ್ಲೆ ಗ್ಲಾಸ್ ತುಂಬನೋ ಅಥವಾ ತಂಬಿಗೆ ತುಂಬಾನೊ ಎಂದು ಹೇಳುತ್ತಿದ್ದೆ. ಇದು ಆಕೆಗೆ ಗೊಂದಲದ ಪ್ರಸಂಗ. ಒಂದು ಸಲ ನಾನು ಬಹಳ ಅವಸರದಿಂದ ಮನೆಯೊಳಗೆ ಬಂದು

ನಾನು : ಬೇಗ ನೀರು ಕೊಡು ಕುಡ್ಯಾಕ

ಹೆಂಡ್ತಿ : ಯದ್ರಾಗ ಕೊಡ್ಲಿ ?

ನಾನು : ತಂಬಿಗ್ಯಾಗ ಕೊಡು

ಹೆಂಡ್ತಿ : ತಂಬಿಗ್ಯಾಗ ಯಾಕ ದೊಡ್ಡ ಕೊಡದಾಗ ಕೊಡ್ತಿನಿ ತಲೆಮ್ಯಾಲೆ ಸುರ್ಕ ಎಲ್ಲಾ ತಣ್ಣಗ ಆಗ್ತಾದ

೧೩. ಚಡ್ಡಿ ಬಚ್ಚಿಡ್ತಿದ್ಯಲ್ಲಾ

ನನ್ನ ಹೆಂಡತಿ ನನ್ನ ಅಕ್ಕನ ಮಗಳು. ನಾನು ಆಕಿಗೆ ಸೋದರ ಮಾವ. ಹಳ್ಳಿಯಲ್ಲಿ ಒಂದು ಸಂಪ್ರದಾಯವಿದೆ. ಮದುವೆ ಸಂದರ್ಭಗಳಲ್ಲಿಯೋ ಅಥವಾ ಇನ್ಯಾವುದೋ ವಿಶೇಷ ಸಂದರ್ಭಗಳಲ್ಲಿ ಮಾವನವರ ಚಪ್ಪಲಿ ಬಚ್ಚಿಟ್ಟು ಅವರನ್ನು ಗೋಳಾಡಿಸುವುದು. ಆಗ ಆತನಿಂದ ಹಣ ವಸೂಲಿ ಮಾಡುವುದು ಜನಪದರ ಸಂಪ್ರದಾಯ. ನಾನು ಎರಡು ಚಡ್ಡಿ (ಅಂಡರವೇರ್)ಗಳನ್ನು ಉಪಯೋಗಿಸುತ್ತಿದ್ದೆ. ಅವುಗಳನ್ನು ಮೊದಲು

ನಾನೇ ತೊಳೆಯುತ್ತಿದ್ದೆ. ನಂತರ ನನ ಹೆಂಡ್ತಿ ತಾನು ತೊಳಿತಿನಿ ಚೆನ್ನಾಗಿ ಕ್ಲೀನ್ ಆಗ್ತಾವ ಅಂತ ತೊಳಿತಿದ್ಲು. ತೊಳೆದ ಮ್ಯಾಲೆ ಅದನ ಎಲ್ಲಿಡ್ತಿದ್ಲೊ ನನಗೆ ಬೇಗ ಸಿಗುತ್ತಿರಲಿಲ್ಲ. ನನಗೆ ಬೆಳಿಗ್ಗೆ ಬಹಳ ಅವಸರ, ೭.೩೦ಕ್ಕೆ ಕಾಲೇಜಿಗೆ ಹೋಗಬೇಕು. ಅದ್ರಲ್ಲಿ ಒಂದು ತಾಸು ವಾಕಿಂಗ್ ಬೇರೆ. ನನಗೆ ಬೆಳಿಗ್ಗೆ ಉಸಿರಾಡಿಸುವುದಕ್ಕೂ ಸಮಯವಿರುತ್ತಿರಲಿಲ್ಲ. ನಾನು ಸ್ನಾನ ಮಾಡಿಕೊಂಡು ಬಂದು ಚಡ್ಡಿ ಹುಡುಕಾಡುತ್ತಿದ್ದೆ. ಆಕಿ ಎಲ್ಲಿಟ್ಟಿರ್ತಿದ್ಲೊ ಗೊತ್ತಾಗ್ತಾ ಇರ್ಲಿಲ್ಲ. ನನಗೆ ಹುಡುಕಾಡಿ ಹುಡುಕಾಡಿ ಸಾಕಾಗ್ತಿತ್ತು. ಅದಕ್ಕೆ ಹೆಂಡ್ತಿಗೆ

ನಾನು : ಅಲ್ಲೊ ಎಲ್ರೂ ಸೋದ್ರಮಾವನ ಚಪ್ಲಿ ಬಚ್ಚಿಟ್ರೆ. ನೀನು ನನ್ನ ಚಡ್ಡಿ ಬಚ್ಚಿಡ್ತಿದ್ಯಲ್ಲ. ?

*****

ಬೆಳಿಗ್ಗೆ ಎದ್ದ ಕೂಡಲೇ ನನಗೆ ಬಹಳ ಅವಸರ. ಯಾಕಂದ್ರೆ ೭–೩೦ಕ್ಕೆಲ್ಲಾ ಕಾಲೇಜಿಗೆ ಹೋಗಬೇಕು. ಇಂತಹ ಟೈಮಿನಲ್ಲಿ ನಾನು ಸ್ನಾನ ಮಾಡಿಕೊಂಡು ಬಾತ್‌ರೂಂನಿಂದ ಹೊರಗೆ ಬಂದು ನನ ಹೆಂಡ್ತಿ ತೊಳೆದು ಇಟ್ಟಿದ್ದ ಚಡ್ಡಿಯನ್ನು ಹುಡುಕಾಡುವುದೇ ನನಗೆ ಬಹಳ ಕಷ್ಟದ ಕೆಲಸವಾಗಿತ್ತು. ಅದಕ್ಕೆ ಹೆಂಡ್ತಿಗೆ

ನಾನು : ಛೇ ! ಚಡ್ಡಿ ಹುಡುಕಿಕೊಡು ಬಾ ನಂಗೆ ಸಿಗ್ತಿಲ್ಲ. ಹುಡುಕಿ ಹುಡುಕಿ ಸುಸ್ತಾಗೊಯ್ತು

ಹೆಂಡ್ತಿ : ನೀವು ಸಂಶೋಧಕರು ಏನೆಲ್ಲಾ ಹುಡುಕುತ್ತೀರಿ? ಮನೇಲಿ ಒಂದು ಚಡ್ಡಿ ಹುಡುಕಾಗ್ತಿಲ್ವ ?

೧೪. ಸಿಟ್ಟು ಪಾತ್ರೆಗಳ ಮೇಲೆ ತೋರ್ಸದು

ಒಂದೊಂದು ಸಲ ನನ್ನ ಹೆಂಡತಿ ನನ್ನ ಮೇಲೆ ಕೋಪಗೊಂಡಾಗ ತನ್ನ ಎಲ್ಲಾ ಕೋಪವನ್ನು ಯಾವುದೋ ವಸ್ತುಗಳ ಮೇಲೆ ತೀರಿಸಿಕೊಳ್ಳುತ್ತಿದ್ದಳು. ಇಂತಹ ಸಂದರ್ಭದಲ್ಲಿ ನಾನು ಊಟ ಮಾಡುವಾಗ ಎಲ್ಲಾ ಪಾತ್ರೆಗಳನ್ನು ತಂದು ತಂದು ಇಡ್ತಾ ಇದ್ದಳು. ಗಂಗಾಳ, ತಂಬಿಗೆ,

ಅಡುಗೆ ಪಾತ್ರೆಗಳನ್ನು ತಂದು ನೆಲಕ್ಕೆ ತಿವಿದು ಇಡ್ತಾ ಇದ್ದಳು. ಅದಕ್ಕೆ

ನಾನು : ಅಂಗ್ಯಾಕ ಅವುಟ್ರನ್ನ ತಿವಿದು ತಿವಿದು ಇಡ್ತಿದ್ದಿ ?
ನನ ಮ್ಯಾಲಿನ ಸಿಟ್ಟು ಅವುಗಳ ಮ್ಯಾಲ ತೋರ್‍ಸಾಕ ಹತ್ತಿದ್ಯಾ?

ಹೆಂಡ್ತಿ : ನಿನಗೆ ತಿವ್ಯಾಕ ಅಗಲ್ವಲ್ಲ ಅದಕ್ಕೆ ಇವಟ್ರನ ತಿವಿತಿನಿ.

೧೫. ನಿದ್ದೆ ಮಾಡು

ನನ್ ಹೆಂಡ್ತಿ ಜಾಸ್ತಿ ನಿದ್ದೆ ಬಡಿಕಿ. ಯಾವಾಗ ಖಾಲಿ ಸಮಯ ಸಿಗುತ್ತಿತ್ತೋ ಆ ಸಮಯದಲ್ಲಿ ಮಲಗೋದು ಆಕೆಯ ಅಭ್ಯಾಸ. ರಾತ್ರಿ ೮–೯ಕ್ಕೆಲ್ಲಾ ಮಲಗುವುದಕ್ಕೂ ತಯಾರು. ಮುಂಜಾನೆ ಕೆಲಸ ಕಾರ್ಯಗಳಿಗೆ ರಜೆಯ ಅವಕಾಶ ಸಿಕ್ಕರೆ ೬–೭ರವರೆಗೂ ಮಲಗುವುದಕ್ಕೆ ತಯಾರು. ಮಧ್ಯಾಹ್ನವಂತೂ ಕಡ್ಡಾಯ ಎರಡು ತಾಸು ಮಲಗಲೇಬೇಕು. ನಾನು ನನ್ನ ಕೆಲಸಗಳ ಒತ್ತಡದಲ್ಲಿ ನಿದ್ದೆ ಮಾಡುವುದೇ ಕಡಿಮೆ. ಒಂದು ದಿನ ನನ್ನ ಹತ್ರ ಬಂದು

ಹೆಂಡ್ತಿ : ನಂಗೆ ಏನಾರ ಸಾಧನೆ ಮಾಡಬೇಕು ಅನಿಸ್ತಾದ ಏನ ಮಾಡ್ಲಿ ?

ನಾನು : ಏನ ಮಾಡಬೇಕು ಮೊದ್ಲು ನಿದ್ದೆ ಮಾಡು.

೧೬. ಜೀವನ ಬ್ಯಾಸರ ಆಗೈತಿ

ಹೆಂಡ್ತಿ : ಈ ಸಂಸಾರ, ಮಕ್ಕಳು, ಗಂಡ ಇದೆ ಜೀವನ ನೋಡಿ, ನೋಡಿ–ಮಾಡಿ ಸಾಕಾಗೈತಿ. ಜೀವನನೇ ಬ್ಯಾಸರ ಆಗೈತಿ ಏನ್ ಮಾಡ್ಲಿ ?

ನಾನು : ಬುದ್ಧ ಹೋದಂಗ ರಾತ್ರಿ ಎದ್ದು ಹೋಗಿಬಿಡು.

ಹೆಂಡ್ತಿ : ಇಲ್ಲ ರಾತ್ರಿನೇ ಹೋಗಬೇಕು ಅನಿಸ್ತಾದ ಆದ್ರೇನು ಮಾಡ್ಲಿ, ಈ ಮಕ್ಕಳು ರಾತ್ರಿ ನನ್ನ ಗಟ್ಟಿಯಾಗಿ ಅಪ್ಪಿಕೊಂಡು ಮಲಗಿರ್ತಾವ ಅದಕ್ಕೆ ಹೋಗಾಕ ಆಗವಲ್ತು.

೧೭. ನಿನ್ನ ಕೂದಲನ ನಾನು ಕಿತ್ತಿನ್ಯಾ ?

ನನ್ನ ಹೆಂಡ್ತಿಗೆ ಮದುವೆಗೆ ಮೊದಲು ಬಹಳಷ್ಟು ಕೂದಲು ಇದ್ದವು. ಚಿಕ್ಕವರು ಇರುವಾಗ ಬಹಳ ಕೂದಲು ಇರುವುದು ಅದು ಪ್ರಕೃತಿ ಸಹಜ ಸರಿ. ಮದುವೆಯಾದ ಮೇಲೆ ನನ್ನ ಹೆಂಡತಿಯ ಕೂದಲು ದಿನಾ ಕಳೆದಂತೆ ಸ್ವಲ್ಪ ಉದುರತ್ತಿದ್ದವು. ಇದೂನೂ ಮನುಷ್ಯನ ಪ್ರಕೃತಿ. ಇದು ಆಕೆಗೆ ಸಹಿಸಲಾರದ ಕೋಪ. ಯಾಕೆಂದರೆ ಅವು ಮದುವೆಯಾದ ಮೇಲೆ ಉದುರಿರುವುದರಿಂದ. ಸದಾ ಬಾಚಿಕೊಳ್ಳುವಾಗ ಇದನ್ನೆ ನೆಪ ಮಾಡಿಕೊಂಡು ಬಂದು ನನಗೆ ಹಿಯಾಳಿಸ್ತಾ ಇದ್ಲು. ಒಂದು ದಿನ ಬಾಚಿಕೊಳ್ತ ಇದ್ದಾಗ ನನ್ನ ಹತ್ರ ಬಂದು

ಹೆಂಡ್ತಿ : ನೋಡು ನನ್ನ ಕೂದ್ಲು ಮದ್ವೆಗೆ ಮುಂಚೆ ಎಷ್ಟಿದ್ವು. ಈಗ ನೋಡು ಎಷ್ಟು ಕಡಿಮೆ ಆಗ್ಯಾವ?

ನಾನು : ನೋಡು ದಿನಾ ಅದನ ತಂದು ನಂಗೆ ಹಿಯ್ಯಾಳಿಸಬೇಡ ಆ ನಿನ್ನ ಕೂದ್ಲನ ನಾನ್ ಕಿತ್ತಿನ್ಯಾ?

೧೮. ನೀನು ಕುಂದ್ರಾದು ಗಾಡಿಮ್ಯಾಲ ನನ್‌ಮ್ಯಾಲ ಅಲ್ಲ

ಎಲ್ಲಿಗಾರ ಹೊರಗಡೆ ಹೋಗಬೇಕಾದಾಗ ನಾವು ಮತ್ತು ಮಕ್ಕಳು ಎಲ್ರೂ ಹೊಂಡಾ ಗಾಡಿ ಮೇಲೆ ಹೋಗ್ತಾ ಇದ್ವಿ. ಗಾಡಿ ಮೇಲೆ ಮೊದಲು ನಾನು ಕುಂತು ಆ ಮೇಲೆ ಮಕ್ಕಳನ್ನು ಕುಂದ್ರಿಸುತ್ತಿದ್ವಿ. ಆ ಮೇಲೆ ಆಕೆ ಕೂಡುತ್ತಿದ್ದಳು. ಒಂದು ಸಲ ಎಲ್ರೂ ಎಲ್ಲೋ ಹೊರಗಡೆ ಹೋಗಬೇಕಿತ್ತು. ನಾನು ಗಾಡಿಯ ಮೇಲೆ ಕುಳಿತು ಮಕ್ಕಳನ್ನು ಕೂಡಿಸಿಕೊಂಡು ಆಕಿ ಕೂಡುವುದಕ್ಕೆ ಮೊದಲೇ ನಾನು ಗಾಡಿ ಮುಂದೆ ಬಿಟ್ಟೆ, ನನಗೆ ಆಕಿ ಕುಂತಿರಬೇಕು ಅನ್ಕಂಡಿದ್ದೆ.

ಹೆಂಡ್ತಿ : ನಾನಿನ್ನು ಕುಂತಿಲ್ಲ

ನಾನು : ಇಲ್ಲ ಗೊತ್ತಾಗ್ಲಿಲ್ಲ ನಾನು ಕುಂತಾಳ ಅಂತ ತಿಳ್ಕಂಡಿದ್ದೆ

ಹೆಂಡ್ತಿ : ಅಲ್ಲಾ ಗಾಡಿ ಮ್ಯಾಲೆ ಕುಂತಿನಾ ಇಲ್ಲಾ ಅಂತ ಭಾರನಾರ ನಿಂಗೆ ಗೊತ್ತಾಗಗ್ಲಿಲ್ಲಾ ?

ನಾನು : ಅಲ್ಲೋ ನನಗೆಂಗೆ ಭಾರ ಗೊತ್ತಾಗ್ತಾದ ? ನೀನು ಕುಂದ್ರಾದು ಗಾಡಿಮ್ಯಾಲ ನನ್‌ಮ್ಯಾಲ ಅಲ್ಲ.

೧೯. ಅಪ್ಪನ್ನೇ ಈ ತೊಟ್ಟಿಲದಾಗ ಹಾಕಿ ಹೋಗಾಮು

ಒಂದು ಸಲ ಹುಲಗಿ ಜಾತ್ರೆಗೆ ಮಕ್ಕಳು ಸಮೇತವಾಗಿ ಎಲ್ಲರೂ ಹೋಗಿದ್ದೆವು. ಆ ಜಾತ್ರೆಯಲ್ಲಿ ಮಕ್ಕಳ ಕಿರಿಕಿರಿಗೆ ಸಾಕು ಸಾಕಾಗಿತ್ತು. ನಂಗೆ ಅದು ಬೇಕು ಇದು ಬೇಡ, ಗೊಂಬೆಕೊಡಿಸು, ಆಟದ ಸಾಮಾನು ಕೊಡಿಸು ಎಂದು ಕಿರಿಕಿರಿ ಮಾಡಿ ನನಗೆ ಸಾಕು ಮಾಡಿ ಬಿಟ್ಟಿದ್ದರು. ಹೇಗೋ ನಿಭಾಯಿಸಿಕೊಂಡು ಮುಂದೆ ಹೋದೆವು. ಅಲ್ಲಿ ಒಂದು ಜಾಗೆಯಲ್ಲಿ UNICEF ನವರು ಒಂದು ಕಾಲಿ ತೊಟ್ಟಿಲು ಕಟ್ಟಿದ್ದರು. ಆ ತೊಟ್ಟಿಲ ಪಕ್ಕದಲ್ಲಿ ಒಂದು ಬೋರ್ಡ್ ಬರೆಯಿಸಿ ಹಾಕಿದ್ದರು. "ನಿಮಗೆ ಬೇಡವಾದ ಮಕ್ಕಳನ್ನು ಇಲ್ಲಿ ಹಾಕಿ ಹೋಗಿರಿ" ಎಂದು ಬರೆಸಿದ್ದರು. ಅದನ್ನು ನೋಡಿದ ಕೂಡಲೇ

ನಾನು : ಈ ಮಕ್ಕಳು ನನಗೆ ಸಾಕು ಸಾಕು ಮಾಡ್ಯಾರ ಅದಕ್ಕೆ ಇವಟ್ರನ್ನ ನಾನು ಇಲ್ಲೆ ತೊಟ್ಟಿಲದೊಳಗೆ ಹಾಕಿ ಹೋಗಿ ಬಿಡ್ತಿನಿ. *(ಆರು ವರುಷದ ಮಗಳು ಮೇಘನಾ)*

ಮೇಘನಾ : ಮಮ್ಮಿ ಅಪ್ಪನ್ನೇ ಈ ತೊಟ್ಟಲದಾಗ ಹಾಕಿ ಹೋಗಮು.

೨೦. ಬಾಚಣಿಕೆಗೆ ದಾರ ನೀನೇ ಕಟ್ಟಿಗ್ಯಾ

ನನ್ನ ಹೆಂಡ್ತಿ ಎಲ್ಲೋ ಸಾಮಾನು ತಗಂಡು ಇನ್ನೆಲ್ಲೋ ಇಟ್ಟು ಬಿಡ್ತಿದ್ಲು. ನಂಗಂತೂ ಹುಡುಕಿ ಹುಡುಕಿ ಸಾಕಾಗ್ತಾ ಇತ್ತು. ಬಾಚಿಕೊಳ್ಳುವುದಕ್ಕೆ ಅನುಕೂಲವಾಗಲೆಂದು ಬಾಚಣಿಕೆಯನ್ನು ಕನ್ನಡಿ ಪಕ್ಕಕ್ಕೆ ಇಡ್ತಿದ್ದೆ. ಆಕಿ

ಬಾಚಿಕೊಂಡು ಬಾಚಣಿಕೆನ ಎಲ್ಲೋ ಇಟ್ಟು ಬಿಡ್ತಿದ್ಲು. ನಂಗೆ ಅರ್ಜೆಂಟು ಇದ್ದಾಗ ಹುಡುಕಾಡುವುದಕ್ಕೆ ಆಗ್ತಾ ಇರುತ್ತಿದ್ದಿಲ್ಲ. ಅದಕ್ಕೆ

ನಾನು : ಈ ಕನ್ನಡಿಗೆ ಬಾಚಣಿಕೆಗೆ ದಾರ ಕಟ್ಟಿ ಬಿಡಬೇಕು ಅನಸ್ತಾದ. ಅಂಗಾದ್ರ ಇವು ಎರಡು ಒಂದೆ ಕಡೆ ಇರ್ತಾವ.

ಹೆಂಡ್ತಿ : ದಾರನ ಕನ್ನಡಿಗೆ ಕಟ್ಟಬೇಡ ನಿಂಗೆ ಬಾಚಣಿಕೆ ಕಟಿಗ್ಯಾ ಅಂಗಾದ್ರೆ ಅದು ಎಲ್ಲೂ ಹೋಗಲ್ಲ.

೨೧. ಪರ್ಸನಲ್ ನಂಬರ್ ಅದು

ನಾನು ಹೆಚ್ಚು ಸಾರ್ವಜನಿಕ ವಿಷಯಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದೆ. ಮತ್ತು ಮೇಲಾಗಿ ಉಪನ್ಯಾಸಕನಾಗಿ ವಿದ್ಯಾರ್ಥಿಗಳ ಹತ್ತಿರ ಹೊಂದಿಕೊಂಡು ಬದುಕುವವನು. ನಾನು ಬಹಳ ದಿನದಿಂದಲೂ ಮೊಬೈಲ್‌ನ ಒಂದೇ ನಂಬರ್ ಇಟ್ಟುಕೊಂಡಿದ್ದೆ. ಹೀಗಾಗಿ ವಿದ್ಯಾರ್ಥಿಗಳಿಂದ ಬೇರೆ ಬೇರೆಯವರಿಂದ ಕರೆಗಳ ಕಿರಿಕಿರಿ ಸಾಕು ಸಾಕಾಗಿತ್ತು. ಒಂದೊಂದು ಸಲ ರಾತ್ರಿ ೧೦–೧೧ಕ್ಕೂ ಕರೆ ಬರ್ತಾ ಇದ್ದವು. ಪ್ರವೇಶ, ಸ್ಕಾಲರ್‌ಶಿಫ್, ಫೀ, ಹಾಲ್‌ಟಿಕೇಟ್, ಕೊನೆದಿನಗಳು ಇತ್ಯಾದಿಗಳ ಅವರ ಪ್ರಶ್ನೆಗಳಿಗೆ ಸಾಕಾಗಿ ಹೋಗುತ್ತಿತ್ತು. ಅದಕ್ಕೆ ನಾನು ಹಳೆಯ ನಂಬರಿನ ಜೊತೆಗೆ ಮೊತ್ತೊಂದು ಹೊಸ ಮೊಬೈಲ್ ನಂಬರ್ ತೆಗೆದುಕೊಂಡೆ. ಅದನ್ನು ಯಾರಿಗೂ ಕೊಡಬಾರದು, ಕಿರಿಕಿರಿಯಾದಾಗ ಹಳೆ ನಂಬರ ಸ್ವಲ್ಪತ್ತು ಸ್ವಿಚ್ ಆಫ್ ಮಾಡಬಹುದೆಂದು ತೀರ್ಮಾನಿಸಿದೆ. ಈ ಹೊಸ ನಂಬರ ಕೇವಲ ಬೆರಳಣಿಕೆಯಷ್ಟು ಜನರಿಗೆ ಮಾತ್ರ ಕೊಟ್ಟು ಪರ್ಸನಲ್ ಆಗಿ ಉಪಯೋಗಕ್ಕೆ ಇಟ್ಟುಕೊಂಡಿದ್ದೆ. ಆ ನಂಬರ್ ನನ್ನ ಹೆಂಡತಿಗೆ ಗೊತ್ತಿರಲಿಲ್ಲ. ನಾನು ಆ ನಂಬರನ್ನು ಆಮೇಲೆ ಹೇಳಿದರಾಯ್ತು ಬಿಡು ಎಂದುಕೊಂಡಿದ್ದೆ. ಒಂದು ಸಲ ಆ ನಂಬರ ಆಕೆಗೆ ಗೊತ್ತಾಗಿ.

ಹೆಂಡ್ತಿ : ಅಲ್ಲಾ ನೀನು ಒಂದು ಹೊಸ ನಂಬರ್ ತಗಂಡಿದ್ಯಲ್ಲ.

ನಾನು : ಹೌದು

ಹೆಂಡ್ತಿ : ಮತ್ತೆ ಆ ನಂಬರ ನಂಗೆ ಕೊಡಬಾರದ ?

ನಾನು : ಇಲ್ಲ ಅದು ಪರ್ಸನಲ್ ನಂಬರ್

ಹೆಂಡ್ತಿ : ಪರ್ಸನಲ್ ಇರ್ಲಲ್ಲ ನಂಗೆ ಕೊಡು

ನಾನು : ಆ ನಂಬರ ನಿಂಗೆ ಗೊತ್ತಾದ್ರೆ ಅದೆಂಗೆ ಪರ್ಸನಲ್ ಆಗ್ತಾದ ?

೨೨. ಕೊಪ್ಪಳನೇ ಕೇಳ್ತಿದ್ದಿ

ಒಂದು ದಿನ ಗಂಡ ಹೆಂಡತಿ ಇಬ್ರು ಮಾರ್ಕೆಟಗೆ ಹೋಗಿದ್ವಿ. ಅಲ್ಲಿ ಪ್ಯಾಂಟ್, ಶರ್ಟ, ಲುಂಗಿ ಇತ್ಯಾದಿಗಳನ್ನು ನನಗೆ ಮಾತ್ರ ತಗಂಡು ಬಂದ್ವಿ. ಮನೆಗೆ ಬಂದ ಮೇಲೆ

ಹೆಂಡ್ತಿ : ಅಲ್ಲಾ ಇಷ್ಟೆಲ್ಲಾ ನೀನು ತಗಂಡಿ, ಕನಿಷ್ಠ ನಂಗೆ ಒಂದು ಲಂಗನರಾ ಕೊಡಿಸಿದ್ಯಾ? ಹೋಗ್ಲಿ ನಿಂಗೆ ಏನು ಬೇಕಂತನರ ಕೇಳಿದ್ಯಾ ?

ನಾನು : ನಿಂಗೆ ಏನು ಬೇಕಂತ ಕೇಳಿದ್ರೆ ಇಡೀ ಕೊಪ್ಪಳನೇ ಬೇಕಂತ ಕೇಳ್ತಿದ್ದಿ, ಅದಕ್ಕೆ ನಾನು ಕೇಳಲಿಲ್ಲ.

೨೩. ನಾನು ಈ ಫೋಟೋದಾಗ ಇಲ್ವಲ್ಲಪ್ಪಾ ?

ಒಂದು ಸಲ ನಾನು ನನ್ನ ಹೆಂಡ್ತಿ ನಮ್ಮ ಮದುವೆ ಫೋಟೋ ನೋಡುತ್ತಾ ಕುಂತಿದ್ವಿ. ಅವಾಗ ಮೂರು ವರ್ಷದ ನಮ್ಮ ಮಗ ಶಶಾಂಕನೂ ಆ ಫೋಟೋ ನೋಡ್ತಾ ಇದ್ದ. ಅದರಲ್ಲಿ ಅವ್ವ, ತಾತ, ಆಂಟಿ ಎಲ್ಲರನ್ನೂ ನೋಡಿದ

ಶಶಾಂಕ : ಅಪ್ಪ ಈ ಪೋಟೋದಾಗ ನಾನು ಇಲ್ವಲ್ಲಾ ?

ನಾನು : ಮಗನೆ! ನಾನು ನಿಮ್ಮಮ್ಮನ ಮದುವೆ ಮಾಡ್ಕೋವಾಗ ನೀನು ಹೊರಗ ಆಟ ಆಡಾಕ ಹೋಗಿದ್ದಿ. ಅದಕ್ಕೆ ನೀನು ಆ ಫೋಟೋದಾಗ ಇಲ್ಲ.

ಶಶಾಂಕ : ಮತ್ತೆ ನಾನು ಬರತನ ತಡಿಬೇಕಿತ್ತು ?

ನಾನು : ಲೇ ಮಗನೇ! ನಮಗೆ ಅರ್ಜೆಂಟು ಇತ್ತು ನೀನು ಬರತನ ತಡಕಳಕ ಆಗ್ಲಿಲ್ಲ. ಅದಕ್ಕೆ ಮದ್ವೆ ಬೇಗ ಮಾಡ್ಕೆಂಡ್ವಿ.

೨೪. ಹೊಸರುಚಿ ನನ್ನ ಮೇಲೆ ಪ್ರಯೋಗನಾ ?

ಒಂದು ದಿನ ಕಾಲೇಜ್ ಮುಗಿಸಿಕೊಂಡು ನಾನು ಮನೆಗೆ ಬಂದೆ. ಮನೆಯಲ್ಲಿ ಘಮ ಘಮ ವಾಸನೆ ಬರುತ್ತಿತ್ತು. ಓ... ಏನೋ ಹೊಸ ಅಡುಗೆ ಮಾಡಿರಬೇಕೆಂದುಕೊಂಡೆ. ಆಕೆ ನನ್ನ ಹತ್ರ ಬಂದು

ಹೆಂಡ್ತಿ : ಇವತ್ತು ಟಿ.ವಿ.ನೋಡಿ ಹೊಸ ರುಚಿ ಅಡುಗೆ ಮಾಡಿನಿ ಅದನ್ನ ಉಂಡು ಯಂಗೈತಿ ಅಂತ ಹೇಳು

ನಾನು : ಓ! ಆ ಅಡುಗೇನ ನನ್ ಮ್ಯಾಲೆ ಪ್ರಯೋಗ ಮಾಡ್ತಿದ್ಯಾ ?.

೨೫. ಒಂದು ಸಲ ಮಾಡಿದ ತಪ್ಪನ್ನ ಮತ್ತೊಮ್ಮೆ ಮಾಡಲ್ಲ

ಒಂದು ಸಲ ಎಲ್ಲಿಗೋ ಹೋಗಬೇಕಿತ್ತು. ನನ್ ಹೆಂಡ್ತಿ ರೆಡಿ ಆಗ್ತಾ ಇದ್ಲು. ಎಲ್ಲಾ ಅಲಂಕಾರ ಮಾಡಿಕೊಂಡು

ಹೆಂಡ್ತಿ : ಬಾ ಇಲ್ಲಿ

ನಾನು : ಏನು ?

ಹೆಂಡ್ತಿ : ಈ ನೆಕ್ಲೇಸ್ ನನ್ ಕೊಳ್ಳಾಗ ಹಾಕು

ನಾನು : ನೀನೆ ಹಾಕ್ಯಾ

ಹೆಂಡ್ತಿ : ಇಲ್ಲ ಹಿಂದಕ ತಾಳಿ ಯಂಗ ಕಟ್ಟಿದ್ದಿ ಅದರಂಗ ಕಟ್ಟು

ನಾನು : ಇಲ್ಲ ನಾನು ಒಂದ ಸಲ ಮಾಡಿದ ತಪ್ಪನ್ನ ಮತ್ತೊಮ್ಮೆ ಮಾಡಲ್ಲ.

೨೬. ಮಮ್ಮಿ ನಂದ್ಯಾವಾಗ ವೆಡ್ಡಿಂಗ್ ಎನ್ವರ್ಸರಿ ?

ನಮ್ಮದು ವೆಡ್ಡಿಂಗ್ ಎನ್ವರ್ಸರಿ ಇತ್ತು. ಅವತ್ತು ದೇವಸ್ಥಾನಕ್ಕೆ ಹೋಗುವುದಕ್ಕೆ ನನ್ ಹೆಂಡ್ತಿ ರೆಡಿಯಾಗಿದ್ಲು. ಮೂರು ವರ್ಷದ ಮಗ ಶಶಾಂಕನನ್ನೂ ರೆಡಿ ಮಾಡ್ತಾ ಇದ್ಲು. ಆಗ

ಶಶಾಂಕ : ಮಮ್ಮಿ ಇವತ್ಯಾಕ ದೇವಸ್ಥಾನಕ್ಕೆ ಹೋಗಬೇಕು ?

ಮಮ್ಮಿ : ಇಲ್ಲಪ್ಪ ಇವತ್ತು ನಮ್ಮದು ವೆಡ್ಡಿಂಗ್ ಎನ್ವರ್ಸರಿ ಇದೆ ಅದಕ್ಕೆ ದೇವಸ್ಥಾನಕ್ಕೆ ಹೋಗಬೇಕು.

ಶಶಾಂಕ : ಮತ್ತೆ ಮಮ್ಮಿ ನಂದ್ಯಾವಾಗ ವೆಡ್ಡಿಂಗ್ ಎನ್ವರ್ಸರಿ ?.

೨೭. ಡುಮ್ಮಿ ಮಿಸ್

ನಾವು ದಪ್ಪ ಇರೋರಿಗೆಲ್ಲಾ ಡುಮ್ಮಿ ಅಂತ ಕರಿತಾ ಇದ್ವಿ. ಮೊದಲನೆ ದಿನ ಮೂರು ವರ್ಷದ ಶಶಾಂಕ ಶಾಲೆಗೆ ಹೋಗಿ ಬಂದ ಅವನಿಗೆ

ನಾನು : ನಿಮ್ಮ ಮಿಸ್ ಹೆಸರು ಏನಪ್ಪಾ ?

ಶಶಾಂಕ : ನಮ್ಮ ಮಿಸ್ ಹೆಸರಾ? ಡುಮ್ಮಿ ಮಿಸ್

೨೮. ಅಮ್ಮ ಒಳಗ ಇದಾಳ ಬಾ

ಶಶಾಂಕ ಎರಡು–ಮೂರು ವರ್ಷದವನಿದ್ದಾಗ ಅವರಮ್ಮಗೆ ಒಂದೊಂದು ಸಲ ಮಮ್ಮಿ ಅಂತಿದ್ದ, ಮತ್ತೊಂದು ಸಲ ಅಮ್ಮ ಅಂತಿದ್ದ. ಒಂದು ದಿನ ಬೆಳಿಗ್ಗೆ

ಭಿಕ್ಷುಕ ಹುಡುಗ: ಅಮ್ಮ ಏನಾದ್ರೂ ಇದ್ರೆ ಕೊಡಮ್ಮ

ಶಶಾಂಕ : ಅಮ್ಮನಾ ? ಒಳಗೆ ಇದಾಳ ಬಾ.

೨೯. ಎಮ್ಮೆ ಹಿಂದೆ ಕೋಣಗರ

ಶಶಾಂಕನಿಗೆ ಅಪ್ಪನಿಗಿಂತ ಅಮ್ಮನ ಮೇಲೆ ಬಹಳ ಪ್ರೀತಿ. ಯಾವಾಗ್ಲೂ ಅಮ್ಮನಿಂದನೇ ತಿರುಗ್ತಾ ಇದ್ದ. ಆಕಿ ಎಲ್ಲೆಲ್ಲಿಗೆ ಹೋದ್ರೂ ಆಕೆ ಹಿಂದಾನೆ ಹೋಗ್ತಿದ್ದ. ಇದಕ್ಕೆ ಹಳ್ಳಿಯಲ್ಲಿ ಒಂದು ಗಾದೆ ಮಾತು ಬಳಕೆ ಮಾಡುತ್ತಾರೆ. ಆಕಳು ಹಿಂದೆ ಕರು ಎಂಬ ಮಾತು.

ನಾನು : ಅಂಗ್ಯಾಕ ಅವನು ಯಾವಾಗ್ಲೂ ಅಮ್ಮನ ಹಿಂದೆನೆ ತಿರುಗ್ತಾ ಇರ್‍ತಾನ.

ಹೆಂಡ್ತಿ : ಆಕಳು ಹಿಂದೆ ಕರು ಇದ್ದಂಗ

ನಾನು : ಅಲ್ಲೋ ಅದು ಎಮ್ಮೆ ಹಿಂದೆ ಕೋಣಗರನಂತೆ ತಿರುಗಾತ್ತಾನ.

೩೦. ಇಬ್ಬರು ಮೂರ್ಖರು ಸಿದ್ಧವಾದಂತೆ

ಪೇಪರ್‌ನಲ್ಲಿ ಒಂದು ವಾಕ್ಯ ಬಂದಿತ್ತು ಅದನ್ನು ಓದಿದ ನನ್ನ

ಹೆಂಡ್ತಿ : ಇಲ್ಲಿ ನೋಡು ಪೇಪರದಾಗ ಒಂದು ವಾಕ್ಯ ಬಂದೈತಿ

ನಾನು : ಏನದು ?

ಹೆಂಡ್ತಿ : ಒಬ್ಬ ಮೂರ್ಖರ ಜೊತೆ ವಾದ ಮಾಡಿದ್ರೆ ಇಬ್ಬರು ಮೂರ್ಖರು ಸಿದ್ಧವಾದಂತೆ

ನಾನು : ಅದ್ಕೆ ಕಣೆ ನಾನು ನಿನ್ನ ಜೊತೆ ಜಾಸ್ತಿ ವಾದ ಮಾಡದೇ ಸುಮ್ಮನಿರೋದು ತಿಳ್ಕ.

೩೧. ಎಲ್ರೂ ಅಳ್ತಿರ್‍ತರಲ್ಲಾ ಅದ್ಕೆ ನಾನೂ ಅಳ್ತೀನಿ

ಮೂರು ವರ್ಷದ ಶಶಾಂಕನ ಮೊದಲನೆ ಸಲ ಬೇಬಿ ಕ್ಲಾಸ್‌ಗೆ ಕಳಿಸ್ತಾ ಇದ್ವಿ. ದಿನಾ ಅವರಮ್ಮ ಬಿಟ್ಟು ಮತ್ತೆ ಕರೆದುಕೊಂಡು ಬರ್‍ತಾ

ಇದ್ಲು. ಆ ಶಾಲೆಯ ಶಿಕ್ಷಕಿ ನಿಮ್ಮ ಮಗ ಶಾಲ್ಯಾಗ ದಿನಾ ಅಳ್ತಾ ಕುಂದ್ರತಾನ ನೋಡ್ರಿ ಎಂದು ತಿಳಿಸಿದ್ದಳು. ಅದಕ್ಕೆ ಮನೆಯಲ್ಲಿ ನನ್ನ

ಹೆಂಡ್ತಿ : ಯಾಕೋ ಗುಂಡ ಶಾಲೇಲಿ ಅಳ್ತಾ ಕುಂದ್ರಿತಿದ್ಯಂತಲ್ಲಾ ?

ಶಶಾಂಕ : ಇಲ್ಲಮ್ಮ ಅಲ್ಲಿ ಎಲ್ಲಾ ಹುಡ್ರು ಅಳ್ತಾ ಕುಂತಿರ್ತಾರ. ಅದಕ್ಕೆ ನಾನೊಬ್ಬನೆ ಯಾಕ ಸುಮ್ನಿರ್ಲಿ ? ಅದಕ್ಕೆ ನಾನೂ ಅಳ್ತೀನಿ

೩೨. ಶಾಲೆ ಇಲ್ಲಂತ ಹೇಳಮ್ಮ

ಮೂರು ವರ್ಷದ ನಂತರ ಶಶಾಂಕನ ಬೇಬಿ ಕ್ಲಾಸಿಗೆ ಅಡ್ಮಿಷನ್ ಮಾಡ್ಸಿದ್ವಿ. ಅವನು ಒಲ್ಲದ ಮನಸ್ಸಿನಿಂದ ಶಾಲೆಗೆ ಹೋಗ್ತಾ ಇದ್ದ. ಒಂದೊಂದು ಸಲ ಹೋಗಲ್ಲ ಅಂತ ಹಠ ಮಾಡ್ತಿದ್ದ. ಅವರಮ್ಮ ಬಲವಂತ ಮಾಡಿ ಶಾಲೆಯಲ್ಲಿ ಬಿಟ್ಟು ಬರ್ತಾ ಇದ್ಲು, ಒಂದು ದಿನ

ಶಶಾಂಕ : ಮಮ್ಮಿ ಇವತ್ತು ಶಾಲೆ ಐತ್ಯ ?

ಮಮ್ಮಿ : ಐತಿ

ಶಶಾಂಕ : ಇಲ್ಲಂತ ಹೇಳಮ್ಮ

ಮಮ್ಮಿ : ಶಾಲೆ ಐತೆ, ಅದ್ಕೆ ಐತೆ ಅಂತ ಹೇಳ್ತಿನಿ. ಇಲ್ಲಂತ ಯಾಕ ಹೇಳ್ಲಿ ?

ಶಶಾಂಕ : (ಅಳುತ್ತಾ) ಇಲ್ಲಂತ ಹೇಳಮ್ಮ

ಮಮ್ಮಿ : ಆಯ್ತಪ್ಪ ಇವತ್ತು ನಿಂದು ಶಾಲೆ ಇಲ್ಲ, ಅಪ್ಪಂದು ಕಾಲೇಜು ಇಲ್ಲ, ಅಂಗೆ ಅಮ್ಮಂದೂ ಅಡುಗೆ ಮಾಡದು ಇಲ್ಲ. ಎಲ್ಲಾರ್‍ದು ಇವತ್ತು ರಜೆ ಆಯ್ತಾ.

ಶಶಾಂಕ : ಇಲ್ಲಮ್ಮ ಅಡಿಗೆ ಮಾಡದು ಐತಿ ಅಂತ ಹೇಳು

ಮಮ್ಮಿ : ಎಲ್ಲಾ ಇಲ್ಲ ಅಂದ ಮೇಲೆ ಅಡಿಗೆ ಯಾಕ ಇರ್ತಾದ! ಅದುನೂ ರಜೆ.

೩೩. ನಿನ್ನನೂ ಅಪ್ಪಿಕೊಂಡು ಹೆಗಲ ಮ್ಯಾಲೆ ಹೊತ್ತುಕೊಂಡು ತಿರಗ್ತಿದ್ದೆ

ನನಗೆ ಮಕ್ಕಳ ಮೇಲೆ ಅವರ ತಾಯಿಗಿಂತ ಪ್ರೀತಿ ಸ್ವಲ್ಪ ಕಡಿಮೆ ಅನ್ನಬಹುದು. ಯಾಕಂದ್ರೆ ನಾನು ಬಹಳಷ್ಟು ಬೇರೆ ಬೇರೆ ಕೆಲಸ–ಕಾರ್ಯಗಳಲ್ಲಿ ತೊಡಗುವುದರಿಂದ ಮಕ್ಕಳ ಕಡೆಗೆ ಹೆಚ್ಚು ಗಮನ ಹರಿಸುವುದಕ್ಕೆ ಆಗುತ್ತಿರಲಿಲ್ಲ. ಇದು ನನ್ನ ಹೆಂಡತಿಗೆ ಸಹಿಸಲಾರದ ಕೋಪ. ಒಂದು ಸಲ ಮನೆಯೊಳಗೆ ಬಂದೆ. ಮಗಳು

ಮೇಘನಾ : ಅಪ್ಪ ಬಂದ

ಹೆಂಡ್ತಿ : ಬಂದ್ರೆ ಬರ್ಲಿ ಬಿಡಮ್ಮ ಏನಂಗ ಮಕ್ಕಳನ ಅಪ್ಪಿಕೊಂಡು ಹೆಗಲ ಮೇಲೆ ಎತ್ತಿಕೊಂಡು ಊರೆಲ್ಲಾ ತಿರಗ್ತಾನ.

ನಾನು : ನೋಡು ನನ್ನ ಕೆಲ್ಸ ಜಾಸ್ತಿ ಇರ್ತಾದ. ಅದಕ್ಕೆ ಅಂಗ ಮಾಡಾಕಾ ಆಗಲ್ಲ. ಒಂದು ವೇಳೆ ನಾನು ಕೆಲ್ಸ ಕಾರ್ಯ ಇಲ್ಲದ ವ್ಯಕ್ತಿ ಆಗಿದ್ರೆ ಬರಿ ಮಕ್ಕಳ್ನಷ್ಟೇ ಏನು, ನಿನ್ನನ್ನೂ ಅಪ್ಪಿಕೊಂಡು ಹೆಗಲ ಮ್ಯಾಲ ಹೊತ್ತುಕೊಂಡು ತಿರಗ್ತಿದ್ದೆ.

೩೪. ನಿನ್ನ ಮಾರಿದ್ರೆ ಎಷ್ಟು ಹಣ ಬರಬಹುದು ?

ಒಂದು ಸಲ ಕೊಪ್ಪಳಕ್ಕೆ ಸೇಲ್ ಅಂಗಡಿ *(ಮಾರಾಟ ಮಳಿಗೆ)* ಬಂದಿತು. ಅಲ್ಲಿ ಎಲ್ಲಾ ತರಹದ ಸಾಮಾನುಗಳು ಮಾರಾಟಕ್ಕೆ ಇಟ್ಟಿದ್ದರು. ಆಗ ನನಗೆ ದುಡ್ಡಿನ ಕೊರತೆ ಬಹಳ ಇತ್ತು. ಸ್ವಲ್ಪ ತೊಂದರೆಯಲ್ಲಿ ಸಂಸಾರ ನೀಗಿಸುತ್ತಿದ್ದೆ. ಇಂತಹ ಕ್ಲಿಷ್ಟ ಪರಿಸ್ಥಿತಿಯಲ್ಲಿ ನನ್ನ

ಹೆಂಡ್ತಿ : ಗ್ರೌಂಡನಲ್ಲಿ ಸೇಲ್ ಬಜಾರ ಬಂದೈತಿ ಏನಾರ ತರಾಕ ಹೋಗೋಣ್ವಾ ?

ನಾನು : ನಾನೇ ದುಡ್ಡಿಲ್ಲಂತ ಗೋಳಾಡ್ತಿನಿ

ಹೆಂಡ್ತಿ : ಅದೆಲ್ಲ ನಂಗೆ ಗೊತ್ತಿಲ್ಲ ನಾವು ಹೋಗ್ಲೆಬೇಕು

ನಾನು : ಒಂದು ಕೆಲ್ಸ ಮಾಡು ಆ ಸೇಲ್ ಬಜಾರದಾಗ ನನ್ನೇ ಸೇಲ್ ಮಾಡು ಹಣ ಬರ್‍ತಾದ

ಹೆಂಡ್ತಿ : ಹೌದು ನೋಡು ಒಂದು ವೇಳೆ ನಿನ್ನ ಮಾರಿದ್ರೆ ಎಷ್ಟು ಹಣ ಬರಬಹುದು?.

೩೫. ನಾನುನೂ ಅಂಬಾನೆ

ಮನೆ ಹತ್ರ ದಿನಾ ಬೆಳಗ್ಗೆ ಬೀದಿ ಆಕಳುಗಳು ಬರ್‍ತಾ ಇದ್ವು. ನನ್ನ ಹೆಂಡ್ತಿ ಅವುಗಳಿಗೆ ಅಕ್ಕಿ, ಬೆಲ್ಲ ಇಲ್ಲವೆ ಒಣ ರೊಟ್ಟಿ ಕೊಡ್ತಾ ಇದ್ಲು. ಹೆಚ್ಚಾನು ಹೆಚ್ಚು ಒಣ ರೊಟ್ಟಿ ಕೊಡ್ತಿದ್ಲು. ಈ ಆಕಳುಗಳಿಗೆ ಮೂರು ವರ್ಷದ ಮಗ ಶಶಾಂಕ 'ಅಂಬಾ' ಎಂದು ಕರೆಯುತ್ತಿದ್ದ. ಆಕಳುಗಳು ಬಂದ ಕೊಡಲೇ ಶಶಾಂಕನಿಗೆ ಅವರಮ್ಮ ಒಣರೊಟ್ಟಿ ಕೊಡತಿದ್ಲು. ಅದನ್ನು ತಂದು ಅವುಗಳಿಗೆ ಹಾಕುತ್ತಿದ್ದ. ಒಂದು ಸಲ ನಾನು ಊಟ ಮಾಡುವುದಕ್ಕೆ ಕುಳಿತಿದ್ದೆ. ಆವಾಗ ನನ್ನ ಹೆಂಡ್ತಿ ಬಹುಶಃ ಏನೂ ಇರ್‍ಲಿಕ್ಕಿಲ್ಲ ಅದಕ್ಕೆ ಒಣರೊಟ್ಟಿ ತಂದು ಕೊಟ್ಲು. ಆಗ

ಶಶಾಂಕ : ಅಮ್ಮಾ ಈ ರೊಟ್ಟಿ ಅಂಬಾಕೆ ಕೊಡದು

ನಾನು : ಮಗನೆ ನಾನುನೂ ಅಂಬಾನೆ ನಿಮ್ಮಮ್ಮ ನನ್ನನ್ನು ಅಂಬಾನ ತರನೇ ಮಾಡ್ಯಾಳ.

೩೬. ಹೆಂಡ್ತಿ ಮೊದ್ಲೆ ನಂಗೆ ಜೋಳಿಗೆ ಕೊಟ್ಟಾಳ

ಬಟ್ಟೆ ಖರೀದಿಗೆ ಅಂಗಡಿಗೆ ಇಬ್ಬರು ಹೋಗಿದ್ವಿ. ಅಲ್ಲಿ ಆಕಿ ತನಗೆ ಬೇಕಾದ ಬಹಳಷ್ಟು ಬಟ್ಟೆ ಖರೀದಿ ಮಾಡಿದಳು. ಅಷ್ಟೂ ಬಟ್ಟೆಗಳು ಚಿಕ್ಕ ಬ್ಯಾಗಿನಲ್ಲಿ ಹಿಡಿಯುತ್ತಿರಲಿಲ್ಲ. ಅದಕ್ಕೆ ದೊಡ್ಡ ಬ್ಯಾಗೇ ಬೇಕಿತ್ತು. ಅಂಗಡಿಯವರು ದೊಡ್ಡ ಚೀಲಗಳಿಗೆ ಜೋಳಿಗೆ ಎಂದು ಕರೆಯುತ್ತಾರೆ. ಅದು ಬಹಳ ದೊಡ್ಡದಿದ್ದು, ಹೆಗಲ ಮೇಲೆ ಹಾಕಿಕೊಳ್ಳುವುದಕ್ಕೂ ಬರುವಂತ್ತಿತ್ತು. ಆಗ ಅಲ್ಲಿನ ಕೆಲಸ ಮಾಡುವ ಹುಡುಗರಿಗೆ

ಅಂಗಡಿಯವನು : ಏ ತಮ್ಮ, ಸಾರ್‌ಗೆ ಇಲ್ಲಿ ಒಂದು ಜೋಳಿಗೆ ಕೊಡೋ

ನಾನು : ನೀವೇನ ಕೊಡ್ತಿರಿ ಜೋಳಿಗೆ, ನನ್ನ ಹೆಂಡ್ತಿ ಮೊದ್ಲೆ ನಂಗೆ ಜೋಳಿಗೆ ಕೊಟ್ಟಾಳ.

೩೭. ಯಾವುಟ್ರದಂತ ಕೇಳ್ಲಿ?

ಬೆಳಿಗ್ಗೆ ನನಗೆ ಬಹಳ ಅವಸರ. ಯಾಕೆಂದ್ರೆ ೭-೩೦ ಕ್ಕೆಲ್ಲಾ ಕಾಲೇಜಿಗೆ ಹೋಗಬೇಕು. ಅಷ್ಟರೊಳಗೆ ನಾನು ಒಂದು ತಾಸು ವಾಕಿಂಗ್ ಮುಗಿಸಿಕೊಂಡು, ಸ್ನಾನಮಾಡಿ, ಇಸ್ತ್ರೀ ಮಾಡಿಕೊಂಡು ಇತ್ಯಾದಿ ಎಲ್ಲಾ ಕೆಲಸ-ಕಾರ್ಯಗಳನ್ನು ಮುಗಿಸಿಕೊಳ್ಳಬೇಕು. ನನ್ನ ಹೆಂಡತಿಯದೂ ಅವಸರ. ಮಕ್ಕಳಿಗೆಲ್ಲಾ ಸ್ನಾನ ಮಾಡಿಸಿ, ಊಟ ಮಾಡಿಸಿ, ಟಿಫನ್ ಬಾಕ್ಸ ರೆಡಿಮಾಡಬೇಕು. ಇಂತಹ ಅವಸರದಲ್ಲಿ ನನಗೆ ಸಾಮಾನುಗಳು ಹುಡುಕುವುದು ಎಂದರೆ ಬಹಳ ತ್ರಾಸು. ಟವಲ್, ಎಣ್ಣೆ, ಇತ್ಯಾದಿ ಸಾಮಾನುಗಳು ಎಲ್ಲೆಲ್ಲೊ ಇಟ್ಟಿರ್ತಿದ್ಲು. ನಾನು ಕೂಗಾಡುತ್ತಿದ್ದೆ. ಇಂತಹ ಸಂದರ್ಭದಲ್ಲಿ ಹೊರಗಡೆ.

ಭಿಕ್ಷುಕರು : ಅಮ್ಮ... ಅಮ್ಮ... ಏನಾರ ಇದ್ರೆ ಹಾಕಮ್ಮ *(ಗಟ್ಟಿ ಧ್ವನಿಯಲ್ಲಿ ಹೊರಗೆ ಒದರುತ್ತಿರುತ್ತಾರೆ)*

ನಾನು : ನನಗೆ ಒಂದು ಸಾಮಾನು ಸಿಗವಲ್ತು ಟೈಮ್ ಆಗ್ತಾ ಇದೆ, ನೀನು ಸಾಮಾನು ಎಲ್ಲೆಲ್ಲೋ ಇಟ್ಟು ಬಿಡ್ತಿದ್ದಿ, ಅವುಟ್ರ್ನ ಹುಡಿಕಿ ಕೊಡು ಬಾ

ಹೆಂಡ್ತಿ : ಹೊರಗ ಅವು ಒದ್ರುತಾವ ಒಳಗೆ ಇದು ಒದ್ರುತಾದ ನಾನು ಯಾವುಟ್ರದಂತ ಕೇಳ್ಲಿ. ?

೩೮. ಸೊಳ್ಳೆ ವಾಕಿಂಗ್ ಹೋಗ್ತಾವ

ನಾನು ಸೊಳ್ಳೆಗಳ ಕಾಟಕ್ಕೆ ಹೆದರಿ ಬಾಗಿಲ, ಕಿಟಕಿಗಳನ್ನು ಹೆಚ್ಚಾಗಿ ತೆರೆಯುತ್ತಿದ್ದಿಲ್ಲ. ಮತ್ತು ತೆರೆಯುವುದಕ್ಕೂ ಬೇಡ ಎನ್ನುತ್ತಿದ್ದೆ. ಒಂದು ವೇಳೆ ತೆರೆದರೆ ಬೈಯುತ್ತಿದ್ದೆ. ನನ್ನ ಹೆಂಡ್ತಿ ಸಂಜೆ ಮತ್ತು ರಾತ್ರಿಯೆಲ್ಲಾ ಕಿಡಕಿ, ಬಾಗಿಲು ಮುಚ್ಚಿ ಬೆಳಗ್ಗೆ ಎಲ್ಲವುಗಳನ್ನು ತೆರಿತಿದ್ಲು. ನನಗೆ ಬಹಳ ಕೋಪ ಬಂದು ಹೆಂಡ್ತಿಗೆ

ನಾನು : ಆ ಕಿಟಕಿ ಬಾಗಿಲು ಯಾಕ ತೆರಿತಿದ್ದಿ ? ಸೊಳ್ಳೆಗಳು ಒಳಗೆ ಬರ್ತಾವ

ಹೆಂಡ್ತಿ : ಇಲ್ಲಾ ಬರಲ್ಲ ಅವು ರಾತ್ರಿಯೆಲ್ಲಾ ಮನ್ಯಾಗ ಇರ್ತಾವ, ಬೆಳಗ್ಗೆ ಹೊರಗ ಹೋಗ್ತಾವ.

ನಾನು : ಅದೆಂಗ ಹೊರಗೆ ಹೋಗ್ತಾವ

ಹೆಂಡ್ತಿ : ನೀನು ಬೆಳಿಗ್ಗೆ ವಾಕಿಂಗ್ ಹೋಗ್ತಿದ್ಯಲ್ಲ, ಅದರಂಗ ಅವುನೂ ವಾಕಿಂಗ್ ಹೋಗ್ತಾವ ಬಿಡು

೩೯. ನಮ್ಮಪ್ಪಗೂ ನಿಂಗೂ ಸೇಮ್ ಹೊಟ್ಟೆ ಬಂದೈತಿ

ನನ್ನ ಹೆಂಡ್ತಿ ನನ್ನ ಅಕ್ಕನ ಮಗಳು. ನಾನು ಮದುವೆಗೆ ಮೊದಲು ಬಹಳ ತೆಳ್ಳಗಿದ್ದೆ. ಮದುವೆ ಆದ ಮೇಲೆನೆ ಸ್ವಲ್ಪ ದಪ್ಪ ಆಗಿದ್ದು. ಸ್ವಲ್ಪ ಹೊಟ್ಟೆ ಬೇರೆ ಬಂದಿತ್ತು ಅದಕ್ಕೆ ಆಕೆ

ಹೆಂಡ್ತಿ : ನಮ್ಮಪ್ಪಗೂ ನಿಂಗೂ ಇಬ್ರಗೂ ಹೊಟ್ಟೆ ಬಂದೈತಿ ನೋಡು, ಇಬ್ರೂ ಒಂದೇ ತರ. ಇಬ್ರೂ ಸೇಮ್ ಇದ್ದೀರಿ.

ನಾನು : ಏ ನಂಗೂ ನಿಮಪ್ಪಗೂ ಹೋಲಿಕೆ ಮಾಡಬೇಡ. ನಿಮಪ್ಪ ಐದು ಪೈಸೆ ರೊಕ್ಕ ಕೊಡಲಾರ್ದೆ ನನಗೆ ನಿನ್ನ ಮದ್ವೆ ಮಾಡಿಕೊಟ್ಟ, ನಾನು ನಿಮಪ್ಪನಂಗ ಇದ್ದೀನೇನು ? ನನ್ನ ನಿಮ್ಮಪ್ಪಗ ಹೋಲಿಕೆ ಮಾಡಬೇಡ.

೪೦. ಗುಂಡು ಹಾರ್ಸಿ ಬಿಡ್ತಿನಿ

ನಾವು ಬಾಡಿಗೆ ಮನೆಗಿದ್ದವರ ಸಂಬಂಧಿಕರೊಬ್ಬರು ಸೆಕ್ಯೂರಿಟಿ ಗಾರ್ಡ ಕೆಲಸಕ್ಕೆ ಸೇರಿದ್ದರು. ಆ ವಿಷಯವನ್ನು ಬಂದು ನನ್ನ ಹೆಂಡ್ತಿಗೆ ಹೇಳಿದೆ.

ನಾನು : ನಾವು ಬಾಡಿಗೆ ಇದ್ವಿವೆಲ್ಲಾ ಅವರ ತಂಗಿ ಗಂಡ ಬ್ಯಾಂಕ್‌ನಲ್ಲಿ ಸೆಕ್ಯೂರಿಟಿ ಗಾರ್ಡ ಆಗ್ಯಾರ. ಅವರ ಕೈಯಲ್ಲಿ ಗನ್ ಹಿಡ್ಕಂಡು ನಿಂತಿದ್ರು ನಾನು ಅದನ್ ನೋಡ್ದೆ.

ಹೆಂಡ್ತಿ : ಹೌದಾ ಬೆಸ್ಟ್ ಆಯ್ತು ನೋಡು. ನಂಗೆ ಅಂತಹ ನೌಕರಿ ಕೊಡ್ಸು, ಯಾರಿಗಾರ ಗನ್ ತಗಂಡು ಗುಂಡು ಹಾರ್ಸಿ ಬಿಡ್ತಿನಿ.

೪೧. ನಿನ್ನ ಬಳ್ಳಾರಿ ಸೆಂಟ್ರಲ್ ಜೈಲಿಗೆ ಕಳುಹಿಸಬೇಕು

ಕೊಪ್ಪಳದಲ್ಲಿ ಹಾಲವರ್ತಿ ರಸ್ತೆಯಲ್ಲಿ ವಿಚಾರಣಾಧೀನ ಖೈದಿಗಳನ್ನು ಮಾತ್ರ ಬಂಧಿಸಿಡಲು ಒಂದು ಕಾರಾಗೃಹವಿದೆ (ಜೈಲ್). ವಿಚಾರಣೆ ಮುಗಿದ ಬಳಿಕ ಒಂದು ವೇಳೆ ಶಿಕ್ಷೆ ಪ್ರಕಟವಾದರೆ ಬಳ್ಳಾರಿ ಸೆಂಟ್ರಲ್ ಜೈಲಿಗೆ ಖೈದಿಗಳನ್ನು ಕಳುಹಿಸುತ್ತಾರೆ. ನಾನು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷನಾಗಿ ಸೇವೆ ಸಲ್ಲಿಸುತ್ತಿದ್ದೆ. ನಮ್ಮ ಶರಣ ಸಾಹಿತ್ಯ ಪರಿಷತ್ತಿನಿಂದ ಹಾಲವರ್ತಿ ಉಪಕಾರಾಗೃಹದಲ್ಲಿ ಖೈದಿಗಳಿಗೆ "ಭವಿಷ್ಯದ ಬದುಕಿಗೆ ಪರಿವರ್ತನೆಯ ಹಾದಿ" ಎಂಬ ವಿಷಯದ ಮೇಲೆ ಉಪನ್ಯಾಸ ಕಾರ್ಯಕ್ರಮವನ್ನು ಏರ್ಪಡಿಸಿದ್ದೆವು. ಅಲ್ಲಿನ ಕಾರ್ಯಕ್ರಮಕ್ಕೆಂದು ಕಾರಾಗೃಹಕ್ಕೆ ಹೋದಾಗ ನನ ಹೆಂಡ್ತಿ ಪೋನ್ ಮಾಡಿದಳು.

ಹೆಂಡ್ತಿ : ಎಲ್ಲಿದ್ದಿ ?

ನಾನು : ಹಾಲವರ್ತಿ ಜೈಲಿನಲ್ಲಿ

ಹೆಂಡ್ತಿ : ನಿನ್ನ ಉರುಣಿಗೆಗೆ ಹಾಲವರ್ತಿ ಜೈಲ್ ಅಲ್ಲ, ನಿನ್ನ ಬಳ್ಳಾರಿ ಸೆಂಟ್ರಲ್ ಜೈಲ್‌ಗೆ ಕಳುಹಿಸಬೇಕು ನೋಡು.

೪೨. ಬಾತ್‌ರೂಮ್ ನಾನ್ಯಾಕ್ ತೊಳಿಲಿ?

ನಾನು ಬಾತ್ ರೂಂಗೆ ಹೋಗಿ ಸ್ನಾನ ಮಾಡಿ ಹೊರಗೆ ಬಂದೆ. ಆಗ ಮೂರು ವರ್ಷದ ನನ್ನ ಮಗ ಶಶಾಂಕ ಬಾತ್‌ರೂಂ ಒಳಗೆ ಹೋಗಿ.

ಶಶಾಂಕ : ಮಮ್ಮಿ ಬಾತ್‌ರೂಂ ವಾಸನೆ ಐತಿ

ನಾನು : ನಿಮಮ್ಮ ನೋಡಪ್ಪ ಬಾತ್‌ರೂಂ ಹ್ಯಾಂಗೆ ಇಟ್ಟಾಳ ಅದನ್ನ ಸರಿಯಾಗಿ ತೊಳ್ಯಾಕ ಆಗವಲ್ತು

ಮಮ್ಮಿ : ಈಗ ಬಾತ್ ರೂಂಗೆ ಹೋಗಿ ಅದನ್ನು ಹೊಲಸು ಮಾಡಿದ್ದು ನಿಮ್ಮಪ್ಪ. ಅದನ್ನ ನಾನ್ಯಾಕ ತೊಳಿಲಿ ? ಅದನ್ನ ಆತನೇ ತೊಳಿಲಿ.

೪೩. ನಾವೆಷ್ಟು ತಲೆ ಕಾಣ್ತಿವಿ?

ನನ್ನ ತಾಯಿಯ ತಾಯಿ ಅಂದರೆ ನಮ್ಮಜ್ಜಿ ಐದು ತಲೆಮಾರು ಕಂಡಿದ್ಳು. ನನ್ನ ಹೆಂಡತಿ ನಮ್ಮಕ್ಕನ ಮಗಳು. ನಮ್ಮ ಅಜ್ಜಿಗೆ ನಮ್ಮಕ್ಕ ಮೊಮ್ಮಗಳು. ಆದ್ದರಿಂದ ನನ್ನ ಮಗಳು ನಮ್ಮಜ್ಜಿಗೆ ಐದನೆ ತಲೆಮಾರು. ಒಂದು ಸಲ ನನ ಹೆಂಡ್ತಿ ನನ್ನ ಹತ್ರ ಬಂದು.

ಹೆಂಡ್ತಿ : ನಿಮ್ಮಜ್ಜಿ ಐದು ತಲೆಮಾರು ಕಂಡಾಕಿ ನಾವೆಷ್ಟು ತಲೆ ಕಾಣ್ತೇವಿ ?

ನಾನು : ಸದ್ಯ ಒಂದೇ ತಲೆ ಕಂಡಿವ್ಯಲ್ಲಾ ಅದಕ್ಕೆ ಸಮಾಧಾನ ಪಡು. ಎರಡನೇ ತಲೆ ಲೆಕ್ಕಕ್ಕೆ ಇಡಬೇಡ.

೪೪. ಓ.!...ಜೋಕಾ ?

ಮೇಘನಾ ಯಾವಾಗ್ಲೂ ನಿದ್ದೆಬಡಕಿ. ಏಳು ಗಂಟೆ ಮೇಲೇನೆ ಎದ್ದೇಳೋದು. ಕ್ಲಾಸ್ ಇಲ್ಲಂದ್ರೆ ೮–೯ಕ್ಕೆ ಎದ್ದೇಳುತ್ತಿದ್ದಳು. ಒಂದು ದಿನ ಅವರಮ್ಮಗೆ

ಮೇಘನಾ : ಮಮ್ಮಿ ನಂಗೆ ಮೂರಕ್ಕೆ ಎಬ್ಬಿಸು.

ನಾನು : ಮಧ್ಯಾಹ್ನ ಮೂರಕ್ಕೆ ನಾ ?

ಮೇಘನಾ : ಇಲ್ಲಪ್ಪ ಬೆಳಗ್ಗೆ ಮೂರಕ್ಕೆ

ನಾನು : ಓ...ಜೋಕಾ ?

೪೫. ಗಾಂಧಿತಾತ ಕೇಕ್-ಚಾಕಲೇಟ್ ಕೊಡ್ತಾನಾ ?

ಶಶಾಂಕ ಬೇಬಿಕ್ಲಾಸ್‌ಗೆ ಹೋಗ್ತಾ ಇದ್ದ. ಮಹಾತ್ಮ ಗಾಂಧೀಜಿ ಜಯಂತಿಗೆ ರಜೆ ಇತ್ತು. ಗಾಂಧಿ ಜಯಂತಿಗೆ ಒಂದು ದಿನ ಮೊದ್ಲು ಶಶಾಂಕಗೆ ಅವರಮ್ಮ.

ಅಮ್ಮ : ನಾಳೆ ಶಾಲೆ ಇಲ್ಲ

ಶಶಾಂಕ : ಯಾಕೆ ?

ಅಮ್ಮ : ನಾಳೆ ಗಾಂಧಿ ತಾತನ ಬರ್ಥಡೇ ಇದೆ.

ಶಶಾಂಕ : ಮತ್ತೆ ನಾಳೆ ಗಾಂಧಿತಾತ ಕೇಕ್-ಚಾಕಲೇಟ್ ಕೊಡ್ತಾನಾ ?

ನಾನು : ಗಾಂಧಿತಾತ ಕೇಕ್-ಚಾಕಲೇಟ್ ಅಲ್ಲೋ ದೇಶಕ್ಕೆ ಸ್ವಾತಂತ್ರ್ಯ ಕೊಟ್ಟಾನಾ.

೪೬. ಎಲ್ರೂ ಹುಚ್ರೇ

ಮನೆಯಲ್ಲಿ ಏನಾದ್ರು ಸನ್ನಿವೇಶಗಳು ನಡೆದಾಗ ನನ್ನ ಹೆಂಡತಿಗೆ ತಲೆ ಚಿಟ್ಟು ಹಿಡಿದಾಗ, ಮಕ್ಕಳು ನಾನು ಯಾವುದಾದರೂ ಅತಿರೇಕದ ಸನ್ನಿವೇಶಗಳು ಸೃಷ್ಟಿ ಮಾಡಿದಾಗ

ಹೆಂಡ್ತಿ : ಈ ಮನ್ಯಾಗ ಎಲ್ರೂ ಹುಚ್ರೇ

ನಾನು : ನನ್ನೊಬ್ಬನ ಬಿಟ್ಟು

೪೭. ಎರಡ್ರ ಕಾಲಾಗ ಸಾಕಾಗ್ಯೆತಿ

ಮಗಳು ಮೇಘನಾಳಿಗೆ ನಾಲ್ಕು ವರ್ಷದ ಹತ್ತಿರ ಇರಬಹುದು. ಒಂದೊಂದು ಸಲ ನನಗೆ ಹೆಂಡತಿ, ಮಗಳ ಕಿರಿಕಿರಿ ಜಾಸ್ತಿ ಆಗಿರುತ್ತಿತ್ತು. ಅದು ಬೇಕು, ಇದು ಬೇಕು ಎಂದು ನನಗೆ ಬೇಜಾರು ಅಗುವಂತೆ ಮಾಡುತ್ತಿದ್ದರು. ಹೆಂಡತಿಯ ಕಿರಿ ಕಿರಿಯಂತೂ ಇದ್ದೆ ಇರುತಿತ್ತು. ಅದಕ್ಕೆ

ನಾನು : ಇವೆರಡ್ರ ಕಾಲಾಗ ನಂಗೆ ಸಾಕಸಾಕಾಗ್ಯೆತಿ ನೋಡು

ಹೆಂಡ್ತಿ : ನಂಗೂ ಇವೆರಡ್ರ ಕಾಲಾಗ ಸಾಕಾಗ್ಯೆತಿ

ಮೇಘನಾ : ಮಮ್ಮಿ ನಂಗೂ ನಿಮ್ಮಿಬ್ರ ಕಾಲಾಗ ಸಾಕಾಗ್ಯೆತಿ

೪೮. ಹೋಗಿ ಬಿಟ್ಟಿತ್ತಾ ?

ನನ್ನ ಹೆಂಡ್ತಿ ಅವರ ತಂಗಿ ಜೊತೆಯಲ್ಲಿ ಫೋನ್‌ನಲ್ಲಿ ಅವರ ತಂಗಿಗೆ ಬಿದ್ದ ಕೆಟ್ಟ ಕನಸಿನ ಬಗ್ಗೆ ಇಬ್ರೂ ಮಾತಾಡ್ತಾ ಇದ್ರು.

ತಂಗಿ : ವೇ ಕೆಟ್ಟ ಕನಸು ಬಿದ್ದಿತ್ತು

ಹೆಂಡ್ತಿ : ಏನದು ?

ತಂಗಿ : ಮಾಮನ ಮ್ಯಾಲೆವೆ

ಹೆಂಡ್ತಿ : ಏನು ಹೋಗಿ ಬಿಟ್ಟಿತ್ತಾ ?

ತಂಗಿ : ಹೌದವೆ ಹೋಗಿ ಬಿಟ್ಟಿತ್ತು

(ಇಬ್ಬರು ನಕ್ಕು ಬೇರೆ ಮಾತು ಮುಂದುವರೆಸಿದರು.)

****

ಒಂದು ಮಧ್ಯ ರಾತ್ರಿ ನನ್ನ ಹೆಂಡತಿ ಎದ್ದು ಕುಳಿತು ದುಃಖಿಸುವ ರೀತಿಯಲ್ಲಿ ವರ್ತನೆ ಮಾಡ್ತಾ ಇದ್ಳು, ನನಗೆ ಗಾಬರಿಯಾಯಿತು. ಕೆಟ್ಟ ಕನಸು ಬಿದ್ದಿರಬೇಕು ಎಂದು ಕೊಂಡು

ನಾನು : ಏನು ಕನಸು ಬಿದ್ದಿತ್ತಾ ?

ಹೆಂಡ್ತಿ : ಹೌದು

ನಾನು : ಕೆಟ್ಟ ಕನಸಾ ?

ಹೆಂಡ್ತಿ : ಹೌದು

ನಾನು : ಏನದು ಕೆಟ್ಟ ಕನಸು ?

ಹೆಂಡ್ತಿ : ಕನಸಿನಾಗ ಕಳ್ರು ಎಲ್ಲಾ ಸಾಮಾನು ಬಿಟ್ಟು ನನ್ನ ಬಂಗಾರದ ನೆಕ್ಲೆಸ್ ಮಾತ್ರ ಕಳ್ಳತನ ಮಾಡಿಕೊಂಡು ಹೋಗಿದ್ರು.

೪೯. ನಿದ್ದೆ ಬರ್ತಿಲ್ಲ ಅದಕ್ಕೆ ಅಳಾಕತ್ತಿನಿ

ಒಂದು ದಿನ ನಾವಿಬ್ಬರೂ ಯಾವುದೋ ಕೆಲಸದಲ್ಲಿ ಬಹಳಷ್ಟು ದಣಿದುಕೊಂಡಿರುವುದರಿಂದ ಬೇಗನೆ ಮಲಗಿಕೊಂಡೆವು. ಮಲಗಿದ ಕೂಡಲೇ ಇಬ್ರಿಗೂ ನಿದ್ದೆ ಹತ್ತಿತ್ತು. ನಾಲ್ಕು ವರ್ಷದ ಮಗಳು ಮೇಘನಾ ಇನ್ನೂ ಮಲಗಿರಲಿಲ್ಲ. ಸ್ವಲ್ಪ ಹೊತ್ತಾದ ಕೂಡಲೇ ಮೇಘನಾ ಹಾಸಿಗೆ ಬಿಟ್ಟು ದೂರದ ಗೋಡೆಗೆ ಆತುಕೊಂಡು ಅಳುತ್ತಾ ಕುಳಿತಿದ್ದಳು. ನಮಗೆ ಪಕ್ಕನೆ ಎಚ್ಚರವಾಯಿತು. ಮತ್ತು ಬಹಳ ಗಾಬರಿಯಾಯಿತು. ಹೊಟ್ಟೆನೋವು, ತಲೆನೋವು ಅಥವಾ ಇನ್ನ್ಯಾವುದೋ ಆರಾಮು ತಪ್ಪಿರಬೇಕೆಂದುಕೊಂಡೆವು. ರಾತ್ರಿ ಹೊತ್ತು ಬೇರೆ ಆಗಿರುವದರಿಂದ ಮನಸ್ಸಿನಲ್ಲಿ ಗೊಂದಲದಲ್ಲಿ

ಇಬ್ರೂ : ಏನಾಯ್ತಮ್ಮ...! ಏನಾಯ್ತಮ್ಮ...!

ಮೇಘನಾ : ಏನಿಲ್ಲ, ನಿದ್ದೆ ಬರ್ತಿಲ್ಲ ಅದಕ್ಕೆ ಅಳಾಕತ್ತಿನಿ

೫೦. ನಾನು ಮದ್ವೆ ಮಾಡಿಕೊಂಡು ಹೋದ ಮೇಲೆ ಮನ್ಯಾಗ ನೀನೊಬ್ಬಾಕೆ ಇರಬೇಕಲ್ಲಾ

ಮಗಳು ಮೇಘನಾಳಿಗೆ ಆರು ವರ್ಷ ಹತ್ರ ಇರಬಹುದು. ಒಂದನೇ ಕ್ಲಾಸಿಗೆ ಶಾಲೆಗೆ ಹೋಗ್ತಾ ಇದ್ಲು. ಅಷ್ಟೊತ್ತಿಗಾಗಲೇ ದೊಡ್ಡ ದೊಡ್ಡ

ಮಾತು ಆಡುವುದನ್ನು ಕಂಡು ನಮಗೆ ಆಶ್ಚರ್ಯವಾಗುತ್ತಿತ್ತು. ಅಕ್ಕ-ಪಕ್ಕದ ಮನೆಯವರೂ ನಿಮ್ಮ ಮಗಳು ವಯಸ್ಸಿಗೆ ಮೀರಿದ ಮಾತು ಆಡ್ತಾಳ ಎಂದು ಅನೇಕ ಸಲ ಹೇಳಿದ್ದರು. ಒಂದು ಸಲ ಅವರಮ್ಮನಿಗೆ.

ಮೇಘನಾ : ಅಪ್ಪ ಕಾಲೇಜಿಗೆ ಹೋಗ್ತಾನ, ಗುಂಡನೂ ಶಾಲೆಗೆ ಹೋಗ್ತಾನ, ನಾನುನೂ ಮದ್ವೆ ಮಾಡಿಕೊಂಡು ಗಂಡನ ಮನೆಗೆ ಹೋದ ಮ್ಯಾಲೆ ನೀನೊಬ್ಬಾಕೆ ಮನ್ಯಾಗ ಇರ್ಬೇಕಲ್ಲಾ

೫೧. ಹೊಸ ಅಮ್ಮನ ತರಮು

ಮಗ ಶಶಾಂಕನಿಗೆ ಮೂರು ವರ್ಷ ಇರಬಹುದು. ಅವರಮ್ಮನ ಜೊತೆ ಜಗಳವಾಡಿ ಮುನಿಸಿಕೊಂಡಿದ್ದನಂತೆ ಕಾಣುತ್ತದೆ. ಬಹುಶಃ ಅವರಮ್ಮ ಹೊಡೆದಿರಬಹುದು. ನಾನು ಮನೆ ಒಳಗೆ ಬಂದ ಕೂಡಲೇ

ಶಶಾಂಕ : ಅಮ್ಮ ಬೇಸಿಲ್ಲ

ನಾನು : ಯಾಕೆ ?

ಶಶಾಂಕ : ಅಮ್ಮ ಬಡಿದ್ಳು

ನಾನು : ಅಮ್ಮ ಸರಿ ಇಲ್ಲ ಬಿಡು ಅದಕ್ಕೆ ಬಡಿದಾಳ

ಶಶಾಂಕ : ಅಮ್ಮ ಬೇಸಿಲ್ಲ ಅದಕ್ಕೆ ಹೊಸ ಅಮ್ಮನ ತರಾಮು

ನಾನು : ಹೌದು ಮಗನೆ ನಾಳೆನೇ ಹೊಸ ಅಮ್ಮನ ತರಮು ಬಿಡು ಅಳಬೇಡ.

೫೨. ನೀನು ಧಾರವಾಹಿ ನೋಡಾದು ಬಿಟ್ಟಾಗ

ಹೆಣ್ಣುಮಕ್ಕಳಿಗೆ ಟಿ.ವಿ.ನೋಡುವ ಹುಚ್ಚು ಹೆಚ್ಚು. ಅದರಲ್ಲಿ ಸೀರಿಯಲ್ ನೋಡುವುದಂತೂ ಊಟ ಬಿಟ್ಟು ಕುಳಿತುಕೊಳ್ಳುವುದಕ್ಕೂ ರೆಡಿ. ಇದಕ್ಕೆ ನನ್ನ ಹೆಂಡತಿಯೇನೂ ಹೊರತಾಗಿರಲಿಲ್ಲ. ಸೀರಿಯಲ್‌ಗಳನ್ನಂತೂ

ಸೀರಿಯಲ್ ಆಗಿ ನೋಡ್ತಿದ್ಳು. ಕೆಲ ಸೀರಿಯಲ್‌ಗಳು ಕನ್ನಡ, ಹಿಂದಿ, ತೆಲುಗುಗಳ ಭಾಷೆಗಳಿಗೂ ಅನುವಾದವಾಗಿರುತ್ತಿದ್ದವು. ಅವೆಲ್ಲವೂ ನೋಡಿ ಅಡ್ವಾನ್ಸ್ ಅಡ್ವಾನ್ಸ್ ಆಗಿ ಕಥೆ ನನ್ನ ಮುಂದೆ ಹೇಳುತ್ತಿದ್ದಳು. ನನಗೆ ಅದನ್ನು ನೋಡುವುದಕ್ಕೂ ಅಲ್ಲ; ಕೇಳುವುದಕ್ಕೂ ಸಹ ಪುರುಸೊತ್ತು ಇರುತ್ತಿರಲಿಲ್ಲ. ಒಂದ್ಯಾವುದೋ ಧಾರವಾಹಿಯಲ್ಲಿ ಒಬ್ಬ ಕೆಟ್ಟ ಹೆಣ್ಣು ಮಗಳು ಬಹಳಷ್ಟು ಕೆಟ್ಟ ಕೆಲಸಗಳನ್ನು ಮಾಡುತ್ತಿರುತ್ತಾಳೆ. ಎಷ್ಟೋ ಜನ ಬುದ್ಧಿ ಹೇಳಿದರೂ ಆಕೆ ಕೇಳುವುದಿಲ್ಲ. ಇನ್ನೊಬ್ಬರಿಗೆ ಕೇಡು ಮಾಡುವುದೇ ಅವಳ ಕೆಲಸವೆಂಬಂತೆ ತನ್ನ ಪಾತ್ರ ನಿರ್ವಹಿಸುತ್ತಾಳೆ. ಆಕೆಗೆ ಬುದ್ಧಿ ಕಲಿಸುವಂತ ಎಷ್ಟೋ ಪ್ರಸಂಗಗಳೂ ಬರುತ್ತವೆ. ಆದರೆ ಆಕೆಗೆ ಅರಿವಾಗುವುದಿಲ್ಲ. ಇದನ್ನೂ ನೋಡಿದ ನನ್ನ ಹೆಂಡತಿ ನನಗೆ

ಹೆಂಡ್ತಿ : ಇವಳಿಗೆ ಬುದ್ಧಿನೆ ಬರವಲ್ದು ನೋಡು, ಎಷ್ಟು ಉಗಿದ್ರು ಅಷ್ಟೆ. ಬುದ್ಧಿ ಯಾವಾಗ ಬರ್ತಾದಾ ಏನೋ

ನಾನು : ಅವಳಿಗೆ ಎಲ್ಲಿ ಬುದ್ಧಿ ಬರ್ತಾದೋ. ಮೊದಲು ನಿನಗೆ ಬುದ್ಧಿ ಬರಬೇಕು. ಈ ಧಾರವಾಹಿನ ನೀನು ಯಾವಾಗ ನೋಡೊದು ಬಿಡಬೇಕು ಅನ್ನೋ ಬುದ್ಧಿ ನಿನ್ನತ್ರ ಬರ್ತಾದೊ ಆವಾಗ ಅವಳಿಗೆ ಬುದ್ಧಿ ಬರ್ತಾದ.

೫೩. ನಿನಗಾಡಿ ಮಾರಿ ನಂಗೆ ಸ್ಕೂಟಿ ಕೊಡ್ಸು

ಪೆಟ್ರೋಲ್ ಬೆಲೆ ದಿನದಿಂದ ದಿನಕ್ಕೆ ಏರಿಕೆ ಆಗ್ತಾ ಇದೆ. ನನಗಂತೂ ನನ್ನ ಹೊಂಡಾ ಗಾಡಿಗೆ ಪೆಟ್ರೋಲ್ ಹಾಕ್ಸಿ ಹಾಕ್ಸಿ ಸಾಕಾಗಿತ್ತು. ಗಾಡಿಯಲ್ಲಿ ಎಷ್ಟು ಪೆಟ್ರೋಲ್ ಹಾಕಿದ್ರೂ ಬೇಗ ಖಾಲಿ ಆಗ್ತಿತ್ತು. ನನಗಂತೂ ಈ ಗಾಡಿ ಸಾಹವಾಸನೇ ಸಾಕು, ಇದನ್ನು ಮಾರಿಯಾದರೂ ಬಿಡೋಣ ಅನ್ನುವಷ್ಟು ತಲೆ ಬಿಸಿ ಆಗಿತ್ತು. ಆದರೆ ಅನಿವಾರ್ಯ ಗಾಡಿ ಇಲ್ಲದೇ ಏನೂ ಕೆಲಸ ಕಾರ್ಯಗಳು ನಡೆಯವು ಎಂಬುದೂ ನನಗೆ ಗೊತ್ತು. ಒಂದು ಸಲ ನನ ಹೆಂಡ್ತಿ ನಾನು ಯಾವುದೋ ಕೆಲಸಕ್ಕಾಗಿ ಗಾಡಿ ಮೇಲೆ ಹೋದಾಗ ಟ್ರಾಫಿಕ್ ಸಿಗ್ನಲ್‌ನಲ್ಲಿ ಕಾಯುತ್ತಾ ನಿಂತಿದ್ದೆವು. ಅಲ್ಲಿ ಲೈಟುಗಳು ಸಿಗ್ನಲ್ಸ್ ತೋರ್ತಾ ಇದ್ದವು. ಅದನ್ನು ನೋಡಿ

ಹೆಂಡ್ತಿ : ನಂಗೆ ಈ ಸಿಗ್ನಲ್ ಲೈಟ್ ಬಗ್ಗೆ ಸರಿಯಾಗಿ ಗೊತ್ತಿಲ್ಲ, ಸ್ವಲ್ಪ ನಂಗೆ ತಿಳಿಸಿ ಹೇಳು.

ನಾನು : ನಿಂಗ್ಯಾಕ ತಿಳಿಬೇಕು ? ನೀನು ತಿಳ್ಕಂಡು ಏನ್ ಮಾಡ್ತಿ ?

ಹೆಂಡ್ತಿ : ಇಲ್ಲ ನಾನು ಮುಂದೆ ಸ್ಕೂಟಿ ತಗತಿನಲ್ಲ ಅದ್ಕೆ ಮೊದ್ಲೆ ತಿಳಿಬೇಕಲ್ಲಾ.

ನಾನು : ಅಲ್ಲೊ ನನಗಾಡಿನೇ ಮಾರಬೇಕು ಅನ್ಕಂಡಿನಿ.

ಹೆಂಡ್ತಿ : ನಾನು ಅದ್ನೆ ಹೇಳದು. ನಿನಗಾಡಿ ಮಾರಿ ನಂಗೆ ಸ್ಕೂಟಿ ಕೊಡ್ಸಿಬಿಡು.

೫೪. ಹಾವು ನೋಡಿದಾಂಗ ನೋಡಬ್ಯಾಡ

ನನ್ನ ಹೆಂಡ್ತಿ ಯಾವಾಗ್ಲೂ ಹಣ ಕೇಳಿದ್ದೆ ಕೇಳಿದ್ದು. ನನ್ನತ್ರ ಐತೋ ಇಲ್ಲೋ ಏನೂ ತಿಳೆಂಗಿಲ್ಲ. ಕೇಳಿದ್ದೆ ಒಂದು ಮಾತು. ಒಂದು ಸಲ ನನ್ನತ್ರ ಒಂದು ರೂಪಾಯಿನೂ ಇದ್ದಿಲ್ಲ. ಆವಾಗ ಬಂದು

ಹೆಂಡ್ತಿ : ಏನಾರ ಇದ್ರ ಸ್ವಲ್ಪ ಇಕಡೆ ತಳ್ಳು *(ನನಗೆ ಬಹಳ ಕೋಪ ಬಂತು)*

ನಾನು : ರೊಕ್ಕ ರೊಕ್ಕ ಅಂತ ಕಪ್ಪೆ ಒದರಿದಂಗ ಒದ್ರಬ್ಯಾಡ

ಹೆಂಡ್ತಿ : ಇರ್ಲಿ ಬಿಡು ಇದ್ರೆ ಕೊಡು ಇಲ್ಲಂದ್ರೆ ಬಿಡು, ನೀನೂ ನನ್ನ ಹಾವು ನೋಡಿದಾಂಗ ನೋಡಬ್ಯಾಡ

೫೫. ನಿಮ್ ಸಾವಕಾರನ್ನೂ ಅರ್ಧರೇಟಿಗೆ ಮಾರಿಬಿಡು

ಮನೆ ಕಟ್ಟುವಾಗ ಎಲ್ಲಾ ಸಾಮಾನುಗಳನ್ನು ನಾನೇ ಮೇಸ್ತ್ರಿಗೆ ತಂದು ಕೊಡುತ್ತಿದ್ದೆ. ಮನೆ ಕಟ್ಟುವ ಮೇಸ್ತ್ರಿ ಸಾಮಾನುಗಳು ಬೇಕಿದಿದ್ವ್ಯಾವೋ, ಬೇಕಿಲದ್ವ್ಯಾವೋ ತರ್ಸಿದ್ದೆ ತರ್ಸಿದ್ದು. ಅದಕ್ಕೆ ನಾನು ಮೇಸ್ತ್ರಿಗೆ ಬಯ್ಯುತ್ತಿದ್ದೆ.

ನಾನು : ಮೇಸ್ತ್ರಿ ನೀನು ಸುಮ್ನೆ ಸಾಮಾನುಗಳು ತರ್ಸಬ್ಯಾಡ್. ಎಷ್ಟು ಬೇಕು ಅಷ್ಟೆ ಮಾತ್ರ ತರ್ಸು. ನನ್ನ ಸುಮ್ನೆ ಜಾಸ್ತಿ ಖರ್ಚು ಮಾಡ್ಸಬ್ಯಾಡ.

ಮೇಸ್ತ್ರಿ : ಸಾವಕಾರ್ರೇ ನಿವೇನು ಚಿಂತೆ ಮಾಡಬ್ಯಾಡ್ರಿ. ಮನೆ ಮುಗಿದ ಮ್ಯಾಲೆ ಏನೆ ಸಾಮಾನು ಉಳಿದ್ರೂ ನಾನು ಅರ್ಧ ರೇಟಿಗೆ ಮಾರಿಸ್ತಿನಿ.

ಹೆಂಡ್ತಿ : ಮೇಸ್ತ್ರಿ ಮನೆ ಮುಗಿದ ಮೇಲೆ ನಿಮ್ ಸಾವಕಾರನೂ ಅರ್ಧ ರೇಟಿಗೆ ಮಾರಿಬಿಡು.

೫೬. ಸಂಬಳ ಹೆಚ್ಚಾಗಿದ್ದು ನನ್ ಕಾಲಗುಣದಿಂದ

ನಾನು ಒಬ್ಬ ಸರಕಾರಿ ನೌಕರ. ನೌಕರರಿಗೆ ಸರಕಾರ ಒಂದು ವರ್ಷದಲ್ಲಿ ಎರಡು ಸಲ ಭತ್ಯೆ ಕೊಡುವುದು ನಿಯಮ. ಹಾಗಾಗಿ ಸಂಬಳ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದೆ. ಇದು ಸಾಮಾನ್ಯ ಸಂಗತಿ. ನಾನು ಆರಂಭದಲ್ಲಿ ನೌಕರಿಗೆ ಸೇರಿದಾಗ ಸಂಬಳ ಬಹಳ ಕಡಿಮೆ ಇತ್ತು. ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಾ ಹೋಯಿತು. ಅದಕ್ಕೆ ಒಂದು ಸಲ

ಹೆಂಡ್ತಿ : ನೋಡು ಮದುವೆಗೆ ಮೊದ್ಲು ನಿಂಗೆ ಒಂಬತ್ತು ಸಾವಿರ ಸಂಬಳ ಇತ್ತು. ನಿನ್ನ ಮದುವೆ ಮಾಡಿಕೊಂಡು ಈ ಮನಿಗೆ ನಾನು ಬಂದ ಮೇಲೆ ಸಂಬಳ ಹೆಚ್ಚಾಗಿ ನೀನು ಇವತ್ತು ಐವತ್ತು ಸಾವಿರ ರೂಪಾಯಿ ಸಂಬಳ ತಗಂತಿದ್ಯಲ್ಲ ಅದು ಎಲ್ಲಾ ನನ್ ಕಾಲಗುಣದಿಂದ.

೫೭. ಏಡ್ಸ್ ರೋಗದವರ ಜೊತೆ ಸೇರ್ಕಂಡ್ಯಾ ?

ನಾನು ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನಕ್ಕಾಗಿ, ಹೈದ್ರಾಬಾದ ಕರ್ನಾಟಕಕ್ಕೆ ೩೭೧ನೇ ಕಲಂ ಜಾರಿಗಾಗಿ ಹೋರಾಟ ಮಾಡಿದ್ದೆ. ೩೭೧ನೇ ಜಾರಿಗಾಗಿ ಒಂದೊಂದು ಶಾಲೆ-ಕಾಲೇಜುಗಳಲ್ಲಿ ತಿರುಗಿ ಅದರ ಮಹತ್ವದ ಬಗ್ಗೆ ಜಾಗೃತಿ ಮೂಡಿಸಿ, ಒಂದು ಸಲ ೩೭೧ಕಲಂ ಜಾರಿಗಾಗಿ ಆಗ್ರಹಿಸಿ ಸಂಘಟನೆಗಳ ಜೊತೆಗೆ ದೆಹಲಿಗೂ ಹೋಗಿ ಹೋರಾಟ ಮಾಡಿ ಬಂದಿದ್ದೇನೆ. ಕಾಲೇಜಿನಲ್ಲಿ ಎನ್.ಎಸ್.ಎಸ್ ಅಧಿಕಾರಿಯಾಗಿ ಏಳು ವರ್ಷಗಳ

ಕಾಲ ಸೇವೆ ಮಾಡಿದ್ದೇನೆ. ಎನ್.ಎಸ್.ಎಸ್ ಮೂಲಕ ಅನೇಕ ಜನಜಾಗೃತಿ ಕಾರ್ಯಕ್ರಮಗಳನ್ನು ಮಾಡಿದ್ದೇನೆ. ಮದ್ಯಪಾನ ವಿರೋಧಿ ಜಾಥಾ, ಪೋಲಿಯೋ ಕಾರ್ಯಕ್ರಮ, ಐತಿಹಾಸಿಕ ಸ್ಮಾರಕಗಳ ಜನಜಾಗೃತಿ ಕಾರ್ಯಕ್ರಮ, ರಾಷ್ಟ್ರನಾಯಕರ ಜನ್ಮದಿನಾಚರಣೆ ಜಾಥಾಗಳು, ಆರೋಗ್ಯದ ಜನಜಾಗೃತಿ ಕಾರ್ಯಕ್ರಮ, ಮಾರಕ ರೋಗಗಳ ಬಗ್ಗೆ ಮುನ್ನೆಚ್ಚರಿಕೆ ಕಾರ್ಯಕ್ರಮಗಳು. ಒಂದೇ ಎರಡೇ. ಅನೇಕ ಕಾರ್ಯಕ್ರಮಗಳನ್ನು ಎನ್.ಎಸ್.ಎಸ್ ಮುಖಾಂತರ ಮಾಡಿದ್ದೇನೆ. ಈ ಎಲ್ಲಾ ಕಾರ್ಯಕ್ರಮಗಳು ನನ್ನ ಹೆಂಡತಿಗೆ ಗೊತ್ತು. ಈ ಕಾರ್ಯಕ್ರಮಗಳ ವರದಿಗಳು ಪತ್ರಿಕೆಗಳಲ್ಲಿ ಎಷ್ಟೋ ಸಲ ಮುಖಪುಟದಲ್ಲಿಯೂ ಪ್ರಕಟಗೊಳ್ಳುತ್ತಿದ್ದವು. ಒಂದು ಸಲ ಏಡ್ಸರೋಗ ಪೀಡಿತರೊಂದಿಗೆ ಕಾರ್ಯಕ್ರಮವನ್ನು ಮುಗಿಸಿಕೊಂಡು ಮನೆಗೆ ಬಂದೆ. ಆಗ ನನ್ನ

ಹೆಂಡ್ತಿ : ಇವತ್ಯಾವ ಕಾರ್ಯಕ್ರಮ ಇತ್ತು ?

ನಾನು : ಏಡ್ಸರೋಗ ಪೀಡಿತರ ಜೊತೆ ಒಂದು ಕಾರ್ಯಕ್ರಮ ಇತ್ತು.

ಹೆಂಡ್ತಿ : ಎಲ್ಲಾ ಮುಗುದ್ವು ! ಬಾಕಿ ಇದೊಂದು ಇತ್ತು ನೋಡು. ಈಗ ಏಡ್ಸ ರೋಗದವರ ಜೊತೆ ಸೇರಕೊಂಡೇನು ? ಬಾಳ ಚೆನ್ನಾಗಿ ಆತು ತಗ. ಅವರ ಜೊತೆಗೆ ಇದ್ದು ಬಿಡು.

೫೮. ಹಂದಿನ ಹಿಡ್ಕಂಡಿದ್ರೆ ಸ್ಕ್ಯಾನ್ ಮಾಡ್ತಿದ್ವಿ

ಒಂದು ಸಲ ಮೂರು ವರ್ಷದ ಶಶಾಂಕ ಆಟದ ಸಾಮಾನಿನ ಸಣ್ಣ ಸೆಲ್ ನುಂಗಿ ಬಿಟ್ಟಿದ್ದ. ಅವನಿಗೇನೂ ಅಂತಹದ್ದು ತೊಂದರೆ ಆಗಿರಲಿಲ್ಲ. ಆದ್ರೂ ವೈದ್ಯರ ಹತ್ತಿರ ತೋರಿಸಿದೆವು. ಅವರು ಸ್ಕಾನ್–ಗಿನ್ ಏನೂ ಬೇಡ ಎರಡು ದಿನ ಲ್ಯಾಟ್ರೀನ್ ಚೆಕ್ ಮಾಡ್ರಿ, ಅದ್ರಗಲಿಂದ ಬರ್ತಾದ. ಒಂದು ವೇಳೆ ಬರದಿದ್ರೆ ಮುಂದೆ ಎಕ್ಸರೇ ಅಥವಾ ಸ್ಕಾನೇನಾದ್ರೂ ಮಾಡೋಣ ಎಂದರು. ಕೊಪ್ಪಳದಲ್ಲಿ ಹಂದಿಗಳು ಬೇಕಾದಷ್ಟು ಇದ್ದಾವೆ

ಅದು ಬೇರೆ ಸಂಗತಿ. ಶಶಾಂಕಗೆ ಹೊರಗೆ ಲ್ಯಾಟ್ರಿನ್ ಕೂಡ್ಸು, ಲ್ಯಾಟ್ರೀನ್ ರೂಂನೊಳಗೆ ಕುಂತ್ರೆ ಸೆಲ್ ಹೊರಗೆ ಹೋಗದು ಗೊತ್ತಾಗಲ್ಲ ಎಂದು ನನ್ನ ಹೆಂಡತಿಗೆ ಹೇಳಿದ್ದೆ. ಆಕಿ ಶಶಾಂಕನ ಕುಂದ್ರಿಸಿ ಯಾವಕಡೆ ನೋಡುತ್ತಾ ನಿಂತಿದ್ಲೋ ಗೊತ್ತಿಲ್ಲ. ಹಿಂದಿನಿಂದ ಹಂದಿ ಬಂದು ಅದನ್ನು ತಿಂದು ಹೋಯ್ತು.

ಹೆಂಡ್ತಿ : ಶಶಾಂಕ ಮಾಡಿದ ಲ್ಯಾಟ್ರಿನ್ ಹಂದಿ ತಿದ್ದು ಹೋಯ್ತು.

ನಾನು : ಹೋಗ್ಲಿ ಆ ಹಂದಿನಾರ ಹಿಡ್ಕಂಡು ಬರಬೇಕಿತ್ತು. ಅದನಾರ ಎಕ್ಸ್‌ರೇ ತೆಗೆದು, ಸ್ಕಾನ್‌ರ ಮಾಡ್ತಿತಿದ್ವಿ.

೫೯. ನಾನು ತರದು ಮನುಷ್ಯರು ಉಜ್ಜೊ ಟೂತ್ ಬ್ರಶ್

ಟೂತ್ ಬ್ರಶ್ ಆಕಿದು ಮಾತ್ರ ಬೇಗ ಬೆಂಡ್ ಆಗ್ತಿತ್ತು. ಕೆಲವೊಂದು ಸಲ ನನಗೂ ಆಕಿಗೆ ಮತ್ತು ಮಕ್ಕಳಿಗೂ ಎಲ್ರಗೂ ಒಂದೇ ಸಲ ತಂದ್ರೂ ಆಕಿದು ಮಾತ್ರ ಬೇಗ ಬೆಂಡ್ ಆಗಿರುತ್ತಿತ್ತು. ಆಕಿ ಅದನ್ನು ತಂದು ತೋರ್ಸಿ

ಹೆಂಡ್ತಿ : ಇಲ್ನೋಡು ನಂದು ಬ್ರಶ್ ಬೆಂಡಾಗೈತಿ ?

ನಾನು : ನಂದು ನೋಡು ಹೆಂಗಿದ್ದದು ಅಂಗೆ ಐತಿ, ನಂದು ಚೆನ್ನಾಗಿನೆ ಐತೆಲ್ಲಾ?

ಹೆಂಡ್ತಿ : ನಿಮಗೆಷ್ಟು ಚೆನ್ನಾಗಿರದು ತಂದುಕಂಡು ನಂಗೆ ಯಾವುದೋ ತರ್ತಿದ್ದಿ.

ನಾನು : ಇಲ್ಲೋ ನಾನು ತರದು ಮನುಷ್ಯರು ಉಜ್ಜೊ ಟೂತ್‌ಬ್ರಶ್ ಇನ್ನೊಂದು ಸಲ ಅಂಗಡಿಯವನ ಹತ್ರ ಪ್ರಾಣಿಗಳು ಉಜ್ಜದು ಇದ್ರ ಕೊಡು ಅಂತ ಹೇಳಿ ತರ್ತಿನೇಳು.

೬೦. ನನ್ನ ನೈಟಿ ಇಸ್ತ್ರಿ ಮಾಡು

ನನ್ನ ಕಾಲೇಜು ಬೆಳಗ್ಗೆ ೭–೩೦ಕ್ಕೆ ಇರುವುದರಿಂದ ರಾತ್ರಿನೆ ಬಟ್ಟೆ ಇಸ್ತ್ರಿ ಮಾಡಿ ಇಟ್ಟುಕೊಂಡಿರುತ್ತಿದ್ದೆ. ನನ್ನ ಬಟ್ಟೆ ಇಸ್ತ್ರಿಗಾಗಿ ಎಲ್ಲೋ ಕೊಡ್ತಿರಲಿಲ್ಲ. ಮೊದಲೇ ರಾತ್ರಿನೇ ಇಸ್ತ್ರಿ ಮಾಡಿಕೊಳ್ಳುವುದು ಅಭ್ಯಾಸವಾಗಿತ್ತು. ಕೆಲವೊಂದು ಸಲ ಕಾಲೇಜ್ ಅಥವಾ ಯಾವುದು ಕಾರ್ಯಕ್ರಮ ಇರದಿದ್ದರೂ ಉಟ್ಟುಕೊಂಡಿರುವ ಬಟ್ಟೆಯ ಮೇಲೆಯೇ ಸರಿ ಮಾಡುತ್ತಿದ್ದೆ. ಒಂದು ದಿನ ಕಾಲೇಜು ಇರಲಿಲ್ಲ. ಮತ್ತು ಯಾವುದು ಕಾರ್ಯಕ್ರಮವೂ ಇರಲಿಲ್ಲ ಸುಮ್ನೆ ಇಸ್ತ್ರಿ ಮಾಡುತ್ತಾ ಕುಳಿತಿದ್ದೆ. ಆಗ ಬಂದ.

ಹೆಂಡ್ತಿ : ಯಾಕ ಇವತ್ತು ಇಸ್ತ್ರಿ ಮಾಡಾಕ ಹತ್ತಿದ್ದಿ ?

ನಾನು : ಅಂಗೆ ಸುಮ್ನೆ

ಹೆಂಡ್ತಿ : ಕಾಲೇಜ್ ಇಲ್ಲ, ಯಾವ ಕಾರ್ಯಕ್ರಮವೂ ಇಲ್ಲ ಮತ್ಯಾಕ ಇಸ್ತ್ರಿ ಮಾಡಕ ಹತ್ತಿದ್ದಿ ?

ನಾನು : ಯಾಕೆ ಮನ್ಯಾಗ ತೊಟ್ಟುಕೊಳ್ಳಕ ಬಟ್ಟೆ ಇಸ್ತ್ರಿ ಮಾಡಬಾರದು ?

ಹೆಂಡ್ತಿ : ಅಂಗಾದ್ರೆ ನನ್ ನೈಟಿನೂ ಇಸ್ತ್ರಿ ಮಾಡು.

೬೧. ತಲಿಮ್ಯಾಲ ಸುರ್ಕಂಡು ಮೈತೊಳ್ಕಂಡು ಮನಿಗೆ ಬಾ

ನಾನು ಕೆಲವೊಂದು ಸಲ ಊಟಕ್ಕೆ ಹೊರಗೆ ಹೋಗುತ್ತಿದ್ದೆ. ಅದು ನನ್ನ ಹೆಂಡತಿಗೆ ಬಹಳ ಕೋಪದ ಸಂಗತಿ. ಇದು ನನಗೆ ಕೆಲ ಫ್ರೆಂಡ್ಸ್ ಜೊತೆ ಅನಿವಾರ್ಯವೂ ಆಗಿತ್ತು. ಅದು ಬೇರೆ ಸಂಗತಿ. ಅಲ್ಲಿ ಹೋಟೇಲ್‌ಗಳಲ್ಲಿ ಊಟ ಮುಗಿದ ನಂತರ ಕೈತೊಳೆದುಕೊಳ್ಳುವುದಕ್ಕೆ ಬಿಸಿನೀರು ತಂದು ಕೊಡುತ್ತಿದ್ದರು. ನಾನು ಮನೆಯಲ್ಲಿ ಊಟಕ್ಕೆ ಕುಳಿತಾಗ ಒಂದು ಸಲ ನನ್ನ ಹೆಂಡತಿ ಕುಡಿಯುವುದಕ್ಕೆ ನೀರು ತಂದು ಕೊಟ್ಟಿರಲಿಲ್ಲ. ಅದಕ್ಕೆ

ನಾನು : ಅಲ್ಲಿ ಹೋಟೆಲ್‌ದಾಗ ಊಟ ಮುಗಿದ ಕೂಡಲೆ ಕುಡಿಯುವುದಕ್ಕೆ ನೀರಷ್ಟೆ ಅಲ್ಲ, ಕೈ ತೊಳಕೊಳ್ಳಾಕ ಬಿಸಿ ನೀರು ಸಹ ತಂದು ಕೊಡ್ತಾರ. ಇಲ್ಲಿ ಮನ್ಯಾಗ ನನ್ ಹೆಂಡ್ತಿ ಕುಡ್ಯಾಕ ಸಹ ನೀರು ಸರಿಯಾಗಿ ಕೊಡಲ್ಲ.

ಹೆಂಡ್ತಿ : ಹೋಟೆಲ್‌ದಾಗ ಬಿಸಿ ನೀರು ಸ್ವಲ್ಪ ಜಾಸ್ತಿ ಇಸ್ಕ

ನಾನು : ಯಾಕೆ ?

ಹೆಂಡ್ತಿ : ಸ್ವಲ್ಪ ಕೈತೊಳ್ಕಂಡು ಇನ್ನು ಸ್ವಲ್ಪ ತಲಿಮ್ಯಾಲೆ ಸುರ್ಕಂಡು ಮೈತೊಳ್ಕಂಡು ಮನೆಗೆ ಬಾ.

೬೨. ಮನ್ಯಾಗ ಹಾವು ಚೇಳು ಇದಾವ ಇನ್ನು ಇರುವೆಗೆ ಹೆದಿರ್ತಿನಾ ?

ಮೊದ್ಲು ನಾವು ಬಾಡಿಗೆ ಇದ್ದ ಮನೇಲಿ ಜಾಸ್ತಿ ಕಟ್ಟಿರುವೆ (ಕಟ್ಟಿರಬೆ) ಎದ್ದೇಳುತ್ತಾ ಇದ್ದವು. ಒಂದು ಸಲ ನಾನು ಕುಳಿತಾಗ ನನ್ನ ಮುಂದೆ ಸಾಲು ಸಾಲಾಗಿ ಕಟ್ಟಿರುವೆಗಳು ಮನೆ ಒಳಗೆ ಬರ್ತಾ ಇದ್ವು. ಅದನ್ನು ಕಂಡ ನನ್ನ

ಹೆಂಡ್ತಿ : ಅಲ್ಲಿ ನೋಡು ಕಟ್ಟಿರುವೆ ಸಾಲಾಗಿ ಮನ್ಯಾಗ ಬರಾಕತ್ಯಾವ ಹೆದರಿಕೆ ಆಗವಲ್ತಾ ?

ನಾನು : ಮನ್ಯಾಗ ಹಾವು, ಚೇಳು, ಹೆಬ್ಬಾವು ಐದಾವ. ನಾನು ಅವುಟ್ರಕೆ ಹೆದ್ರಿಕಂಡಿಲ್ಲ ಇನ್ನ ಕಟ್ಟಿರುವೆಗೆ ಹೆದರ್ತಿನಾ ?

೬೩. ಅಡುಗೆನಾ ಹುಡಿಗಿ ಮಾಡಬೇಕು

ಅಡುಗೆ ಮಾಡುವಾಗ ನನ್ನ ಹೆಂಡ್ತಿ ಬಹಳಷ್ಟು ಸಲ ಸಹಾಯಕ್ಕೆ ಕರೆಯುತ್ತಿದ್ದಳು. ನಂಗೆ ಬಹಳಷ್ಟು ಕೆಲಸ ಇರುತ್ತಿರುವುದರಿಂದ ಅದಕ್ಕೆ ಅಡುಗೆಗೆ ಸಹಾಯ ಮಾಡುವುದಕ್ಕೆ ಆಗುತ್ತಿರಲಿಲ್ಲ. ಉಳಿದ ಯಾವುದಾದರೂ ಸಣ್ಣ–ಪುಟ್ಟ ಕೆಲಸಗಳಿಗೆ ಸಹಾಯ ಮಾಡುತ್ತಿದ್ದೆ. ಆದರೆ ಅಡುಗೆಗೆ ಯಾವುದೇ

ಸಹಾಯ ಆಗ್ತಿರ್ಲಿಲ್ಲ. ನನ್ನ ಹೆಂಡತಿ ಒಂದು ಸಲ ಹಬ್ಬದ ಅಡುಗೆ ಮಾಡ್ತಾ ಇದ್ಳು. ಆಗ ಊಟದ ಸಮಯ ಮೀರ್ತಾ ಇತ್ತು. ಹಸಿವು ಬೇರೆ ಜಾಸ್ತಿ ಆಗಿತ್ತು. ಅದ್ಕೆ ನಾನು ಸ್ವಲ್ಪ ಏನಾದ್ರೂ ಸಹಾಯ ಮಾಡೋಣ ಎಂದುಕೊಂಡು ಅಡುಗೆ ಮನೆಯಲ್ಲಿ ಆಕೆ ಹೋಳಿಗೆ ಮಾಡುತ್ತಿರುವಾಗ ನಾನು ಎಣ್ಣೆಯೊಳಗೆ ಹಪ್ಪಳ ಹಾಕಿ ಕರಿತಾ ಇದ್ದೆ. ಇದನ್ನು ನೋಡಿದ ಮೂರು ವರ್ಷದ ಮಗ

ಶಶಾಂಕ : ಅಡುಗೆನ ಹುಡಿಗಿ ಮಾಡ್ತಾರ ಹುಡುಗ ಮಾಡಬಾರದು.

ನಾನು : ಮಗನೆ! ನಿಮ್ಮಮ್ಮನ ಕೈಯಾಗ ಸಿಕ್ಕು ನಾನು ಹುಡುಗ ಹೋಗಿ ಹುಡಿಗಿ ಆಗೀನಿ.

೬೪. ಅಲ್ಲೆ ತಬಲ ಬಾರಿಸ್ಕ್ಯಾಂತ ಕುಂದ್ರು

ಮೇಘನಾಳನ್ನು ಸಂಗೀತ ಶಾಲೆಗೆ ಸೇರಿಸಿದ್ದೆ. ಸಂಜೆ ಐದರಿಂದ ಆರರವರೆಗೆ ಸಂಗೀತ ಅಭ್ಯಾಸಕ್ಕೆ ಬಿಟ್ಟು ಬಂದು, ಮತ್ತೆ ವಾಪಾಸ್ ಕರೆದುಕೊಂಡು ಬರುತ್ತಿದ್ದೆ. ಇದೆ ಟೈಮ್‌ಗೆ ಟ್ಯೂಷನ್ ಇರುತ್ತಿತ್ತು. ಅದಕ್ಕೆ ನನ್ನ ಹೆಂಡ್ತಿ ಟ್ಯೂಷನ್‌ಗೆ ಕಳಿಸು ಸಂಗೀತ ಶಾಲೆಗೆ ಬೇಡ ಅಂತಿದ್ಳು. ನಾನು ಸಂಗೀತ ಕಲಿಲಿ, ಯಾವುದಾದ್ರೂ ಒಂದರಲ್ಲಿ ಪರಿಣಿತಿಪಡಿಲಿ ಅನ್ನದು ನನ್ನಾಸೆ. ಅದಕ್ಕೆ ನಾನು ಸಂಗೀತ ಶಾಲೆ ಮುಗಿದ ಕೂಡಲೇ ಬೇಗನೇ ಟ್ಯೂಷನ್‌ಗೆ ತಂದು ಬಿಡ್ತಾ ಇದ್ದೆ. ಒಂದು ಸಲ ಇಬ್ರೂ ಎಲ್ಲಿಗೋ ಹೋಗಬೇಕಿತ್ತು. ಅದು ಆಕೆಗೆ ಇಷ್ಟವಿರಲಿಲ್ಲ. ಆವಾಗ

ನಾನು : ಬೇಗ ತಯಾರು ಆಗು, ನಾನು ಮೇಘನಾನ ಸಂಗೀತ ಶಾಲೆಗೆ ಬಿಟ್ಟು ಬೇಗ ಬರ್ತಿನಿ

ಹೆಂಡ್ತಿ : ಮತ್ತ್ಯಾಕ ಬರ್ತಿದ್ದಿ. ಅಲ್ಲೆ ತಬಲ ಬಾರಿಸ್ಕ್ಯಾಂತ ಕುಂದ್ರು

೬೫. ಹೋಟೆಲ್‌ನ್ಯಾಗ ಬಾರಿಸಿದಂಗ ಬಾರಸ್ತಿ

ಹೋಟೆಲ್‌ನಲ್ಲಿ ಊಟಕ್ಕೂ ಅಥವಾ ಟಿಫೀನ್‌ಗೂ ಹೋದ್ರೆ ಮೊದಲು ಸಪ್ಲಯರ್‌ಗೆ ಆರ್ಡರ್ ಮಾಡಬೇಕು. ಅವನು ಹೋಗಿ ಅಡುಗೆ ಮಾಡುವವನಿಗೆ ಬೇಕಾದ ಪದಾರ್ಥ ತಯಾರಿಸಲು ಹೇಳುತ್ತಾನೆ. ಅಡುಗೆಯವನು ಅಡುಗೆ ತಯಾರು ಮಾಡಿದ ಮೇಲೆ ಕೂಗಿ ಹೇಳುವುದು ಇಲ್ಲವೆ ಚಮಚೆಯಿಂದ ಪಾತ್ರೆಗಳಿಗೆ ಭಾರಿಸಿ ಸೂಚನೆ ಕೊಡುತ್ತಾನೆ. ಇದು ಹೋಟೆಲ್‌ನಲ್ಲಿ ನಡೆಯುವ ವಿದ್ಯಮಾನ. ನಮ್ಮ ಮನೆಯಲ್ಲಿ ನನ್ನ ಹೆಂಡ್ತಿ ಅಡುಗೆ ಮಾಡಿ ಕೊನೆಗೆ ಚಮಚೆಯಿಂದ ಜಾಸ್ತಿ ತಿರುವಿ ತಿರುವಿ ಪಾತ್ರೆಗಳಿಗೆ ಬಾರಿಸುತ್ತಿರುತ್ತಾಳೆ. ಅದಕ್ಕೆ

ನಾನು : ನೀನೇನ್ ಹೋಟೆಲ್‌ನ್ಯಾಗ ಬಾರಿಸಿದಂಗ ಬಾರಿಸ್ತಿಯಲ್ಲ ?

ಹೆಂಡ್ತಿ : ನಿಮಗೆ ಅಡುಗೆ ರೆಡಿ ಅಂತ ಹೇಳಾಕ ಅದು.

೬೬. ನಿಮ್ಮಪ್ಪ ಅಮ್ಮ ನಂಗೆ ಸುಣ್ಣದ ನೀರು ಕುಡಿಸಿದ್ರು

ಹೆಂಡ್ತಿ : ನಿಂಗೆ ಯಾರು ಹೆಣ್ಣು ಕೊಡುತಿದ್ರು ನಮಪ್ಪ ಅಮ್ಮ ಏನೋ ಕರುಣೆ ತೋರಿ ಹೆಣ್ಣುಕೊಟ್ರು ಅದಕ್ಕೆ ನೀವು ಗೆದ್ರಿ. ಇಲ್ಲಂದ್ರೆ ನಿಮಗತಿ ಏನಾಗತಿತ್ತು ಗೊತ್ತಾ?

ನಾನು : ಗೆದ್ದದು ನಾನಾಲ್ಲೋ ನಿಮಪ್ಪ ಅಮ್ಮ. ನಾನು ಸೋತೆ, ಸೋತು ಸುಣ್ಣವಾದೆ. ನಿಮಪ್ಪ ಅಮ್ಮ ನಂಗೆ ಸೋಲಿಸಿ ಸುಣ್ಣದ ನೀರು ಕುಡಿಸಿದ್ರು.

೬೭. ಚಡ್ಡಿನ್ಯಾರು ನೋಡ್ತಾರ ?

ನಾನು ಸ್ನಾನ ಮಾಡಿಕೊಂಡು ಹೊರಗೆ ಬಂದು ಹೆಂಡ್ತಿಗೆ ನಾನು ಚಡ್ಡಿ ಕೊಡು ಅಂದೆ. ಆಕಿ ಹಳೇದು ಹರಿದದ್ದು ತಂದು ಕೊಟ್ಳು.

ನಾನು : ಹರಿದದ್ದು ಕೊಟ್ಯಲ್ಲ ಚೆನ್ನಾಗಿರದು ಕೊಡು

ಹೆಂಡ್ತಿ : ಹರಿದದ್ದೊ ಹೊಸದೊ ಸುಮ್ನೆ ಉಟ್ಕಬಾರ್ದ. ಮ್ಯಾಲೆ ಪ್ಯಾಂಟ್ ಉಟ್ಕಂತಿದ್ಯಲ್ಲ ಹರಿದದ್ದು ಚಡ್ಡಿ ಯಾರು ನೋಡ್ತಾರ ?

೭೮. ಕೋತಿಗಳಿಗೆ ಮನಿ ಕಟ್ಟಿಕೊಡಬೇಕು

ನಾವು ನಮ್ಮ ಹೊಸ ಮನಿಗೆ ಬಂದಿದ್ವಿ. ಆಗ ಯಾಕೋ ಏನೋ ಅಲ್ಲಿ ಕೋತಿಗಳ (ಮಂಗಗಳ) ಕಾಟ ಜಾಸ್ತಿ ಆಗಿತ್ತು. ಅವುಟ್ರನ ಓಡ್ಸಿ ಓಡ್ಸಿ ಸಾಕಾಗಿತ್ತು. ಅದಕ್ಕೆ ಮೂರು ವರ್ಷದ ಮಗ

ಶಶಾಂಕ : ಆ ಕೋತಿಗಳಿಗೆ ಮನೆಕಟ್ಟಿಕೊಡಬೇಕು ಅಂಗಾದ್ರೆ ಅವು ನಮ್ಮನಿಗೆ ಬರಲ್ಲಾ

ನಾನು : ಹ್ಯಾಂಗೋ ನಾವು ಹೊಸದು ಕಟ್ಟಿವಲ್ಲಾ ಅವುಕೆ ಈ ಹೊಸ ಮನೆ ಬಿಟು ನಾವೇ ಬೇರೆ ಮನಿಗೆ ಹೋದ್ರಾತು.

೭೯. ಮಿಸ್ ಕೊಡ್ಲಿಲ್ಲಪ್ಪ

ಶಶಾಂಕನಿಗೆ ನಾಲ್ಕು ವರ್ಷ ಇರಬಹುದು. ಬೇಬಿಕ್ಲಾಸಿಗೆ ಕಳುಹಿಸ್ತಾ ಇದ್ವಿ. ಫಸ್ಟ್ ಟೆಸ್ಟ ಬರೆದು ಬಂದಿದ್ದ. ಅಂಕಪಟ್ಟಿ ಕೊಟ್ಟಿದ್ರು. ಐವತ್ತಕ್ಕೆ ಮೂವತ್ತೊಂಬತ್ತು ಅಂಕ ತೆಗೆದುಕೊಂಡಿದ್ದ. ಅದಕ್ಕೆ

ನಾನು : ಯಾಕೋ ಗುಂಡ ಐವತ್ತಕ್ಕೆ ಐವತ್ತು ತಗಂಡಿಲ್ಲ ಯಾಕೆ ?

ಶಶಾಂಕ : ಇಲ್ಲಪ್ಪ ಮಿಸ್‌ಗೆ ನಾನು ಐವತ್ತು ಕೊಡು ಅಂತ ಕೇಳಿದೆ ಅವರು ಕೊಡ್ಲಿಲ್ಲ.

೮೦. ಅವುಟ್ರಗ ಇದೊಂದು ಸೇರ್ತು

ಒಂದು ಸಲ ಇಬ್ರು ಮಕ್ಕಳಿಗೂ ಕೆಮ್ಮು ಆಗಿತ್ತು. ರಾತ್ರಿ–ಹಗಲು ಕೆಮ್ಮಿದ್ದೆ ಕೆಮ್ಮಿದ್ದು. ಅದನ್ನು ನೋಡಿ ನನ್ನ ಹೆಂಡತಿಗೆ ಸಾಕಾಗಿ ಹೋಗಿತ್ತು. ಅದಕ್ಕೆ

ಹೆಂಡ್ತಿ : ನಾಯಿ ಕೆಮ್ಮು ಆದಂಗ ಆಗ್ಯೆತಿ. ಆ ಕಡೆ ಅದು ಈ ಕಡೆ ಇದು ಕೆಮ್ಮಿಕಾಂತ ಎದುರು–ಬಿದರು ಕಿವುಕ–ಕಿವುಕ್ ಅಂತ ನಾಯಿ ಕೆಮ್ಮಿದಂಗ ಕೆಮ್ಮುತಾವ. ನಂಗೆ ಸಾಕಾಗ್ಯೆತಿ. *(ಇಂತಹ ಸಂದರ್ಭದಲ್ಲಿ ಆಕಸ್ಮಿಕವಾಗಿ ಏನೋ ಗೊತ್ತಿಲ್ಲ ನಂಗೆ ಕೆಮ್ಮ ಬಂತು ಕೆಮ್ಮಿದೆ)*

ಹೆಂಡ್ತಿ : ತಗಳಪ್ಪಾ ಅವುಟ್ರಗ ಇದೊಂದು ಸೇರ್ತುನೋಡು.

೭೧. ಅಮ್ಮ–ತಾಯಿ ಅಂತ ಹೋದ್ರೆ ಇದಕ್ಕಿಂತ ಜಾಸ್ತಿ ಸಿಗ್ತಾದ

ನಾನು ಆಗಾಗ ಬೇರೆ ಯಾವುದಾದ್ರೂ ಊರಿಗೆ ಹೋದಾಗ ಅಥವಾ ಇನ್ಯಾವುದೋ ಸಂದರ್ಭದಲ್ಲಿ ನನ್ನ ಹತ್ರ ಚಿಲ್ರೆ ಹಣ ಜಾಸ್ತಿ ಇಟ್ಟುಕೊಂಡಿರ್ತಿದ್ದೆ. ಬಸ್ ಪ್ರಯಾಣ ಇತ್ಯಾದಿಗಳ ಸಂದರ್ಭಗಳಲ್ಲಿ ಅದು ಉಪಯೋಗವಾಗಬಹುದೆಂದು ಹೆಚ್ಚಾಗಿ ಚಿಲ್ಲರೆ ಹಣ ಇಟ್ಟುಕೊಳ್ಳುತ್ತಿದ್ದೆ. ಅದು ಮನೆಗೂ ಅಗತ್ಯವಾಗಿ ಬೇಕಾಗಿರುತ್ತಿತ್ತು. ಒಂದು ಸಲ ಜಾಸ್ತಿ ಚಿಲ್ಲರೆ ಇದ್ದದ್ದನ್ನು ನೋಡಿದ ನನ್ನ ಹೆಂಡತಿ ಬಂದು ಕೇಳಿದಾಗ ಇದ್ದುದ್ದನ್ನೆಲ್ಲ ಕೊಟ್ಟೆ ಅದನ್ನ ತಗಂಡು ಕೈಯಲ್ಲಿ ಅಲ್ಲಾಡಿಸುತ್ತಾ.

ಹೆಂಡ್ತಿ : ಇಷ್ಟೇನಾ ? ಅಮ್ಮ–ತಾಯಿ ಅಂತ ಹೋದ್ರೆ ಇದಕಿಂತ ಜಾಸ್ತಿ ಸಿಗ್ತಾದ.

೭೨. ಮಮ್ಮಿ ಹೊರಗ ನೆಲದ ಮ್ಯಾಲೆ ಚಿತ್ರ ಬಿಡಿಸಾಕತ್ಯಾಳ

ನನ್ನ ಹೆಂಡ್ತಿ ದಿನಂಪ್ರತಿ ಬೆಳಗ್ಗೆ ಹೊರಗೆ ಕಸ ಬಳಿದು, ನೀರು ಹಾಕಿ, ರಂಗೋಲಿ ಹಾಕುತ್ತಿದ್ದಳು. ಒಂದು ದಿನ ಹೊರಗ ರಂಗೋಲಿ ಹಾಕ್ತ ಇದ್ಳು ಅಂತ ಕಾಣುತ್ತೆ. ಅದು ನನಗೆ ಗೊತ್ತಾಗಿರಲಿಲ್ಲ. ಆಕೆ ನನಗೆ ಕಾಣಲಿಲ್ಲ. ಅದಕ್ಕೆ

ನಾನು : ಮೇಘನಾ ನಿಮ್ಮಮ್ಮ ಎಲ್ಲಿದ್ದಾಳ ?

ಮೇಘನಾ : ಮಮ್ಮಿ ಹೊರಗೆ ಇದಾಳ

ನಾನು : ಏನ್ ಮಾಡ್ತಾಳ ?

ಮೇಘನಾ : ಮಮ್ಮಿ ಹೊರಗೆ ನೆಲದ ಮ್ಯಾಲೆ ಚಿತ್ರ ಬಿಡಿಸಾಕತ್ಯಾಳ

೭೩. ಹೂವಿನ ಚಿತ್ರ ಬಿಡಸಲಾ ?

ನನ್ನ ಹೆಂಡತಿ ದಿನಾ ಬೆಳಗ್ಗೆ ಹೊರಗೆ ರಂಗೋಲಿ ಹಾಕ್ತಾ ಇದ್ಳು ಅದನ್ನು ನೋಡಿದ ಮೇಘನಾ

ಮೇಘನಾ : ಮಮ್ಮಿ ನಾ ಚಿತ್ರ ಬಿಡಿಸಲಾ ?

ಮಮ್ಮಿ : ಯಾವ ಚಿತ್ರ ಬಿಡಸ್ತಿ ?

ಮೇಘನಾ : ಹೂವಿನ ಚಿತ್ರ, ಇಲ್ಲಾ ಮನೆ ಚಿತ್ರ ಬಿಡಿಸಲಾ ?

೭೪. ಮೊದಲು ಆದರ್ಶ ಹೆಂಡತಿ ಆಗು ಸಾಕು

ನನ್ನ ಹೆಂಡತಿ ಹುಟ್ಟಿದ್ದು ಮಾರ್ಚ ೮ ರಂದು. ಅವತ್ತು ಅಂತರ್‌ರಾಷ್ಟ್ರೀಯ ಮಹಿಳಾ ದಿನಾಚರಣೆ ದಿನ ಅದು. ಅದಕ್ಕೆ ಆಕಿ ನನ್ನ ಹತ್ರ ಬಂದು

ಹೆಂಡ್ತಿ : ನಾನು ಅಂತರ್‌ರಾಷ್ಟ್ರೀಯ ಮಹಿಳಾ ದಿನಾಚರಣೆ ದಿನ ಹುಟ್ಟಿನಿ. ಅದಕ್ಕೆ ನಾನು ಆದರ್ಶ ಮಹಿಳೆ ಆಗ್ಬೇಕು ಅನ್ಕಂಡಿನಿ.

ನಾನು : ಆದರ್ಶ ಮಹಿಳೆ ಆಮೇಲೆ ಆಗವಂತಿ, ಮೊದ್ಲು ನನಗೆ ಆದರ್ಶ ಹೆಂಡತಿ ಆಗು ಸಾಕು.

೭೫. ಮೂಗುದಾರ ಹಾಕಿ ಹಿಡಕ

ಆಕಿ ಅವರ ತಂಗಿಗೆ ಫೋನ್ ಮಾಡಿದಾಗ ಏನೋ ಹೇಳಿದ್ಲಂತೆ ಅದಕ್ಕೆ ಅದನ್ನ ನನ್ನ ಮುಂದೆ ಬಂದು ಹೇಳಿದ್ಲು.

ಹೆಂಡ್ತಿ : ನಮ ತಂಗಿ ಮಾಮನ್ನ ಲೂಜ್ ಬಿಡಬ್ಯಾಡ್ ಅಂತ ಹೇಳ್ಯಾಳ

ನಾನು : ಆಯ್ತು ಲೂಜ್ ಬಿಡಬ್ಯಾಡ ಮೂಗುದಾರ ಹಾಕಿ ಗಟ್ಟಿಗೆ ಇಡ್ಕೋ ಸರಿನಾ ?

೭೬. ಅಡುಗೆ ನೀನೇ ಮಾಡ್ಕಂಡು ಉಣ್ಣು

ಕೆಲವೊಂದು ಸಲ ನಾನು ಊಟಕ್ಕೆ ಹೊರಗಡೆ ಹೋಗ್ತಾ ಇದ್ದೆ. ಒಂದು ಸಲ ಹೊರಗ ಹೋದಾಗ ರಾತ್ರಿ ಮನಿಗೆ ಊಟಕ್ಕೆ ಬರಲ್ಲ ಅಂತ ಹೇಳ್ಬೇಕು ಅಂತ ಫೋನ್ ಮಾಡಿದೆ. ಮಗಳು ಮೇಘನಾ ಫೋನ್ ರಿಸಿವ್ ಮಾಡಿದ್ಲು.

ನಾನು : ನೀವು ಊಟ ಮಾಡ್ರಿ ನನ್ನ ದಾರಿ ಕಾಯಬೇಡ್ರಿ ನಾನು ಹೊರಗಡೆ ಊಟ ಮಾಡಿ ಬರ್ತಿನಿ.

ಮೇಘನಾ : ಯಾಕ ಊಟ ಮನ್ಯಾಗ ಸರಿ ಇಲ್ವೇನು ?

ನಾನು : ಇಲ್ಲಮ್ಮ ನಿಮ್ಮಮ್ಮಗ ಅಡಿಗೆ ಸರಿ ಮಾಡಾಕ ಬರಲ್ಲ. ಅದಕ್ಕೆ ನಾನು ಹೊರಗ ಊಟ ಮಾಡಿ ಬರ್ತಿನಿ.

ಮೇಘನಾ : ಅಮ್ಮಗ ಅಡಿಗಿ ಮಾಡಕ ಸರಿ ಬರಲ್ಲಾ ಅಂದ್ರ ನೀನೇ ಅಡಿಗೆ ಮಾಡ್ಕೊಂಡು ಉಣ್ಣು.

೭೭. ನಿನ್ನ ತಲಿ ಮ್ಯಾಲೆ ಕಲ್ಲಿಟ್ರೆ ?

ನಮ್ಮ ಮನೆಯಲ್ಲಿ ಒಂದು ಕಂಪ್ಯೂಟರ್ ಇದೆ. ಅದನ್ನು ಟೇಬಲ್ ಮೇಲೆ ಸೆಟ್ ಮಾಡಿದ್ದೆ. ನನ್ನ ಹೆಂಡ್ತಿ ಯಾವುದಾದರೂ ಸಣ್ಣ–ಪುಟ್ಟ ಸಾಮಾನುಗಳನ್ನು ತಂದು ಸಿಪಿಯು ಮೇಲೆ ಇಲ್ಲ ಕೀಬೋರ್ಡ ಮೇಲೆ ಇಡ್ತಾ ಇದ್ಲು. ಅನೇಕ ಸಲ ಹಾಗೆಲ್ಲಾ ಇಡಬಾರದು ಅಂತಾ ಬೈತ್ತಿದ್ದೆ. ಆದ್ರೂ ಆಕೆ ಅಂಗೆ ಇಡ್ತಾ ಇದ್ಳು. ಒಂದು ಸಲ ನನಗೆ ಕೋಪ ಬಂತು ಅದಕೆ

ನಾನು : ಆ ಕೀಬೋರ್ಡ ಮ್ಯಾಲೆ ಏನೂ ಇಡಬಾರದು ಅಂತ ನಾನು ಹೇಳಿಲ್ವ ?

ಹೆಂಡ್ತಿ : ಯಾಕೆ ಇಟ್ರ ಏನಾಗ್ತಾದ ?

ನಾನು : ನಿನ ತಲಿಮ್ಯಾಲೆ ಕಲ್ಲಿಟ್ರ ಯಂಗಾತ್ತಾದ ? ಅದರಂಗ ಆಗ್ತಾದ ನೋಡು

೭೮. ಅಪ್ಪ ಕನ್ನಡ ಸಾರ್ ಅಲ್ವ ಅದ್ಕೆ ಇಂಗ್ಲೀಷ ಬರಲ್ಲ

ಮಗಳು ಮೇಘನಾ ಇಂಗ್ಲೀಷ ಮೀಡಿಯಂ ಓದುತ್ತಾ ಇದ್ಳು. ಅದಕ್ಕೆ ಆಕೆಯ ಎಲ್ಲಾ ವರ್ಕ್ ಇಂಗ್ಲೀಷನಲ್ಲಿ ಇರುತಿತ್ತು. ನನಗೆ ಹೆಚ್ಚಾಗಿ ಕೆಲಸಗಳ ಒತ್ತಡ ಇರುವುದರಿಂದ ಮಕ್ಕಳಿಗೆ ಓದಿಸುವುದು, ಬರೆಸುವುದು, ಹೋಂ ವರ್ಕ್ ಇತ್ಯಾದಿ ಎಲ್ಲಾ ಕೆಲಸ ಕಾರ್ಯಗಳನ್ನು ನನ್ನ ಹೆಂಡತಿ ನೋಡಿಕೊಂಡು ಹೋಗುತಿದ್ದಳು. ಇದರ ಬಗ್ಗೆ ಹೆಚ್ಚಿಗೆ ನಾನು ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ. ಮಕ್ಕಳು ಇದರ ಬಗ್ಗೆ ಏನಾದ್ರೂ ಕೇಳಿದ್ರೆ ನಂಗೆ ಗೊತ್ತಾಗಲ್ಲ, ನಿಮ್ಮಮ್ಮಗೆ ಕೇಳ್ರಿ ಎಂದು ಹೇಳುತ್ತಿದ್ದೆ. ಒಂದು ಸಲ ಪರೀಕ್ಷೆ ಮುಗಿಸಿಕೊಂಡು ಬಂದ ಮೇಘನಾ ಪ್ರಶ್ನೆಪತ್ರಿಕೆ ನನ್ನ ಕೈಯಲ್ಲಿ ನೋಡುವುದಕ್ಕೆ ಕೊಟ್ಟಳು. ನಾನು ಆ ಪ್ರಶ್ನೆಪತ್ರಿಕೆಯನ್ನು ಹಿಂದೆ ಮುಂದೆ ನೋಡಿ, ತಿರಿವಿ ಮುರುವಿ ಹಾಕಿ ವಾಪಾಸ್ ಮೇಘನಾಳ ಕೈಯಲ್ಲಿ ಕೊಟ್ಟೆ. ಅದಕ್ಕೆ ಆಕಿ

ಮೇಘನಾ : ಅಪ್ಪ ಕನ್ನಡ ಸಾರ್ ಅಲ್ವ, ಅದಕ್ಕೆ ಅಪ್ಪಗ ಇಂಗ್ಲೀಷ ಓದಾಕ ಬರಲ್ಲ.

೭೯. ಮನಿಗೆ ಬಂದಾತ ಬಾತ್‌ರೂಂಗೆ ಬರಲ್ಲೇನು?

ನಾವು ಬಾಡಿಗೆ ಮನೆಯಲ್ಲಿ ಇದ್ದಾಗ ಅಷ್ಟೇನು ನಮಗೆ ತೃಪ್ತಿ ಇರಲಿಲ್ಲ. ಎಲ್ಲಾ ಸಾಮಾನುಗಳು ಎಲ್ಲರೂ ಒಂದೇ ಕಡೆ. ನಂಗೆ ಸ್ವಲ್ಪ ಪ್ರತ್ಯೇಕ ಇದ್ರೆ ಚೆನ್ನಾಗಿ ಅನಿಸ್ತಿತ್ತು. ಯಾಕಂದ್ರೆ ಏನಾದ್ರೂ, ಬರವಣಿಗೆ ಇತ್ಯಾದಿ ವರ್ಕ್ಸ್ ಮಾಡುವಾಗ ಯಾರಾದ್ರೂ ಬಂದ್ರೆ ತೊಂದ್ರೆ ಆಗುತ್ತಿತ್ತು.

ಅದಕ್ಕೆ ನಾನು ಹೊಸ ಮನೆ ಕಟ್ಟಿಸುವಾಗ ತೀರ್ಮಾನ ಮಾಡಿದೆ. ಎರಡು ಬೆಡ್‌ರೂಂ, ಹಾಲ್, ಕಿಚನ್, ಡೈನಿಂಗ್ ಹಾಲ್ ಇತ್ಯಾದಿಗಳನ್ನು ಕಟ್ಟಬೇಕು ಅಂದುಕೊಂಡು ಅದೇ ಪ್ರಕಾರ ಕಟ್ಟಿಸಿದೆ. ನನ್ನ ಬೆಡ್ ರೂಂಗೆ ಅಟ್ಯಾಚ್ ಬಾತ್ ರೂಂ ಕಟ್ಟಿಸಬೇಕೆಂದುಕೊಂಡಿದ್ದೆ. ಆದ್ರೆ ಜಾಗ ಚಿಕ್ಕದಿದ್ದರಿಂದ ಅಟ್ಯಾಚ್ ಆಗಲಿಲ್ಲ. ಹೊಸ ಮನಿಗೆ ಬಂದು ಸೇರಿಕೊಂಡೆವು. ಒಂದು ಬೆಡ್ ರೂಂ ಹೆಂಡತಿ ಮಕ್ಕಳಿಗೆ ಒಪ್ಪಿಸಿ, ಮತ್ತೊಂದು ಬೆಡ್ ರೂಂನಲ್ಲಿ ನನ್ನ ಪುಸ್ತಕ, ಟೇಬಲ್ಸ್ ಕಂಪ್ಯೂಟರ್ ಇತ್ಯಾದಿಗಳನ್ನು ಇಟ್ಟುಕೊಂಡೆ. ಆಗ ಹೆಂಡತಿಗೆ

ನಾನು : ನನ್ನ ಬೆಡ್ ರೂಂಗೆ ಯಾರು ಬರಬ್ಯಾಡ್ರಿ ನನ್ನ ರೂಂಗೆ ನಾನು ಬೀಗ ಹಾಕ್ಕೊಂಡು ಇರ್ತಿೇನಿ. ನಿಮ್ಮ ರೂಂಗೆ ನಾನು ಬರಲ್ಲ.

ಹೆಂಡ್ತಿ : ಆಯ್ಯೋ ಹೊಸ ಗಾದೆ ಗೊತ್ತೇನು ?

ನಾನು : ಏನದು ?

ಹೆಂಡ್ತಿ : ಮನಿಗೆ ಬಂದಾತ ಬಾತ್‌ರೂಂಗೆ ಬರಲ್ಲೇನು ?

೮೦. ಮತ್ಯಾಕ ಆ ಕೆಟ್ಟ ಗಳಿಗೇನಾ ನೆನಪ ಮಾಡ್ತಿ ?

ಒಂದು ಸಲ ನನ್ನ ಹೆಂಡತಿ ಯಾವುದೋ ಕಾರ್ಯಕ್ರಮಕ್ಕೆ ತನ್ನ ತವರಿಗೆ ಮುಂಚೆ ಹೋಗಿದ್ದಳು. ನಾನು ಆ ಮೇಲೆ ಹೋಗಬೇಕಾಗಿತ್ತು. ಆಕೆಗೆ ಯಾವುದೋ ಒಂದು ಸೀರೆ ಬೇಕಾಗಿತ್ತಂತೆ. ಅದಕ್ಕೆ ಆಕಿ ನಂಗೆ ಫೋನ್ ಮಾಡಿದ್ಲು.

ಹೆಂಡ್ತಿ : ನಾಳೆ ನೀನು ಇಲ್ಲಿಗೆ ಬರ್ತಿದ್ಯಾ ?

ನಾನು : ಹೌದು ಯಾಕೆ ?

ಹೆಂಡ್ತಿ : ಹಳದಿ ರೇಷ್ಮೆ ಸೀರೆ ಐತನೋಡು ಅದನ್ನು ತಗಂಡು ಬಾ

ನಾನು : ಏ... ನಂಗೆ ಗೊತ್ತಾಗಲ್ಲ ಬಿಡು. ಎಲ್ಲಾ ಸೀರೆಗೂ ಹಳದಿ ಐದಾವ ಅದ್ರಾಗ ಯಾವುದಂತ ತರ್ಲಿ ?

ಹೆಂಡ್ತಿ : ಅಯ್ಯೋ ಮದುವೆ ದಿನ ಉಟ್ಕಂಡಿದ್ನೆಲ್ಲ ಅದೇ ಸೀರೆ ನೋಡು. ಮದುವೆ ಫೋಟೋ ನೋಡು ಗೊತ್ತಾಗ್ತಾದ.

ನಾನು : ಮತ್ತ್ಯಾಕ ಆ ಕೆಟ್ಟ ಗಳಿಗೇನಾ ನೆನಪ ಮಾಡ್ತಿ ?

೮೧. ನಮಪ್ಪಂದು ಅಂಬುಲೆನ್ಸ್ ಐತಿ

ನನ್ನ ಹೆಂಡತಿಯ ತಂದೆ ಸಮಾಜ ಸೇವಕರು. ಅನೇಕ ಕಾರ್ಯಗಳನ್ನು ಮಾಡಿದ್ದಾರೆ. ಉಚಿತ ಸಾಮೂಹಿಕ ಮದುವೆ ಮತ್ತು ಆರೋಗ್ಯ ಕಾರ್ಯಕ್ರಮಗಳನ್ನು ಮಾಡಿದ್ದಾರೆ. ಅದಕ್ಕಾಗಿ ಒಂದು ಅಂಬುಲೈನ್ಸ್ ಇಟ್ಕೊಂಡು ಸೇವೆ ಸಲ್ಲಿಸುತ್ತಿದ್ದಾರೆ. ಈ ಸೇವೆಗಾಗಿ ಅವರಿಗೆ ರಾಜ್ಯ ಮಟ್ಟದ ಗಣರಾಜ್ಯ ಪ್ರಶಸ್ತಿಯೂ ಬಂದಿದೆ. ಅದಕ್ಕಾಗಿ ನನ್ನ ಹೆಂಡತಿ ಅವರಪ್ಪನ ಬಗ್ಗೆ ಯಾವಾಗ್ಲೂ ಗುಣಗಾನ ಮಾಡುತ್ತಿರುತ್ತಾಳೆ. ಒಂದು ಸಲ.

ಹೆಂಡ್ತಿ : ನಮಪ್ಪ ಎಷ್ಟು ದೊಡ್ಡಾತ ಗೊತ್ತಾ. ಎಷ್ಟೆಲ್ಲಾ ಸರ್ವಿಸ್ ಮಾಡಾಕತ್ಯಾನ ನಿಂಗೆ ಗೊತ್ತೇನು ?

ನಾನು : ನಿಮಪ್ಪ ಏನೆಲ್ಲಾ ಮಾಡ್ಲಿ ಬಿಡು; ಆತನ ಹತ್ರ ಏನೈತಿ ಹೇಳು ?

ಹೆಂಡ್ತಿ : ನಮಪ್ಪನ ಹತ್ರ ಅಂಬುಲೈನ್ಸ್ ಐತಿ ಗೊತ್ತಾ ?.

೮೨. ನಮಪ್ಪ ಅಮ್ಮ ಬಹಳ ಬುದ್ಧಿವಂತ್ರು

ನನ್ನ ಹೆಂಡತಿ ನನ್ನ ಅಕ್ಕನ ಮಗಳು. ಆಕಿ ಹುಟ್ಟಿದಾಗ ನಮ್ಮ ತಾಯಿ ನನಗೆ ಕೊಡಬೇಕೆಂದು ತೀರ್ಮಾನಿಸಿದ್ದರಂತೆ. ಆ ಪ್ರಕಾರ ನಾನು

ಉಪನ್ಯಾಸಕನಾಗಿ ನೌಕರಿಗೆ ಸೇರಿದ ನಂತರ ಮದುವೆ ಮಾಡಿದ್ರು. ಮದುವೆ ನಾವಿರುವಲ್ಲಿ ಮತ್ತು ಮದುವೆಯ ಎಲ್ಲಾ ಖರ್ಚು ನಾವೇ ನೋಡಿಕೊಂಡೆವು. ಹೆಣ್ಣುಮಗಳ (ಅಕ್ಕನ)ನ್ನು ಮದುವೆಗೆ ಖರ್ಚು ಕೊಡು ಎಂದು ಕೇಳದು ಅಷ್ಟೇನು ಸರಿ ಅನಿಸದು. ಮತ್ತು ಅವರು ಕೊಡುವಷ್ಟು ಶ್ರೀಮಂತರಿರಲಿಲ್ಲ. ಅವರಪ್ಪ ಅಮ್ಮನ ಬಗ್ಗೆ ನನ್ನ ಹೆಂಡತಿಗೆ ಬಹಳ ಗೌರವ. ಮತ್ತು ಯಾವಾಗ್ಲೂ ಗುಣಗಾನ ಮಾಡ್ತಾ ಇರ್ತಾಳ. ಒಂದು ಸಲ ಬಂದು

ಹೆಂಡ್ತಿ : ನಮಪ್ಪ ಅಮ್ಮ ಬಹಳ ಬುದ್ಧಿವಂತ್ರು.

ನಾನು : ನಿಮಪ್ಪ ಅಮ್ಮ ಬುದ್ಧಿವಂತ್ರು ಅಂತ ನಂಗೆ ಮದುವೆ ದಿನಾನೆ ಗೊತ್ತಾಯ್ತು.

ಹೆಂಡ್ತಿ : ಅದೆಂಗ ಗೊತ್ತಾಯ್ತು ?

ನಾನು : ನಂಗೆ ಐದು ಪೈಸೆ ಕೊಡದೇನೆ ನಿನ್ನ ತಂದು ನಂಗೆ ಗಂಟು ಹಾಕಿದ್ರಲ್ಲಾ ಅವತ್ತೆ ಗೊತ್ತಾಯ್ತು ನಿಮ್ಮಪ್ಪ ಅಮ್ಮ ಎಷ್ಟು ಬುದ್ಧಿವಂತ್ರು ಅಂತ.

೮೩. ನೀನಿಲ್ಲದಿದ್ರೆ ಇನ್ನೊಬ್ಬಾಕಿ ಬರ್ತಿದ್ಲು

ಹೆಂಡ್ತಿ : ನಾನು ಬಿಸಿ ಬಿಸಿ ಅಡುಗೆ ಮಾಡಿ ಬಾಯಾಗ ಕೊಡ್ತಿನಿ. ಎಲ್ಲಾ ತೊಳ್ದು-ಬಳ್ದು ಚೆಂದಾಗಿ ಇಟ್ಟಿನಿ. ನಾನೊಬ್ಬ ಹೆಂಡ್ತಿ ಅಂತ ಐದಿನಿ, ನಿನ್ ಬಾಳೆವು ಚೆಂದಾಗಿ ಐತಿ.

ನಾನು : ನೀನಿಲ್ಲದಿದ್ರೆ ಇನ್ನೊಬ್ಬಾಕಿ ಹೆಂಡ್ತಿ ಅಂತ ಬರ್ತಿದ್ಲು. ನನ ಬಾಳ್ವೆ ಇದ್ರಗಿಂತ ಇನ್ನೂ ಚೆನ್ನಾಗಿರ್ತಿತ್ತು. ವದ್ರುಬ್ಯಾಡ ಸುಮ್ನಿರು.

೮೪. ಪ್ಯಾಂಟಿನ್ಯಾಗ ಕಾಲು ತೂರ್ಸಿ ರೆಡಿ ಆಗ್ತಿದ್ದಿ

ನಾವು ಕುಟುಂಬ ಸಮೇತ ಎಲ್ಲಿಗಾದ್ರೂ ಹೋಗಬೇಕಾದಾಗ ತಯಾರು ಆಗುವುದೇ ಒಂದು ಬಹುದೊಡ್ಡ ಕೆಲಸವಾಗಿರುತ್ತಿತ್ತು. ನನ್ನ ಹೆಂಡ್ತಿ ಮಕ್ಕಳನ್ನೆಲ್ಲಾ ತಯಾರು ಮಾಡಿ ತಾನು ತಯಾರು ಆಗುವುದರೊಳಗೆ ಗಂಟೆಗಳೇ ಕಳೆದು ಹೋಗುತ್ತಿತ್ತು. ಇದಕ್ಕೆ ನಂಗೆ ಸಾಕು ಸಾಕಾಗಿ ಹೋಗುತ್ತಿತ್ತು. ನಾನು ರೆಡಿಯಾಗಿ ಅವರು ರೆಡಿಯಾಗುವವರೆಗೆ ಕಾಯುತ್ತಾ ಕುಳಿತುಕೊಳ್ಳಬೇಕಾಗುತ್ತಿತ್ತು. ಅದಕ್ಕೆ

ನಾನು : ಬೇಗ ರೆಡಿಯಾಗೋ ಎಷ್ಟೊತ್ತು ? ನಾನು ನೋಡು ರೆಡಿಯಾಗಿ ಕುಂತಿನಿ.

ಹೆಂಡ್ತಿ : ನಾನು ಹೆಣ್ಣುಮಗಳು, ಮಕ್ಕಳನ್ನು ರೆಡಿ ಮಾಡಿ ನಾನು ತಯಾರು ಆಗಾದು ತಡ ಆಗ್ತಾದ. ನೀನೇನು ಗಂಡುಮಗ ಪ್ಯಾಂಟಿನ್ಯಾಗ ಕಾಲು ತೂರ್ಸಿ ರೆಡಿ ಆಗ್ತಿದ್ದಿ.

೮೫. ತಿಂದು ತಿಂದು ದಪ್ಪ ಆಗಿದ್ದಿ

ಹೆಂಡ್ತಿ : ನನ್ನ ಮಂದ್ಯೆಲ್ಲರೂ ದಪ್ಪ ಆಗಿದ್ದಿ ದಪ್ಪ ಆಗಿದ್ದಿ ಅಂತಾರ

ನಾನು : ದುಡೆಲ್ಲಾ ದುಃಖಪಡಲ್ಲ; ಅಪ್ಪಂದು ಅಲ್ಲಾ ಅಮ್ಮಂದು ಅಲ್ಲ. ತಿಂದು ತಿಂದು ದಪ್ಪಗ ಆಗ್ಲಾರದಂಗ ಇದ್ದೀಗಾ. ನಾನು ದುಡಿದು ದುಡಿದು ತೆಳ್ಳಗಾಗಕತ್ತಿನಿ.

೮೬. ಒದ್ರಾದ್ದು ನಾಯಿ ಕೆಲ್ಸ

ಒಂದು ಸಲ ಮಗ ಶಶಾಂಕ ಹೊರಗೆ ಆಟ ಆಡ್ತಾ ಇದ್ದ. ಊಟಕ್ಕೆ ಬಾ ಅಂತಾ ಕೂಗಿ ಕೂಗಿ ಸಾಕಾಗಿ ಹೊರಗ ಹೋಗಿ ನೋಡಿದ್ಳು. ಅವನು ಮನೆ ಮುಂದೇನೆ ಆಟ ಆಡುತ್ತಾ ಇದ್ದ. ಆದ್ರೆ ಈಕೆಯ ಮಾತಿಗೆ ಅವನು ಏನೂ ಪ್ರತಿಕ್ರಿಯೆ ಕೊಟ್ಟಿರಲಿಲ್ಲ. ಆಕೆಗೆ ಸಿಟ್ಟು ಬಂತು ಅದಕ್ಕೆ

ಹೆಂಡ್ತಿ : ಕೂಗಾಕತ್ತಿನಿ ಓ ಅಂತ ವದ್ರವಲ್ಯಲ್ಲ ? ಎಲ್ಲಾ ತಂದೆ ಗುಣ

ನಾನು : ಒದ್ರಾದು ಏನಿದ್ರು ನಾಯಿ ಕೆಲ್ಸ ನಮ್ಮದಲ್ಲ ಅದು.

೮೭. ಬರೇ ಆಕಿದ್ವೆ ಹಾಕ್ತಾರ

ನಾಲ್ಕು ವರ್ಷದ ಮಗ ಶಶಾಂಕ ದಿನಾ 'ಪೋಗೋ' ಚಾನಲ್‌ನಲ್ಲಿ 'ಚೋಟಾಭೀಮ' ನೋಡ್ತಾ ಇದ್ದ. ತನಗೆ ಯಾವ್ಯಾವಾಗ ಟೈಮ್ ಸಿಗ್ತಿತ್ತೊ ಅವಾಗೆಲ್ಲಾ ಅದೆ ಚಾನಲ್ ನೋಡ್ತಾ ಇದ್ದ. ಅದ್ರಲ್ಲಿ ಹೆಚ್ಚಿನವುಗಳು ರಿಪೀಟ್ ಆಗಿ ಬರ್ತಾ ಇದ್ವು. ಅದಕ್ಕೆ

ಶಶಾಂಕ : ಬರೆ ಆಕಿದ್ವೆ ಹಾಕ್ತಾರ

ನಾನು : ಮಗನೇ ನೋಡಿದವರೆ ನೋಡ್ತಾರಲ್ಲ ಅದ್ಕೆ ಅವ್ರು ಆಕಿದ್ವೆ ಆಕ್ತಾರ.

೮೮. ರೊಕ್ಕ ಇಲ್ಲಂದ್ರೆ ನಂಗೆ ನಿದ್ದೆ ಬರಲ್ಲ

ನಾನು ರೊಕ್ಕ ಇದ್ರೆ ಕೊಡ್ತಿದ್ದೆ. ಇಲ್ಲಂದ್ರೆ ಇಲ್ಲ ಅಂತಿದ್ದೆ. ಅದಕ್ಕೆ ನನ್ನ ಹೆಂಡತಿ ಬಂದು ಪೀಡಿಸ್ತಾ ಇದ್ಳು.

ಹೆಂಡ್ತಿ : ರೊಕ್ಕ ಇದ್ರೆ ಕೊಡು

ನಾನು : ಇಲ್ಲೊ ಇದ್ರೆ ಕೊಡ್ತಿದ್ದಿಲ್ವ ?

ಹೆಂಡ್ತಿ : ನನತ್ರ ರೊಕ್ಕ ಇಲ್ಲಂದ್ರೆ ನಂಗೆ ನಿದ್ದೇನೇ ಬರಲ್ಲಾ.

೮೯. ನಾನೇ ದಿಗಂಬರ ಆಗಿನಿ

ನಾನು ಅಂದುಕೊಂಡಂತೆ ಮನೆ ಕಟ್ಟಿಸಿದೆ. ಕೆಲ ಅಲ್ಲಲ್ಲಿ ಸಣ್ಣ–ಪುಟ್ಟ ವ್ಯತ್ಯಾಸಗಳು ಆದವು ನಿಜ. ಅದು ಅನಿವಾರ್ಯವೂ ಆಗಿತ್ತು. ಕೊನೆ ಕೊನೆಗೆ ಇದ್ದ ಎಲ್ಲಾ ಹಣವು ಖಾಲಿ ಆಗಿ ಹೋಗಿತ್ತು. ಪ್ಲೈವುಡ್ ವರ್ಕ್ಸ್, ಬಾಗಿಲು ಪರದೆ ಇತ್ಯಾದಿಗಳನ್ನು ಮುಂದೆ ಹಣದ ಅನುಕೂಲವಾದಾಗ

ಮಾಡಬೇಕೆಂದುಕೊಂಡು ಕೈಬಿಟ್ಟೆದ್ದೆ. ನನ್ನ ಹೆಂಡತಿ ಅವುಗಳನ್ನು ಮಾಡಿಸಲೇಬೇಕು ಎಂದು ಹಠ ಹಿಡಿದಿದ್ದಳು. ನಾನು ನನ್ನ ಪರಿಸ್ಥಿತಿ ಹೇಳಿ ಬಯ್ದು ಸುಮ್ಮನಿರಿಸಿದ್ದೆ. ಅದಕ್ಕೆ

ಹೆಂಡ್ತಿ : ನೋಡು ಮನೆ ಹೆಂಗೈತಿ ಸ್ವಲ್ಪನ್ನ ಚಂದ ಕಾಣ್ತಾದಾ ? ದಿಗಂಬರ ಆಗೈತಿ

ನಾನು : ನಾನೇ ದಿಗಂಬರ ಆಗಿನಿ, ಮನೆ ಅಲ್ಲ ಏನು ಬಿಡು

೯೦. ನಾನು ಚಂದ್ರ ಇದ್ದಂಗ

ನನಗೆ ಹೆಂಡತಿ ಮಕ್ಕಳ ಕಿರಿಕಿರಿಗೆ ಒಂದೊಂದು ಸಲ ಸಾಕು ಸಾಕಾಗಿ ಹೋಗುತ್ತಿತ್ತು. ಅದಕ್ಕೆ

ನಾನು : ಏನಾಂತ ಗಂಟು ಬಿದ್ರೆಲ್ಲೊ ನಂಗೆ ಗ್ರಹಗಳು ತರಹ ಗಂಟು ಬಿದ್ದಾಂಗ ಬಿದ್ರಿ.

ಮೇಘನಾ : ಯಾವ್ಯಾವು ಗ್ರಹ ಅಪ್ಪ

ನಾನು : ನೀನು ರಾಹು, ಶಶಾಂಕ ಕೇತು, ನಿಮ್ಮಮ್ಮ ಶನಿ

ಹೆಂಡ್ತಿ : ನೀನು

ನಾನು : ನಾನು ಚಂದ್ರ ಇದ್ದಂಗ.

೯೧. ಅವ್ರಿಗೆ ಅದ್ರ ಬದ್ಲು ಇದು ಕೊಟ್ಟೀಗಿ

ನನ್ನ ಹೆಂಡ್ತಿ ಪಿಯುಸಿ ಪರೀಕ್ಷೆ ಬರೆಯುವುದಕ್ಕೆ ಆಗಿರಲಿಲ್ಲ. ಅಷ್ಟಕ್ಕೆ ಶಿಕ್ಷಣ ಮೊಟುಕುಗೊಳಿಸಿದ್ದಳು. ಅದಕ್ಕೆ ನಾನು ಸ್ವಲ್ಪ ಜ್ಞಾನನಾರ ಬರ್ಲಿ ಅಂತ ಖಾಸಗಿಯಾಗಿ ವಯಸ್ಸಿನ ಆಧಾರದ ಮೇಲೆ ನೇರವಾಗಿ ಪದವಿ ಪರೀಕ್ಷೆಗೆ ಅವಕಾಶ ಕೊಡಿಸಿದ್ದೆ. ಅದರ ಪರೀಕ್ಷೆ ಬರೆಯುವುದಕ್ಕೆ ಕೇಂದ್ರಕ್ಕೆ ಹೋಗಬೇಕಿತ್ತು. ಅದೇ ದಿನ ನಮ್ಮ ದೂರದ ಸಂಬಂಧಿಕರೊಬ್ಬರ ಸೀಮಂತ ಕಾರಣ ಇತ್ತು. ಪರೀಕ್ಷೆ ಮಧ್ಯಾಹ್ನ ೨ ರಿಂದ ಇರುವುದರಿಂದ ಅವರಿಗೆ

ಭೇಟಿಯಾಗಿ ಪರೀಕ್ಷೆ ಬರೆಯುವುದಕ್ಕೆ ಹೋದರಾಯಿತು ಎಂದು ತೀರ್ಮಾನಿಸಿದ್ದೆವು. ಹೋಗುವಾಗ, ಅವರಿಗೆ ಕೊಡುವುದಕ್ಕೆ ಬಟ್ಟೆಯ ಒಂದು ಕ್ಯಾರಿಬ್ಯಾಗ್, ಪರೀಕ್ಷೆಯ ಪ್ಯಾಡ್, ಪೆನ್ ಮತ್ತು ಹಾಲ್‌ಟಿಕೇಟ್ ಇತ್ಯಾದಿಗಳ ಮತ್ತೊಂದು ಕ್ಯಾರಿ ಬ್ಯಾಗ್ ತೆಗೆದುಕೊಂಡು, ಹೋಗಿದ್ದೆವು. ಆಗ ನನ್ನ ಹೆಂಡತಿಗೆ

ನಾನು : ಅಲ್ಲೋ ನೀನು ಆ ದಂಪತಿಗಳಿಗೆ ಬಟ್ಟೆ ಕ್ಯಾರಿ ಬ್ಯಾಗ್ ಬದ್ಲು ಪ್ಯಾಡ್, ಹಾಲ್ ಟಿಕೇಟ್ ಬ್ಯಾಗ್ ಕೊಟ್ಟಿಗಿ ಅವರು ಗಾಬರಿ ಆಗುವಂಗ.

೮೨. ತಣ್ಣಗ ಮಾಡಬೇಕಾ ?

ನಮ್ಮ ಊರು ಕೊಟ್ನೆಕಲ್‌ದಲ್ಲಿ ನಮ್ಮ ಜನಾಂಗದವರಲ್ಲಿ ಯಾರಾದ್ರೂ ಸತ್ತರೆ ಊಳುವ ಸಂಪ್ರದಾಯವಿದೆ. ಅದಕ್ಕಾಗಿ ಸ್ಮಶಾನಕ್ಕೆ ಕುಣಿ ಅಗೆಯುವುದಕ್ಕೆ ಅದೇ ಜನಾಂಗದವರೇ ಹೋಗುತ್ತಾರೆ. ಬೇರೆಯವರಿಗೆ ಸಾವಿರಾರು ರೂಪಾಯಿ ಕೊಟ್ಟು ಕುಣಿ ಅಗೆಯಿಸುವಷ್ಟು ಶಕ್ತಿ ಅವರ ಹತ್ತಿರ ಇರಲಿಕ್ಕಿಲ್ಲ. ಅದು ಬೇರೆ ಕಾರಣ. ಆದ್ರೆ ಕುಣಿ ಅಗೆಯುವುದಕ್ಕೆ ಸ್ಮಶಾನಕ್ಕೆ ಹೋದವರಿಗೆ ಮಾತ್ರ ಕುಡಿಯುವುದಕ್ಕೆ ವ್ಯವಸ್ಥೆ ಮಾಡಲೇಬೇಕು. ಅಂತಹವರು ಮಾತ್ರ ಕುಣಿ ಕಡಿಯುವುದಕ್ಕೆ ಹೋಗಿರುತ್ತಾರೆ. ಅದು ಬೇರೆ ಸಂಗತಿ. ಕುಣಿ ಅಗೆಯುವುದಕ್ಕೆ ಹೋದವರು ತಮ್ಮನ್ನು ಈ ಕಾರ್ಯಕ್ಕೆ ಕಳುಹಿಸಿದ್ದವರಿಗೆ ನೇರವಾಗಿ ಕುಡಿಯುವುದಕ್ಕೆ ಬಾಟಲ್ ತೆಗೆದುಕೊಂಡು ಬರ್ರಿ ಅನ್ನಲ್ಲ. ಅದಕ್ಕೆ ಅವ್ರು ತಣ್ಣಗ ಮಾಡ್ರಿ ಎಂದು ಹೇಳುತ್ತಾರೆ. ನಾನು ಬಿಸಿಲಿನಿಂದ ಬಳಲಿಕೊಂಡು ಹೊರಗಿನಿಂದ ಮನೆಗೆ ಬಂದೆ. ಹೆಂಡತಿಗೆ

ನಾನು : ಬಿಸಿಲು ಹುಗಿ ಹುಗಿ ಹಾಕ್ತಾದ, ಬಾಯಾರ್‍ಯದ ಸ್ವಲ್ಪ ಕುಡಿಲಿಕ್ಕೆ ಏನಾದ್ರು ತಣ್ಣಗ ಇದ್ರ ಕೊಡು.

ಹೆಂಡ್ತಿ : ಏನು...! ತಣ್ಣಗ ಮಾಡಬೇಕಾ ?

೯೩. ಮಮ್ಮಿ ಆ ಪುಸ್ತಕ ಓದು

ಮಗಳು ಮೇಘನಾಳಿಗೆ ಓದಿಸುವುದು, ಬರೆಸುವುದು, ಹೋಂ ವರ್ಕ್ಸ್ ಮಾಡಿಸುವುದು ಹೆಚ್ಚಿನ ಜವಾಬ್ದಾರಿ ಅವರಮ್ಮಗೆ ಇತ್ತು. ಅದಕ್ಕೆ ಮಗಳಿಗೆ ಅವರಮ್ಮ ಯಾವಾಗ್ಲೂ ಓದು.. ಓದು.. ಎಂದು ಕಿರಿಕಿರಿ ಕೊಡುತ್ತಿದ್ದಳು. ಅದು ಮಕ್ಕಳಿಗೆ ದೊಡ್ಡ ಹಿಂಸೆ ಅನ್ನೋದೂ ನನಗೆ ಗೊತ್ತು. ಅವರಮ್ಮ ಖಾಸಗಿಯಾಗಿ ಪದವಿಗೆ ಪ್ರವೇಶ ಪಡೆದಿದ್ಳು. ವಿಶ್ವವಿದ್ಯಾಲಯದವರು ಪ್ರವೇಶ ಸಂದರ್ಭದಲ್ಲೇ ಸಂಬಂಧಪಟ್ಟ ಪುಸ್ತಕಗಳನ್ನು ಕೊಟ್ಟಿದ್ದರು. ಅವುಗಳನ್ನು ಒಂದು ಮೂಲೆಯಲ್ಲಿ ಇಟ್ಟಾಕಿ ಮುಟ್ಟಲೇ ಇಲ್ಲ. ಅದನ್ನು ನೋಡಿದ ಕೂಡಲೇ ಮಗಳು

ಮೇಘನಾ : ಮಮ್ಮಿ ಆ ಪುಸ್ತಕ ಓದು, ಅವುಟ್ರನ ಸುಮ್ನೆ ತಂದಿಟ್ಟುಕೊಂಡಿ ನೋಡು.

೯೪. ತಾಳಿ ತೋರಿಸ್ತಿನಿ

ನನ್ನ ಹೆಂಡತಿ ಮದುವೆಯ ಹೊಸತರಲ್ಲಿ ಎಲ್ಲಾ ರೀತಿಯಿಂದಲೂ ಬಹಳ ಚಿಕ್ಕವಳಂತೆ ಕಾಣುತ್ತಿದ್ದಳು. ಚೂಡಿದಾರ ಡ್ರೆಸ್ ಹಾಕಿಕೊಂಡರೆ ಕಾಲೇಜ್ ಹುಡುಗಿಯಂತೆ ಕಾಣುತ್ತಿದ್ದಳು. ನಾನು ಆಕೆಯನ್ನು ಎಲ್ಲಿಗಾದ್ರು ಗಾಡಿ ಮ್ಯಾಲೆ ಕುಂದ್ರಿಸಿಕೊಂಡು ಹೋಗಬೇಕಾದಾಗ ನನಗೆ ಅನುಮಾನ. ಜನ ಏನು ಅನ್ಕಂತಾರ ಅಂತ. ಅದಕ್ಕೆ ಹೆಂಡ್ತಿಗೆ

ನಾನು : ಅಲ್ಲೊ ಯಾರಾದ್ರೂ ನೋಡಿದ್ರೆ ಜನ ಸಾರ್ ಕಾಲೇಜ್ ಹುಡುಗೀರನ್ನ ಗಾಡಿ ಮ್ಯಾಲೆ ಕುಂದ್ರಿಸ್ಕಂಡು ಹೊಂಟಾರ ಅಂದ್ರೆ ಹೆಂಗೆ ?

ಹೆಂಡ್ತಿ : ಅಂಗ ಯಾರಾದ್ರೂ ಅನುಮಾನದಿಂದ ನೋಡಿದ್ರೆ ಅವರಿಗೆ ನಾನು ಇವರ ಹೆಂಡ್ತಿ ಅಂತ ತಿಳಿಯುವಂಗ ಅವರಿಗೆ ತಾಳಿ ತೋರಿಸ್ತಿನಿ ಸುಮ್ನಿರು.

೯೫. ಎಂಟು ವರ್ಷ ಹಿಂದಕ

ಹೆಂಡ್ತಿ : ಇವತ್ತು ಟಿ.ವಿ.ಯಲ್ಲಿ ಒಂದು ಹಾಸ್ಯ ಕಾರ್ಯಕ್ರಮ ನೋಡಿದೆ.

ನಾನು : ಯಾವ ವಿಷಯದ ಬಗ್ಗೆ ?

ಹೆಂಡ್ತಿ : ಮದುವೆ ಬಗ್ಗೆ

ನಾನು : ಅದರಲ್ಲಿ ಏನಿತ್ತು ?

ಹೆಂಡ್ತಿ : ಮದುವೆ ಸಿಡಿನಾ ಉಲ್ಟಾ ನೋಡಬೇಕೆಂತೆ. ಕಟ್ಟಿದ ತಾಳಿ ಬಿಚ್ಚತಾರಂತ, ಆಕಿ ಮನಿಗೆ ಆಕಿ ಹೋಗ್ತಾಳ ಇತನ ಮನಿಗೆ ಇತ ಹೋಗ್ತಾನಂತ ಅಂದ್ರು.

ನಾನು : ಅದಕ್ಕೆನೀಗ ?

ಹೆಂಡ್ತಿ : ಅದಕ್ಕೆ ನಾವು ಎಂಟು ವರ್ಷ ಹಿಂದೆ ಹೋಗಿ ಬಿಟ್ರೆ ನಮ್ಮ ಮನಿಗೆ ನಾನು ಹೋಗಿ ಬಿಡ್ತಿನಿ ನೋಡು

ನಾನು : ಎಂಟು ವರ್ಷಕ ಹಿಂದಕ ಯಾಕೆ ? ಇಗ ನಡಿ ನಿಮ್ಮನಿಗೆ, ನಿನ್ನ ಬ್ಯಾಡ ಅನ್ನೋರು ಯಾರು

೯೬. ಹಳಸಿದ್ದು ಉಂಡಿದ್ದು ಮರ್ತುಬಿಟ್ಯಾ ?

ನಮ್ಮ ಕುಟುಂಬ ಮೊದಲು ಬಹಳ ಬಡತನವನ್ನು ಅನುಭವಿಸಿದೆ. ನಮಗೆ ಒಂದೊಪ್ಪತ್ತು ಊಟಕ್ಕೂ ಬಹಳ ಕಷ್ಟವನ್ನು ಎದುರಿಸಬೇಕಾಗಿತ್ತು. ನಮ್ಮ ತಂದೆ-ತಾಯಿ ಗೌಡರ ಮನೆಯಲ್ಲಿ ಹೊಟ್ಟೆ ಹೊರೆಯಲು ಕಷ್ಟಪಟ್ಟು ದುಡಿತಾ ಇದ್ರು. ನಮ್ಮ ತಂದೆ ಗೌಡರ ಹೊಲಕ್ಕೆ ಹೋಗಿ ದಿನಂಪೂರ್ತಿ ಅಲ್ಲೆ ಕೆಲಸ ಮಾಡುತ್ತಿದ್ದರು. ನಮ್ಮ ತಾಯಿ ದಿನಾ ಬೆಳಗ್ಗೆ ಗೌಡರ ಮನೆಯಲ್ಲಿ ದನಗಳ ಸೆಗಣಿ ಕಸ ಬಳಿದು ಬರುತಿದ್ಲು. ವಾಪಾಸ್ ಮನೆಗೆ ಬರುವಾಗ ಗೌಡರು ರಾತ್ರಿ ಉಳಿದ-ಹಳಸಿದ ಅನ್ನ, ಸಾರು, ರೊಟ್ಟಿ, ಪಲ್ಲೆ ಇತ್ಯಾದಿಗಳನ್ನು ನೀಡುತ್ತಿದ್ದರು. ಅದನ್ನೇ ನಾವು ಉಂಡು ಬದುಕಿ ವಿದ್ಯಾಭ್ಯಾಸ

ಮಾಡಿದವರು. ಇವತ್ತು ನನ್ನ ತಾಯಿ ಮತ್ತು ನಾನು ಇಬ್ಬರೂ ಸರಕಾರಿ ನೌಕರರು. ಇಬ್ಬರಿಗೂ ಉತ್ತಮ ಸಂಬಳವಿದೆ! ಅದು ಬೇರೆ ಸಂಗತಿ. ನನ್ನ ಹೆಂಡತಿ ಯಾವಾಗಾದ್ರೂ ಅಡುಗೆ ಸರಿಯಾಗಿ ಮಾಡದಿದ್ದಾಗ ನಾನು ಬಯ್ಯುತ್ತಿದ್ದೆ.

ನಾನು : ನಿಂಗೆ ಅಡುಗೆ ಸರಿಯಾಗಿ ಮಾಡಾಕ ಬರಲ್ಲಾ ಯಂಗ ಮಾಡಿದ್ದಿ ನೋಡು ಇದ್ನ ಯಂಗ ಉಣ್ಣಬೇಕು ?

ಹೆಂಡ್ತಿ : ಅಯ್ಯಾ ಭಾರೀ ದಿಮಾಕು ಬಿಡಪ್ಪ, ಹಿಂದಕ ಗೌಡ್ರ ಮನ್ಯಾಗ ಹಳಸಿದ್ದು ನೀಡಿಸ್ಕಂಡು ಬಂದು ಉಂಡಿದ್ಯಲ್ಲ ಅದನ್ನ ಮರ್ತು ಬಿಟ್ಯಾ? ಅದ್ರಿಗಿಂತ ಇದೇನೂ ಕೆಟ್ಟದಿಲ್ಲ ಬಿಡು.

೯೭. ನನಗೆ ಇನ್ನೊಬ್ಬಾಕಿನ ಹೆಂಡ್ತಿ ಕೆಲಸಕ್ಕೆ ಇಡು

ನನ್ನ ಹೆಂಡತಿ ಮೊದಮೊದಲು ಮನೆಯ ಎಲ್ಲಾ ಕೆಲಸ ಕಾರ್ಯಗಳನ್ನು ತಾನೇ ಮಾಡುತ್ತಿದ್ದಳು. ಮಕ್ಕಳ ಮತ್ತು ಮನೆಯ ಜವಾಬ್ದಾರಿ ಕೆಲಸಗಳು ಹೆಚ್ಚಾದಂತೆ ಕೆಲಸಗಾರರನ್ನು ನೇಮಿಸುವುದಕ್ಕೆ ಪ್ರಾರಂಭ ಮಾಡಿದಳು. ಮೊದ್ಲು ಬಟ್ಟೆ ಮಾತ್ರ ತೊಳೆಯುವುದಕ್ಕೆ ಒಬ್ಬಾಕಿನ ಇಟ್ಟುಕೊಂಡಳು. ಆ ಮೇಲೆ ಮನೆ ತೊಳೆಯುವುದಕ್ಕೆ ಮತ್ತೊಬ್ಬಾಕಿನ ಇಟ್ಟುಕೊಂಡ್ಳು ಅದಕ್ಕೆ

ನಾನು : ಮತ್ತೆ ಮುಂದಿನ ಪ್ಲಾನ್ ಏನು ?

ಹೆಂಡ್ತಿ : ಮುಸ್ರಿ ತೊಳ್ಯಾಕ ಒಬ್ರನ ನೋಡಾಕ ಹತ್ತಿನಿ

ನಾನು : ಮತ್ತೆ ಅಡಿಗೆ ಮಾಡ್ಯಾಕ

ಹೆಂಡ್ತಿ : ಅದುನೂ ಯೋಚನೆಯಲ್ಲಿ ಇದೆ

ನಾನು : ಆಯ್ತಲ್ಲ ಎಲ್ಲಾ ಮುಗಿತು ಇಷ್ಟೆಲ್ಲಾ ಮನೆ ಜವಾಬ್ದಾರಿ ಬೇರೆಯವರಿಗೆ ಕೊಟ್ಟು ಮ್ಯಾಲೆ ನನಗೆ ಇನ್ನೊಬ್ಬಕಿನ ಹೆಂಡ್ತಿ ಅಂತ ಕೆಲಸಕ ಇಟ್ಟು ನೀನು ದೇಶಾಂತರ ಹೋಗಿ ಬಿಡು.

೯೮. ಕುಂತು ಕುಂತು ಬ್ಯಾಸರ ಆಗ್ಯೈತಿ

ನನ್ನ ಹೆಂಡತಿ ಮನೆಯಲ್ಲಿ ಆರಾಮಾಗಿ ಇದ್ದಾಕಿ. ಮನೆಯ ಕೆಲಸಗಳಿಗೆ ಆಳುಗಳನ್ನು ನೇಮಿಸಿಕೊಂಡು ಅಡುಗೆ ಕೆಲಸ ಮತ್ತು ಮಕ್ಕಳ ಕೆಲಸ ಕಾರ್ಯಗಳನ್ನು ನೋಡಿಕೊಂಡು ಹೋಗುತ್ತಿದ್ದಳು. ಒಂದು ಸಲ ಯಾವುದೋ ಕಾರ್ಯಕ್ಕೆ ಕಾರಿನಲ್ಲಿ ಊರಿಗೆ ಹೋಗಿ ಮತ್ತೆ ಅವತ್ತೆ ವಾಪಾಸ ಬರಬೇಕಿತ್ತು. ಆದ್ರೆ ಆಕಿ ಒಂದು ಬ್ಯಾಗ ರೆಡಿ ಮಾಡಿ, ಅದ್ರಲ್ಲಿ ತನ್ನ ಮತ್ತು ಮಕ್ಕಳ ಬಟ್ಟೆ ಇಡ್ತಾ ಇದ್ಲು. ಅದಕ್ಕೆ

ನಾನು: ಅಲ್ಲೊ ಬಟ್ಟೆ ಯಾಕ ಇಟ್ಟಗಳ್ಳಕ ಅತ್ತಿದ್ದಿ ? ಹೋಗಿ ವಾಪಾಸ್ ಬರ್ತಿವಲ್ಲ ?

ಹೆಂಡ್ತಿ: ಇಲ್ಲ ನಾನು ಅಲ್ಲೆ ಒಂದೆರಡು ದಿನ ಇರಬೇಕಂತ ಮಾಡಿನಿ ಇಲ್ಲಿ ಬ್ಯಾಸರ ಆಗ್ಯೈತಿ

ನಾನು: ಹೌದೌದು ಒಂದೆರಡು ದಿನ ಏನು, ಒಂದೆರಡು ತಿಂಗಳ ಇರು ಯಾರ ಬ್ಯಾಡ ಅಂತರ. ಯಾಕಂದ್ರೆ ಪಾಪ ದುಡಿದು ದುಡಿದು ದಣಿದಿದ್ಯಲ್ಲ. ಅದ್ಕೆ ಸ್ವಲ್ಪ ರೆಸ್ಟ್ ತಗ.

ಹೆಂಡ್ತಿ: ಬರೆ ದುಡಿದ್ರಷ್ಟೆ ಬ್ಯಾಸರ ಅಲ್ಲ ಮನ್ಯಾಗ ಕಾಲಿ ಕುಂತ್ರೂನೂ ಬ್ಯಾಸರ ಆಗ್ತದ ತಿಳ್ಕ.

೯೯. ನಮಪ್ಪ ನನ್ನನ್ನೇ ನಿನಗ ಅರ್ಪಿಸ್ಯಾನ

ನಾನು ಕೆಲ ಪುಸ್ತಕಗಳನ್ನು ಬರೆದಿದ್ದೇನೆ. ಅವುಗಳಲ್ಲಿ "ಕೊಪ್ಪಳ ಜಿಲ್ಲೆಯ ಶಾಸನಗಳು ಮತ್ತು ಸಾಂಸ್ಕೃತಿಕ ಇತಿಹಾಸ" ಎಂಬ ಕೃತಿಯನ್ನು ನನ್ನ ನೌಕರಿಗೆ ಸಹಾಯ ಮಾಡಿದವರಿಗೆ ಅರ್ಪಣೆ ಮಾಡಿದ್ದೆ. ಒಂದು ಪುಸ್ತಕವನ್ನು ಪ್ರಕಟಣೆಗಾಗಿ ಹಸ್ತಪ್ರತಿ ತಯಾರಿಸುತ್ತಿದ್ದಾಗ ಬಂದ ನನ್ನ ಹೆಂಡತಿ

ಹೆಂಡ್ತಿ : ಈ ಪುಸ್ತಕನ ನಮಪ್ಪಗ ಅರ್ಪಿಸು

ನಾನು : ನಿಮಪ್ಪ ನನಗೆ ಏನು ಕೊಟ್ಟಾನ ಅಂತ ಅರ್ಪಿಸಲಿ ?

ಹೆಂಡತಿ : ನನ್ನನೆ ನಿಂಗೆ ಅರ್ಪಿಸ್ಯಾನ ಇನ್ನೇನು ಕೊಡಬೇಕಿತ್ತು ? ನನ್ನ ಕೊಟ್ಟಿದ್ದೆ ದೊಡ್ಡದು ಇನ್ನೇನು ಕೊಡಬೇಕಿತ್ತು ?

೧೦೦. ಬಸ್ಸಿನಾಗಾನಾ ! ?

ನಾವು ಚಿಕ್ಕವರಿದ್ದಾಗ ಬಹಳ ಬಡವರು. ನಮಗೆ ಬಸ್ಸಿನಲ್ಲಿ ದುಡ್ಡಕೊಟ್ಟು ಹೋಗಲೂ ಕಷ್ಟಕರವಾಗಿತ್ತು. ನಾನು ಶಾಲೆ ಓದುವಾಗ ವಿದ್ಯಾರ್ಥಿ ರಿಯಾಯತಿ ಬಸ್ ಇದ್ದಿದ್ದರಿಂದಲೇ ಓದಲು ಅನುಕೂಲವಾಗಿತ್ತು. ನನಗೆ ಮತ್ತು ನಮ್ಮ ತಾಯಿಗೆ ನೌಕರಿ ಸಿಕ್ಕಮೇಲೆಯೇ ನಮಗೆ ಬಹಳ ಅನುಕೂಲ, ಸುಖ, ನೆಮ್ಮದಿ ದೊರೆಕಿದ್ದು. ನಾನು ಒಬ್ಬನೆ ಯಾವುದಾದ್ರೂ ಊರಿಗೆ ಹೋಗಬೇಕಿದ್ರೆ ಬಸ್ಸಿನಲ್ಲಿ ಹೋಗುತ್ತಿದ್ದೆ. ಆದರೆ ಮಕ್ಕಳು ಹೆಂಡತಿ ಬಸ್ಸಿನಲ್ಲಿ ಹತ್ತುವುದು ಇಳಿಯುವು ಮತ್ತು ನಮಗೆ ಬೇಕಾದ ಕಡೆ ಹೋಗುವುದಕ್ಕೆ ಅನುಕೂಲವಾಗಲೆಂದು ಎಲ್ಲರೂ ಎಲ್ಲಿಗಾದ್ರು ಹೋಗ ಬೇಕಾಗಿತ್ತೆಂದರೆ ಒಂದು ಬಾಡಿಗೆ ಕಾರು ಮಾಡಿಕೊಂಡು ಹೋಗುತ್ತಿದ್ದೆವು. ಹೀಗೆ ಹೆಚ್ಚಿನ ಸಲ ಕಾರಿನಲ್ಲಿ ಹೋಗಿ ಬಂದಿದ್ದೆವು. ಒಂದು ಸಲ ಊರಿಗೆ ಹೋಗಬೇಕಾಗಿತ್ತು. ಹೆಂಡತಿ ಮಕ್ಕಳಿಗೆ ಗೋಳಾಡಿಸೋಣ ಅಂತ ನಾನು ಸುಮ್ಮನೆ ಸುಳ್ಳು ಹೇಳಿದೆ.

ನಾನು : ನಾಳೆ ಊರಿಗೆ ಬಸ್ಸಿನಲ್ಲಿ ಹೋಗಬೇಕು

ಮೇಘನಾ : ಏನಪ್ಪ ಬಸ್ಸಿನಾಗನಾ...!

೧೦೧. ನಾನು ರಿಟೈರ್ ಆದ ಮೇಲೆ ಇಲ್ಲ ಸತ್ತ ಮ್ಯಾಲೆ

ನಾವು ಹಿಂದೆ ಅಲ್ಪ ಸ್ವಲ್ಪ ಹಣದಲ್ಲಿಯೂ ಬದುಕಿದವರು. ಮತ್ತೆ ಇಂದು ಎಷ್ಟು ಸಂಬಳ ಬಂದರೂ ನೀರಿನಂತೆ ಖರ್ಚು ಆಗುತ್ತಿತ್ತು. ಅದಕ್ಕೆ ನಾವು ಬದುಕುವ ಜೀವನ ಶೈಲಿ, ದುಬಾರಿ ಕಾಲ ಅದು ಬೇರೆ ಸಂಗತಿ. ಉಳಿತಾಯದ ಅಲೋಚನೆಯಂತೂ ನಾನು ಅಷ್ಟಾಗಿ

ಮಾಡಿದವನಲ್ಲ. ಯಾಕೆಂದರೆ, ತಿಂಗಳ ಕೊನೆಗೆ ಸಂಬಳ ಬಂದೇ ಬರುತ್ತದೆಯಲ್ಲ ಅದಕ್ಕೆ ಇರಬಹುದೇನೂ. ಅದಕ್ಕೆ ನಾನು ಮುಂದಿನ ಮಕ್ಕಳ ನಮ್ಮ ಭವಿಷ್ಯಕ್ಕಾಗಿ ಏನಾದ್ರೂ ಅಲ್ಪ-ಸ್ವಲ್ಪ ಉಳಿತಾಯ ಮಾಡಬೇಕೆಂದು ಬಹಳಷ್ಟು ಎಲ್.ಐ.ಸಿಯ ವಿಮೆಗಳನ್ನು ಮಾಡಿಸಲು ಪ್ರಾರಂಭಿಸಿದೆ. ಇದರ ಏಜೆಂಟರ್ ನನ್ನ ಗೆಳೆಯ ಇರುವುದರಿಂದ ವರ್ಷಕ್ಕೆ ಒಂದು ಇಲ್ಲವೆ ಎರಡು ವಿಮೆ ಮಾಡಿಸಲು ಪ್ರಾರಂಭಿಸಿದೆ. ಎಷ್ಟೋ ಸಲ ನನ್ನ ಗೆಳೆಯ ನನಗೆ ಹೇಳದೇನೇ ಪಾಲಸಿ ಮಾಡ್ಸಿ; ಒಂದು ಪಾಲಸಿ ಚೆನ್ನಾಗಿತ್ತು ಅದಕ್ಕೆ ಮಾಡಿಸಿನಿ. ಮುಂದಿನ ತಿಂಗಳಿಂದ ಡಿಡೆಕ್ಷನ್ ಮಾಡು ಎಂದು ಹೇಳುತ್ತಿದ್ದ. ನಾನು ಉಳಿತಾಯದ ಸಂಗತಿ ಎಂದು ಸುಮ್ಮನಾಗುತ್ತಿದ್ದೆ. ಒಂದು ಸಲ ಹೊಸ ಎಲ್.ಐ.ಸಿಯ ಬಾಂಡ್ ತೆಗೆದುಕೊಂಡು ಬಂದೆ. ಅದನ್ನು ನೋಡಿದ ನನ್ನ

ಹೆಂಡತಿ : ಹೊಸ ಎಲ್.ಐ.ಸಿ.ನಾ ?

ನಾನು : ಹೌದು ?

ಹೆಂಡತಿ : ಯಾರ ಹೆಸರಿಗೆ ಮಾಡಿಸಿದ್ದಿ ?

ನಾನು : ನನ್ನ ಹೆಸರಿಗೆ ಮಾಡಿಸಿನಿ

ಹೆಂಡತಿ : ಮತ್ತೆ ದುಡ್ಡು ಯಾವಾಗ ಬರ್ತಾದಾ ?

ನಾನು : ನಾನು ರಿಟೈರ್ ಆದಮ್ಯಾಲೆ ಇಲ್ಲ ಸತ್ತ ಮ್ಯಾಲ್ ಬರ್ತಾವ.

೧೦೨. ಹೆಂಡ್ತಿ ಬಂದ್ಲು, ಮಕ್ಕಳು ಬಂದ್ರು, ರೋಗಾನೂ ಬಂದ್ವು

ಒಬ್ಬ ವೈದ್ಯರ ಹತ್ತಿರ ಹಿಂದೆ ಮದುವೆ ಆಗುವುದಕ್ಕಿಂತ ಮುಂಚೆ ತೋರಿಸುತ್ತಿದ್ದೆ. ಮದುವೆಯಾದ ಬಳಿಕ ಬಹಳ ದಿನಗಳವರೆಗೆ ಅವರ ಹತ್ತಿರ ಹೋಗುವ ಪ್ರಸಂಗ ಬಂದಿರಲಿಲ್ಲ. ಒಂದು ಸಲ ಮಕ್ಕಳಿಗೆ ಆರಾಮ ಇಲ್ಲದ ಕಾರಣ ತೋರಿಸುವುದಕ್ಕಾಗಿ ಹೆಂಡತಿ-ಮಕ್ಕಳ ಕುಟುಂಬ ಸಮೇತರಾಗಿ ಹೋಗಿದ್ದೆವು. ನಮ್ಮನ್ನ ಕಂಡ

ವೈದ್ಯರು : ನೀವು ಮೊದ್ಲು ನಮ್ಮ ಹತ್ತಿರ ತೋರಿಸ್ತ ಇದ್ರ್ಯಲ್ಲ ? ಆವಾಗ ನಿಮಗೆ ಮದುವೆ ಆಗಿರ್ಲಿಲ್ಲಲ್ವಾ ?

ನಾನು : ಹೌದು ಸಾರ್ ಆವಾಗ ಮದುವೆ ಆಗಿರ್ಲಿಲ್ಲ, ಹೆಂಡ್ತಿ ಇರ್ಲಿಲ್ಲ ಮಕ್ಳು ಇರ್ಲಿಲ್ಲ. ಈಗ ಹೆಂಡ್ತಿ ಬಂದ್ಳು, ಮಕ್ಳು ಬಂದ್ರು, ಅದರ ಜೊತೆಗೆ ರೋಗಾನು ಬಂದ್ವು.

೧೦೩. ನನ್ನ ಸೀರೆ ಇರದಿದ್ರೆ ನಿನ್ನ ಪ್ಯಾಂಟ್ ಎಲ್ಲಿರ್ತಿತ್ತು ?

ಒಂದು ಸಲ ನನ್ನ ಹೆಂಡ್ತಿ ತನ್ನ ಸೀರೆ ಹಳತು ಆಗಿತ್ತು. ಅದಕ್ಕೆ ಆಕಿ ಸೀರೇನ ಅಗಸರ ಹತ್ರ ಡ್ರೈವಾಶ್ ಮಾಡಿಸಿಕೊಂಡು ಬಾ ಅಂತಾ ಬಹಳ ಸಲ ಹೇಳ್ತಿದ್ಳು. ನಾನು ಆಗ ಈಗ ಅಂತ ಅದನ್ನೆ ಮುಂದೂಡುತ್ತಾ ಬಂದಿದ್ದೆ. ಒಂದು ಸಲ ನನ್ನ ಪ್ಯಾಂಟ್ ಡ್ರೈ ವಾಶ್ ಮಾಡಬೇಕಿತ್ತು. ಅದಕ ಅದನ್ನು ತೆಗೆದುಕೊಂಡು ಹೋಗಲು ರೆಡಿಯಾದೆ. ಅದನ್ನ ನೋಡಿದ ನನ್ನ ಹೆಂಡತಿ

ಹೆಂಡ್ತಿ : ನನ್ನ ಸೀರೆನೂ ತೆಗೆದುಕೊಂಡು ಹೋಗಿ ಡ್ರೈವಾಶ್ ಮಾಡಿಸಿಕೊಂಡು ಬಾ

ನಾನು : ಏ...! ಆಗಲ್ಲ ಬಿಡು ಸೀರೆ ಬೇಡ, ಅದೇನು ಮುಖ್ಯ ಅಲ್ಲ.

ಹೆಂಡ್ತಿ : ನನ್ನ ಸೀರೆ ಇದ್ರೆನೆ ನಿನ್ನ ಪ್ಯಾಂಟ್ ಇರೋದು. ಒಂದು ವೇಳೆ ನನ್ನ ಸೀರೆ ಇರದಿದ್ರೆ ನಿನ ಪ್ಯಾಂಟ್ ಎಲ್ಲಿರ್ತಿತ್ತು ?

೧೦೪. ನನ್ನ ಹಿಡಕಂಡು ಹೋದ್ರೆ ?

ನನಗೆ ಹೆಂಡತಿ ಮಕ್ಕಳ ಕಿರಿಕಿರಿ ಜಾಸ್ತಿ ಆಗಿ ಸಾಕು ಸಾಕಾಗಿತ್ತು. ಅದು ಬೇಕು ಇದು ಬೇಕು ಅಂತ ತಲೆ ತಿಂತಾ ಇದ್ದರು. ಸಂಗೀತ ಶಾಲೆಗೆ, ಟ್ಯೂಷನ್‌ಗೆ, ಶಾಲೆಗೆ ಹೋಗುವಾಗ ಬಸ್ಸಿನ ತನಕ ಬಿಟ್ಟು ಬಂದು ಮತ್ತೆ ಮುಗಿದ ಮೇಲೆ ಕರೆದುಕೊಂಡು ಬರುತ್ತಿದ್ದೆವು. ಒಂದು ದಿನ ಕೆಲಸದ ಒತ್ತಡ ಇರುವುದರಿಂದ ಟ್ಯೂಷನ್‌ಗೆ ಕಳುಹಿಸಿ ಬರಲು ಆಗಲಿಲ್ಲ. ಅದಕ್ಕೆ ಅವರ

ಅಮ್ಮ : ಮೇಘನಾ ನಮಗೆ ಕೆಲ್ಸ ಜಾಸ್ತಿ ಐದ್ಯಾವ ಬಿಟ್ಟು ಬರಾಕ ಟೈಮ್ ಇಲ್ಲ ನೀನೊಬ್ಬಾಕಿ ಹೋಗು.

ಮೇಘನಾ: ಇಲ್ಲಮ್ಮ ಯಾರೋ ಕಳ್ರು ಬಂದಾರಂತ ನನ್ನ ಹಿಡ್ಕಂಡು ಹೋದ್ರೆ ?

ನಾನು : ಮಗಳೆ ಬೆಸ್ಟ್ ಆಯ್ತು. ಒಂದು ಕಿರಿಕಿರಿ ತಪ್ಪಿತು ಅಂತ ಖುಷಿಪಡ್ತಿನಿ.

೧೦೫. ಮಕ್ಕಳನ್ನು ಹಿಡ್ಕಂಡು ಹೋಗು ಅಂತ ಯಾರಿಗಾದ್ರೂ ಫೋನ್ ಮಾಡಬೇಕು

ಮನೆಯಲ್ಲಿ ಮಕ್ಕಳ ಕಿರಿಕಿರಿ ಇದ್ದದ್ದೆ. ಅದೂ ಇದೂ ಅಂತಾ ನನ್ನ ಜೀವ ಹಿಂಡ್ತಾ ಇದ್ರು. ಅವರ ಕಿರಿಕಿರಿ ಸಾಕು ಸಾಕಾಗಿ ಹೋಗಿತ್ತು. ಒಂದು ಸಲ ನಮ್ಮ ಮನೆ ಹತ್ತಿರ ಕೋತಿಗಳ ಕಾಟ ಜಾಸ್ತಿ ಆಗಿತ್ತು. ಮನೆಯೊಳಗೂ ಬಂದು ಇದ್ದ ಎಲ್ಲಾ ಸಾಮಾನುಗಳನ್ನು ತಿಂದು ಹಾಕುತ್ತಿದ್ದವು. ಅವುಗಳ ತೊಂದರೆ ಹೆಚ್ಚಾಗಿದ್ದರಿಂದ ನನ್ನ

ಹೆಂಡ್ತಿ : ಯಾರಿಗಾದ್ರೂ ಫೋನ್ ಮಾಡಿದರೆ ಅವುಟ್ರನ್ ಹಿಡ್ಕಂಡು ಹೋಗ್ತಾರಂತಲ್ಲಾ ?

ನಾನು : ಈ ಮಕ್ಕಳ ಮುಂದೆ ಕೋತಿಗಳ ಕಿರಿಕಿರಿ ಏನ್ ದೊಡ್ಡದಲ್ಲಾ ಬಿಡು, ಮೊದ್ಲು ಈ ಮಕ್ಕಳನ್ ಹಿಡ್ಕಂಡು ಹೋಗು ಅಂತಾ ಯಾರಿಗಾದ್ರೂ ಫೋನ್ ಮಾಡಬೇಕು.

೧೦೬. ಮನ್ಯಾಗ ಗಾಳಿನೋ ದೆವ್ವನೋ ಇರ್ಬೇಕು

ನನ್ನ ಹೆಂಡತಿ ಯಾವಾಗ್ಲೂ ಯಾವ್ಯಾವ ಸಾಮಾನು ಎಲ್ಲೆಲ್ಲೊ ಇಟ್ಟು ಬಿಡ್ತಿದ್ಲು. ಮಕ್ಕಳು ಸಹ ಅದೇ ರೀತಿಯಲ್ಲಿ ದಿನನಿತ್ಯ ಅಗತ್ಯವಾದ ಸಾಮಾನುಗಳನ್ನು ಮಿಸಪ್ಲೇಸ್ ಮಾಡಿ ಬಿಡ್ತಿದ್ರು. ಅದಕ್ಕೆ ಕೆಲವೊಂದು ಸಂದರ್ಭದಲ್ಲಿ ಬೇಕಾದ ಸಾಮಾನು ಹುಡುಕಾಡುವುದೇ ಒಂದು ದೊಡ್ಡ ತಲೆ ನೋವಾಗಿ ಪರಿಣಮಿಸುತ್ತಿತ್ತು. ಈ ತಪ್ಪನ್ನ ನನ್ನ ಹೆಂಡತಿ ತನ್ನ ಮೇಲೆ ಹಾಕಿಕೊಳ್ಳುತ್ತಿರಲಿಲ್ಲ. ಇಂತಹ ಸಂದರ್ಭದಲ್ಲಿ.

ನಾನು	:	ಯಾವ ಸಾಮಾನು ಎಲ್ಲಿರಬೇಕು ಅಲ್ಲಿರಲ್ಲ ನೋಡು, ನನ್ನ ಹೆಂಡ್ತಿ ಇನ್ನೆಲ್ಲೋ ಇಡ್ತಾಳ.
ಹೆಂಡ್ತಿ	:	ಇಲ್ಲೊ ಈ ಮನ್ಯಾಗ ಗಾಳಿನೋ, ದೆವ್ವನೋ ಇರ್ಬೇಕು ನೋಡು ನಾನು ಒಂದು ಕಡೆ ಇಟ್ಟ ಸಾಮಾನು ಎಲ್ಲಿಗೋ ಹೋಗ್ತಾವ ನೋಡು, ಸ್ವಲ್ಪ ಶಾಂತಿನಾರ ಮಾಡ್ಸಬೇಕು.

೧೦೭. ನಿಮ್ಮಪ್ಪನ ಎಗ್ರಸು

ಎಲ್ರೂ ಕುಟುಂಬ ಸಮೇತರಾಗಿ ಎಲ್ಲಿಗಾದ್ರು ಹೋಗಬೇಕಾದಾಗ ಗಾಡಿ ಮೇಲೆ ಹೋಗುತ್ತಿದ್ದೆವು. ಹೋಗುವಾಗ ಮನೆಯಲ್ಲಿ ಯಾವುದಾದ್ರೂ ಅಧಿಕ ಪ್ರಸಂಗಗಳು ನಡೆದಾಗ ದಾರಿಯಲ್ಲಿ ಗಾಡಿ ಮ್ಯಾಲೆ ಕುಳಿತು ಇಬ್ರೂ ಒಬ್ರಿಗೊಬ್ರು ಬೈದಾಡುತ್ತಾ ಹೋಗುತ್ತಿರುತ್ತಿದ್ದೆವು. ಅದು ಮಗಳು ಮೇಘನಾಗೆ ಬೇಜಾರು ಆಗುತ್ತಿತ್ತು. ಅದಕ್ಕೆ

ಮೇಘನಾ	:	ಯಮ್ಮ ನೀವು ಸುಮ್ನೆ ಕುಂದ್ರಿತಿರಾ ಇಲ್ವಾ ? ಇಲ್ಲಾ ನಾನೇ ಗಾಡಿ ಮೇಲಿಂದ ಎಗ್ರಲಾ ?
ನಾನು	:	ಮಗಳೆ ನೀನ್ಯಾಕ ಎಗ್ರತಿ ? ನಿಮ್ಮಮ್ಮನೆ ಎಗ್ರಸು
ಹೆಂಡ್ತಿ	:	ಮಗಳೆ ನಾನ್ಯಾಕ ಎಗ್ರಲಿ ? ನಿಮಪ್ಪನ ಎಗ್ರಸು

೧೦೮. ಅದ್ಕೆ ಇಬ್ರೂ ಸಮ ಇರ್ಬೇಕು ಅನ್ನದು

ನನ್ನ ಹೆಂಡತಿ ನನ್ನಷ್ಟು ಎತ್ತರವಿಲ್ಲ. ಇಬ್ಬರು ನಿಂತರೆ ನನ್ನ ಭುಜಕ್ಕೆ ಮಾತ್ರ ಎತ್ತರ ಇದ್ದಳು. ಸೇವಾ ಪುಸ್ತಕದಲ್ಲಿ ಅಂಟಿಸಲು ಒಂದು ಕುಟುಂಬ ಸಮೇತ ಫೋಟೋ ಬೇಕಾಗಿತ್ತು. ಅದಕ್ಕೆ ಎಲ್ಲರೂ ಕುಟುಂಬ ಸಮೇತ

ಫೋಟೋ ತೆಗೆಸಿಕೊಳ್ಳಲು ಸ್ಟುಡಿಯೋಕ್ಕೆ ಹೋಗಿದ್ದೆವು. ಅಲ್ಲಿ ಫೋಟೋ ಇಳಿಯುವುದಕ್ಕಾಗಿ ಅಪ್ಪ, ಅಮ್ಮ ಮತ್ತು ಮಕ್ಕಳು ಎಲ್ಲರೂ ಕುರ್ಚಿಯ ಮೇಲೆ ಕುಳಿತುಕೊಂಡರು. ನಾವಿಬ್ಬರು ನಿಂತುಕೊಂಡೆವು. ಅಲ್ಲಿ ಇಬ್ಬರ ಅಳತೆ ವ್ಯತ್ಯಾಸವಾಯಿತು. ಫೋಟೋಗ್ರಾಫರ್ ಏನೆಲ್ಲಾ ಅಡ್ಜೆಸ್ಟ್ ಮಾಡಲಿಕ್ಕೆ ಪ್ರಯತ್ನ ಪಟ್ಟರೂ ಆಗಲಿಲ್ಲ. ಕೊನೆಗೆ ಹೊರಗೆ ಹೋಗಿ ಒಂದು ದೊಡ್ಡ ಕಲ್ಲು ತಂದು.

ಫೋಟೋಗ್ರಾಫರ್ : ಅಕ್ಕೋರೆ ಈ ಕಲ್ಲಿನ ಮೇಲೆ ನಿಲ್ರಿ ಅಂಗಾದ್ರೆ ಸಮ ಬರ್ತಾದ.

ನಾನು : ಅದ್ಕೆ ಕಣೆ ಇಬ್ರೂ ಸಮ ಇರ್ಬೇಕು ಅನ್ನದು ಇದ್ಕೆ.

೧೮೯. ಹೊಟ್ಟೆ ತುಂಬಾ ಉಂಡ ಮ್ಯಾಲೆ ಕೇಕ್ ಹ್ಯಾಂಗ ತಿಂತಿರಿ ?

ನಾನು ಬೇಕರಿಯಿಂದ ಕೆಲವೊಂದು ಸಲ ಮಕ್ಕಳಿಗಾಗಿ ತಿನ್ನುವುದಕ್ಕೆ ಕೇಕ್, ಚಾಕಲೇಟ್, ಬಿಸ್ಕೆಟ್, ಬ್ರೆಡ್ ಇತ್ಯಾದಿಗಳನ್ನು ತರುತ್ತಿದ್ದೆ. ತಂದ ಕೂಡಲೇ ಅವುಗಳನ್ನೇ ತಿಂದು ಊಟ ಮಾಡದೇ ಮಲಗಿಕೊಂಡು ಬಿಡುತ್ತಿದ್ದರು. ಕೆಲವು ಸಲ ಹಣ್ಣು-ಹಂಪಲಗಳನ್ನೂ ತರುತ್ತಿದ್ದೆ. ಆದರೆ ಈ ಹಣ್ಣುಗಳನ್ನು ಜಾಸ್ತಿ ತಿನ್ನುತ್ತಿರಲಿಲ್ಲ. ಬೇಕರಿ ಐಟಂಗಳನ್ನು ಮಾತ್ರ ಹೆಚ್ಚಾಗಿ ಇಷ್ಟಪಡುತ್ತಿದ್ದರು. ನಾನು ಹೊರಗಡೆಯಿಂದ ಬಂದ ಕೂಡಲೇ ಓಡೋಡಿ ಬಂದು ಕೈಯಲ್ಲಿನ ಕ್ಯಾರಿ ಬ್ಯಾಗ್ ಚೆಕ್ ಮಾಡುತ್ತಿದ್ದರು. ಒಂದು ಸಲ ಬೇಕರಿಯಿಂದ ತಿನ್ನುವುದಕ್ಕೆ ಬಿಸ್ಕಟ್, ಕೇಕ್ ತಂದಿದ್ದೆ. ಮಕ್ಕಳು ಓಡಿ ಬಂದ್ರು.

ನಾನು : ಇವತ್ತು ಮೊದಲು ಊಟ ಮಾಡ್ರಿ ಆ ಮ್ಯಾಲೆ ಕೇಕ್ ಕೊಡ್ತೆನಿ.

ಮಕ್ಕಳು : ಊಟ ಮಾಡಿವೆಪ್ಪ.

ನಾನು : ಹೊಟ್ಟೆ ತುಂಬ ಊಟ ಮಾಡಿದವರಿಗೆ ಮಾತ್ರ ಈ ಕೇಕ್

ಮಕ್ಕಳು : ಹೊಟ್ಟೆ ತುಂಬಾ ಉಂಡಿವೆಪ್ಪ

ನಾನು : ಹೊಟ್ಟೆ ತುಂಬ ಉಂಡಮ್ಯಾಲೆ ಕೇಕ್ ಹ್ಯಾಂಗ್ ತಿಂತಿರಿ ?

೧೧೦. ಗಾಡಿನೂ ಬೀಳಬಹುದು ಆದ್ರೆ ನಿಮಮ್ಮ ಮಾತ್ರ ಬೀಳಲ್ಲ

ಇಬ್ರೂ ಗಂಡ ಹೆಂಡತಿ ಕುಳಿತಿದ್ವಿ. ಆರು ವರ್ಷದ ಮಗಳು ಮೇಘನಾ

ಮೇಘನಾ : ಅಪ್ಪ ಒಂದು ಜೋಕ್ ಹೇಳಲಾ ?

ನಾನು : ಹೇಳು

ಮೇಘನಾ : ಒಂದು ಸಲ ಅಪ್ಪ-ಅಮ್ಮ, ಮತ್ತು ಮಗಳು ಗಾಡಿ ಮ್ಯಾಲೆ ಹೋಗ್ತಾ ಇದ್ರು, ಮಗಳ ಕೈಯಲ್ಲಿ ಐಸಕ್ರೀಮ್ ಇತ್ತು. ದಾರಿಯಲ್ಲಿ ಹೋಗುವಾಗ ಕೈ ಜಾರಿ ಐಸಕ್ರೀಮ್ ಬಿತ್ತು. ಅದಕ್ಕೆ ಮಗಳು ಅಪ್ಪ ಐಸಕ್ರೀಮ್ ಬಿತ್ತು ಅಂದ್ಲು. ಅವಾಗ ಅಪ್ಪ ಮಗಳೆ ಬಿದ್ರೆ ಬೀಳಲಿ ಬಿಡು ಹೊಸ ಐಸಕ್ರೀಮ್ ಕೊಡುಸ್ತಿನಿ ಅಂದ. ಮುಂದೆ ಹೋಗುವಾಗ ಮಧ್ಯೆ ಅಮ್ಮ ಬಿದ್ಲು ಅದಕ್ಕೆ ಅಪ್ಪ ಮಗಳೆ ಅಮ್ಮ ಬಿದ್ಲು ಅಂದ, ಅವಾಗ ಮಗಳು ಬಿದ್ರೆ ಬೀಳಲಿ ಬಿಡಪ್ಪ ಹೊಸ ಅಮ್ಮನ ತರಮು ಅಂದ್ಲು. ಎಂದು ಜೋಕ್ ಹೇಳಿದಳು.

ನಾನು : ಮಗಳೇ ಆ ಜೋಕ್ ನಮಗೇನೆ ತಗಂಡ್ರೆ ಗಾಡಿ ಮ್ಯಾಲಿಂದ ಐಸ್‌ಕ್ರಿಂ ಬೀಳಬಹುದು, ನೀನು ಬೀಳಬಹುದು, ನಾನು ಬೀಳಬಹುದು ಕೊನೆಗೆ ಗಾಡಿನೂ ಬೀಳಬಹುದು; ಆದ್ರೆ ನಿಮಮ್ಮ ಮಾತ್ರ ಬೀಳಲ್ಲ ತಿಳ್ಕ. ಅಂತ ಒಳ್ಳೆಯ ಆಲೋಚನೆ ಮಾಡಬೇಡ.

೧೧೧. ಡಿಗ್ರಿ ಪಾಸ್ ಆಗೋತನ ತಡಿಬೇಕಿತ್ತು

ನನ್ನ ಹೆಂಡತಿ ನನ್ನ ಅಕ್ಕನ ಮಗಳು. ನನಗೇ ಕೊಡಬೇಕೆಂದು ಮೊದ್ಲೆ ನಿರ್ಧರಿಸಿದ್ದರು. ನಾನು ಅದಕ್ಕೆ ಯಾವುದೇ ರೀತಿಯ ವಿರೋಧ ವ್ಯಕ್ತಪಡಿಸಿರಲಿಲ್ಲ. ಆಕೆ ದ್ವಿತೀಯ ಪಿ.ಯು.ಸಿ. ಪರೀಕ್ಷೆ ಸಹ ಬರೆಯಲಿಲ್ಲ. ನಾನು ಉಪನ್ಯಾಸಕನಾಗಿ ನೌಕರಿಗೆ ಸೇರಿದ್ದೆ. ಇನ್ನು ತಡ ಮಾಡುವುದು ಬೇಡ ಎಂದು ಹಿರಿಯರು ಇಬ್ಬರಿಗೆ ಮದುವೆ ಮಾಡಿದರು. ನಾನು ಆಕೆಗೆ ಒಂದಿಷ್ಟು ಜ್ಞಾನ ಬರಲಿ ಅಂತಾ ಖಾಸಗಿಯಾಗಿ ವಿಶ್ವವಿದ್ಯಾಲಯದಲ್ಲಿ ಪದವಿ ಪ್ರವೇಶ ಕೊಡಿಸಿದ್ದೆ. ಅದೇನೋ ಪರೀಕ್ಷೆ ಗೊಂದಲವಾಗಿ ಅರ್ಧಕ್ಕೆ ನಿಂತಿತು. ಮತ್ತೊಂದು ಕಡೆ ಬೇರೆ ವಿಶ್ವವಿದ್ಯಾಲಯದಲ್ಲಿ ಪದವಿ ಪ್ರವೇಶ ಕೊಡಿಸಿದ್ದೆ. ನನ್ನ ಪಿಎಚ್.ಡಿ ಪದವಿ, ನೌಕರಿಗಳಿಗಿಂತ ಈಕೆಯ ಪದವಿಯೇ ನನಗೆ ತಲೆ ನೋವಾಗಿ ಪರಿಣಮಿಸಿತ್ತು. ಅದಕ್ಕೆ

ನಾನು : ಡಿಗ್ರಿ ಪಾಸಾದ ಹುಡಿಗಿನ ಮದುವೆ ಮಾಡ್ಕಂಡಿದ್ರೆ ಇದೆಲ್ಲಾ ತಾಪತ್ರಯ ಇರ್ತಿರ್ಲಿಲ್ಲ.

ಹೆಂಡ್ತಿ : ಅಯ್ಯಾ... ಅಷ್ಟ್ಯಾಕ ಅರ್ಜಂಟ್ ಮಾಡಿದ್ಯಪ್ಪ. ನಾನುನೂ ಬಿ.ಎ, ಎಂ.ಎ, ಪಿಎಚ್.ಡಿ ಪಾಸ್ ಆಗ್ತಿದ್ದೆ ಅಲ್ಲಿತನ ತಡಿಬೇಕಿತ್ತು.

ನಾನು : ಇದ್ನೆ ಪಾಸ್ ಆಗವಲ್ಲಿ, ಅವೆಲ್ಲಾ ಪಾಸ್ ಆಗದ್ರೊಳಗೆ ನಂಗೆ ಐವತ್ತು ವರ್ಷ ಆಗ್ತಿತ್ತು. ಆವಾಗ ಮದ್ವೆ ಆಗ್ಬೇಕಿತ್ತೇನು?

೧೧೨. ಆಕೆ ಪಲ್ಲೆ ವೇಷ್ಟು ಮಾಡಿದ್ದು ಮುಖ್ಯ ಅಲ್ಲ ಅವರಮ್ಮನ ಹಠ ಮುಖ್ಯ

ನನ್ನ ಹೆಂಡತಿಗೆ ಸ್ವಲ್ಪ ಹಠ ಜಾಸ್ತಿ. ಹೇಳಿದ ಹಾಗೆ ಕೇಳೋದು ಕಷ್ಟದ ಕೆಲಸ. ಇದು ಹೆಣ್ಣುಮಕ್ಕಳಲ್ಲಿರುವ ಗುಣ ಸ್ವಭಾವ ಎನ್ನುವ ಸಂಗತಿ

ಬೇರೆ. ಒಂದು ಸಲ ಊಟಕ್ಕೆ ರೊಟ್ಟಿ ಮತ್ತು ಎರಡು ನಮೂನೆ ಕಾಯಿಪಲ್ಲೆ ಮಾಡಿದ್ದಳು. ಅದರಲ್ಲಿ ಒಂದು ತಪ್ಪಲಪಲ್ಲೆ ಇತ್ತು. ಮಗಳು ಮೇಘನಾಳಿಗೆ ಊಟಕ್ಕೆ ಬಡಿಸಿದ್ಲು. ಆಕೆಗೆ ತಪ್ಪಲ ಪಲ್ಲೆ ಇಷ್ಟವಿರಲಿಲ್ಲ. ಆದರೂ ಎರಡು ನಮೂನೆ ಪಲ್ಲೆ ಊಟಕ್ಕೆ ಬಡಿಸಿದ್ಲು. ಮೇಘನಾ ಅದನ್ನ ತಿಂದಿರಲಿಲ್ಲ. ಅದಕ್ಕೆ ಹೆಂಡತಿಗೆ

ನಾನು : ಮೇಘನಾ ಆ ಪಲ್ಲೆ ತಿಂದಿಲ್ಲ ನೋಡು ವೇಷ್ಟು ಮಾಡ್ಯಾಳ. ನಾನು ಬೇಡಂದ್ರೂ ಎರಡು ನಮೂನೆ ಪಲ್ಲೆ ಮಾಡಿದ್ದಿ, ನಾನು ಬೇಡಾ ಅಂದ್ರೂ ಕೇಳಲ್ಲ. ನಿನ್ನ ಹಠನೇ ನಿಂಗೆ

ಹೆಂಡ್ತಿ : ಅಲ್ಲ ನೀನು ಹೇಳಬೇಕಾದದ್ದು ಏನು ಮುಖ್ಯ ವಿಷಯ ಹೇಳು

ನಾನು : ಆಕೆ ಪಲ್ಲೆ ವೇಷ್ಟು ಮಾಡಿದ್ದು ಅಲ್ಲ ಅವರಮ್ಮನ ಹಠ ಮುಖ್ಯವಾಗಿ ಹೇಳಬೇಕಾಗಿದ್ದದ್ದು.

೧೧೩. ಟಿ.ವಿ ಯಲ್ಲಿ ಮಾಡಿದ್ದು ಉಣ್ಣಂಗ ಅಗ್ಯಾದ

ಮೇಘನಾ ಊಟ ಮಾಡುವುದಕ್ಕೆ ಯಾವಾಗ್ಲೂ ಹಟ ಮಾಡುತ್ತಿದ್ದಳು. ಅವರಮ್ಮ ಎಂತಹ ರುಚಿ ರುಚಿಯಾದ ಅಡುಗೆ ಮಾಡಿದರೂ ಆಕೆಗೆ ಊಟ ಮಾಡಿಸುವದಕ್ಕೆ ನಮಗೆ ಸಾಕು ಸಾಕಾಗಿ ಹೋಗುತ್ತಿತ್ತು. ಒಂದು ಸಲ ಟಿ.ವಿ.ಯಲ್ಲಿ ಅಡುಗೆ ರುಚಿ ಕಾರ್ಯಕ್ರಮ ಇತ್ತು ಅದನ್ನು ನೋಡಿದ

ಮೇಘನಾ : ಮಮ್ಮಿ ಅಲ್ಲಿ ಟಿ.ವಿ.ಯಲ್ಲಿ ಮಾಡಿದ ಅಡುಗೆ ಉಣ್ಣಂಗ ಆಗ್ಯಾದ.

ಶಶಾಂಕ : ಇಲ್ಲಿ ಮನ್ಯಾಗ ಮಾಡಿದ ಅಡಿಗೆ ಸರಿಯಾಗಿ ಉಣ್ಣಾವಲ್ಲಿ ಟಿ.ವಿ.ಯಲ್ಲಿ ಮಾಡಿದ್ದು ಉಣ್ಣಾಂಗ ಆಗ್ಯಾದ ?

೧೧೪. ನನ್ನ ಕೈಲಿ ಪ್ರಾಣಿಗಳನ್ನು ಹೊತ್ತುಕೊಂಡು ಹೋಗಾಕ ಆಗಲ್ಲ

ನಾವು ಕೆಲವು ಸಲ ಎಲ್ರೂ ಹಾಲ್‌ನಲ್ಲಿ ಮಲಗುತ್ತಿದ್ದೆವು. ಬೆಳಗಾಗುವುದಕ್ಕೆ ಇನ್ನೂ ಸಮಯ ಇದ್ದಾಗ ನನ್ನ ಹೆಂಡತಿ ಕಸ ಬಳಿಯುವದಕ್ಕೆ, ಮನೆ ತೊಳೆಯುವದಕ್ಕೆ ಅನುಕೂಲವಾಗಲೆಂದು ಮಕ್ಕಳನ್ನು ಒಬ್ಬೊಬ್ಬರನು ಎತ್ತಿಕೊಂಡು ಹೋಗಿ ಬೆಡ್ ರೂಂನ ಮಂಚದ ಮೇಲೆ ಮಲಗಿಸಿ ಬರುತ್ತಿದ್ದಳು. ಆಗ ಆಕಿ ನನಗೆ

ಹೆಂಡ್ತಿ : ಎದ್ದು ಹೋಗಿ ಬೆಡ್ ರೂಂನ್ಯಾಗ ಮಲಗು ಹೋಗು.

ನಾನು : ಎದ್ದೇಳ್ಯಾಕ ಆಗಲ್ಲ ನನ್ನನ್ನು ಎತ್ತಿಗಂಡು ಹೋಗಿ ಮಂಚದ ಮ್ಯಾಗ ಹಾಕಬಾರ್ದಾ ?

ಹೆಂಡ್ತಿ : ನನ್ನ ಕೈಲಿ ಪ್ರಾಣಿಗಳನ್ನು ಹೊತ್ತುಕೊಂಡು ಹೋಗಾಕ ಆಗಲ್ಲ.

೧೧೫. ಲೆ ರೋಟಿ ಕಾವ್

ಶಶಾಂಕ ಯಾವಾಗ್ಲೂ ಪೋಗೋ ಚಾನಲ್‌ನ 'ಚೋಟಾ ಭೀಮ' ಕಾರ್ಯಕ್ರಮವನ್ನು ನೋಡ್ತಾ ಇದ್ದ. ಅದು ಹಿಂದಿ ಭಾಷೆಯಲ್ಲಿ ಪ್ರಸಾರಗೊಳ್ಳುತ್ತಿತ್ತು. ಅದಕ್ಕೆ ಅವನಿಗೆ ಬಹಳ ಸುಲಭವಾಗಿ ಆದಷ್ಟು ಬೇಗ ಹಿಂದಿ ಮಾತನಾಡುವದು ಕಲಿತ. ಮತ್ತು ಎಲ್ಲರ ಜೊತೆಗೂ ಹಿಂದಿ ಭಾಷೆಯಲ್ಲಿ ಮಾತನಾಡುತ್ತಿದ್ದ. ದಿನಾಲೂ ಬೆಳಿಗ್ಗೆ ಮನೆಗೆ ಆಕಳುಗಳು ಬರುತ್ತಿದ್ದವು. ಅವುಗಳಿಗೆ ತಿನ್ನಲು ಅಕ್ಕಿನೋ ಇಲ್ಲವೇ ರೊಟ್ಟಿನೋ ಕೊಡ್ತಾ ಇದ್ವಿ. ಒಂದು ಸಲ ಆಕಳು ಬಂದಾಗ ರೊಟ್ಟಿ ತೆಗೆದಕೊಂಡು ಹೋಗಿ ಆಕಳಿಗೆ.

ಶಶಾಂಕ : ಲೇ ರೋಟಿ ಕಾವ್

ನಾನು : ಲೇ ಮಗನೆ ಅದ್ಕೆ ಹಿಂದಿ ಬರಲ್ಲ ಆದೇನು ನಿನ್ನಂಗ ದಿನಾಲೂ ಪೋಗೋ ಚಾನಲ್ ನೋಡಲ್ಲ.

೧೧೬. ನಿಂಗೆ ಅಷ್ಟು ರೇಟ್ ಬರಲ್ಲ

ನನ್ನ ಹೆಂಡ್ತಿ ಮನೆಯಲ್ಲಿ ಹಳೆಯದಾದ ಯಾವುದಾದರೂ ವೇಸ್ಟ್ ಸಾಮಾನುಗಳಿದ್ದರೆ ಅವುಗಳನ್ನು ಬಿಸಾಕಿ ಬಿಡದೋ ಇಲ್ಲವೇ ಗುಜರಿಯವನಿಗೆ ಮಾರಿ ಬಿಡುತ್ತಿದ್ಲು. ಹಳೆಯ ಪೇಪರ್, ಬುಕ್ಸ್ ಇತ್ಯಾದಿಗಳನ್ನು ಮಾರಿಬಿಡುತ್ತಿದ್ಳು. ನಂಗೆ ಅವು ಯಾವುದಾದ್ರೂ ಸಾಮಾನು ಯಾವಾಗಾದ್ರೋ ಉಪಯೋಗಕ್ಕೆ ಬರ್ತಿದ್ವು. ಅದಕ್ಕೆ ನಾನು ಬಯ್ತಾ ಇದ್ದೆ. ಅದ್ಕೆ

ನಾನು : ಎಲ್ಲಾ ಹಳೆ ಸಾಮಾನು ವೇಸ್ಟ್ ಆದ್ಮೇಲೆ ನಾನು ವೇಸ್ಟ್ ಅಲ್ವಾ ನನ್ನನ್ನೂ ಮಾರಿ ಬಿಡ್ತಿದ್ಯಾ?

ಹೆಂಡ್ತಿ : ನಿಂಗೆ ಅಷ್ಟು ರೇಟ್ ಬರಲ್ಲಾ ಅದ್ಕೆ ಮಾರಲ್ಲ.

೧೧೭. ಸಾಂಬಾರನ ಮೈಮ್ಯಾಲೆಲ್ಲಾ ಚೆಲ್ಲಿಕಂಡಾರ ಅಂತಾರ

ಇಂದು ವಿದ್ಯಾರ್ಥಿಗಳ ಮನಸ್ಥಿತಿ ಸ್ಥಿಮಿತವಿಲ್ಲ. ಒಂದು ಘಂಟೆಯ ಅವಧಿಯ ಪಿರೇಡ್‌ನಲ್ಲಿ ಅವರನ್ನು ಹಿಡಿದಿಡುವದೇ ಬಹಳ ಕಷ್ಟದ ಸಂಗತಿ. ಒಬ್ಬ ವಿದ್ಯಾರ್ಥಿಯು ತನ್ನ ಕೈ ತಪ್ಪಿ ಪೆನ್ ಕೆಳಗೆ ಬಿದ್ದರೆ ಅದನ್ನು ತೆಗೆದುಕೊಳ್ಳಲು ವರ್ಗ ನಡೆದಾಗ ಸ್ವಲ್ಪ ಕಷ್ಟ. ಸಾರ್ ಬೈಯಬಹುದೆಂದು ಸುಮ್ನೆ ಕುಳಿತು ಬಿಡುತ್ತಾನೆ. ಅವನ ಗಮನವೆಲ್ಲಾ ಕೆಳಗೆ ಬಿದ್ದು ಪೆನ್ನಿನ ಮೇಲೆ ಇದ್ದು, ಪೂರ್ಣ ವರ್ಗವೆಲ್ಲಾ ವ್ಯರ್ಥ ಮಾಡಿಕೊಳ್ಳುತ್ತಾನೆ. ಒಬ್ಬ ಶಿಕ್ಷಕ ಸರಿಯಾಗಿ ಅಂಗಿಯ ಗುಂಡಿ ಹಾಕಿಕೊಳ್ಳದೇ ಪಾಠ ಮಾಡುತ್ತಿದ್ದರೂ ಆ ವಿದ್ಯಾರ್ಥಿ ಅದನ್ನೆ ಗಮನಿಸುತ್ತಾ ಕುಳಿತುಕೊಳ್ಳುತ್ತಾನೆ. ಅದೇ ರೀತಿ ಯಾವುದೇ ವಿಚಾರವಿರಬಹುದು. ನಾನು ಇಂಥಹ ಅವಕಾಶಗಳಿಗೆ ಎಡೆ

ಮಾಡಿಕೊಡದೇ ವಿದ್ಯಾರ್ಥಿಗಳನ್ನು ಏಕಾಗ್ರತೆಯಿಂದ ಕೂಡುವಂತಹ ವಾತಾವರಣವನ್ನು ನಿರ್ಮಾಣ ಮಾಡುತ್ತೇನೆ. ಒಂದು ಸಲ ಎಲ್ಲೋ ಕಾರ್ಯಕ್ರಮಕ್ಕೆ ಹೊರಗೆ ಊಟಕ್ಕೆ ಹೋದಾಗ ನನ್ನ ಅಂಗಿಯ ಮೇಲೆ ಸ್ವಲ್ಪ ಸಾಂಬಾರರಿನ ಕಲೆಯ ಚುಕ್ಕಿ ಹತ್ತಿತ್ತು. ಅದನ್ನು ನನ್ನ ಹೆಂಡತಿ ತೊಳೆದರೂ ಹೋಗಿರಲಿಲ್ಲ. ಅದಕ್ಕೆ ಹೆಂಡ್ತಿಗೆ

ನಾನು : ಇಲ್ನೋಡು ಅಂಗಿಗೆ ಹತ್ತಿದ ಸಾಂಬಾರಿನ ಕಲೆ ಹೋಗಿಲ್ಲ. ಕ್ಲಾಸ್‌ನಲ್ಲಿ ಹುಡುಗರು ನನ್ನ ಪಿರೇಡ್ ಕೇಳದೆ ಅಂಗಿನ ಸಾರ್ ಹೆಂಡ್ತಿ ಹ್ಯಾಂಗ್ ತೊಳದಾಳ ನೋಡು ಅಂತಾರ.

ಹೆಂಡ್ತಿ : ಅಂಗಲ್ಲ ಸಾರ್ ಹ್ಯಾಂಗ್ ಉಂಡಾರ ನೋಡು ಸಾಂಬಾರನ ಮೈಮ್ಯಾಲೆಲ್ಲಾ ಚೆಲ್ಲಿಕಂಡಾರ ಅಂತರ.

೧೧೮. ತಿಂದಿದ್ದು ತಲೆಗೆ ಏರ್‍ಯಾದ

ಸಂಸಾರ ಎಂದ ಬಳಿಕ ಕೆಲಸ–ಕಾರ್ಯಗಳು ಇದ್ದದ್ದೆ. ಮನೆಯಲ್ಲಿ ಹೆಂಡ್ತಿಗೆ ಸಾಕಷ್ಟು ಕೆಲಸಗಳಿದ್ದರೆ ನನಗೆ ಹೊರಗೆ ಮಾಡುವುದಕ್ಕೆ ಸಾಕಷ್ಟು ಕೆಲಸವಿರುತ್ತಿದ್ದವು. ಇಬ್ಬರಿಗೂ ಕೆಲಸಗಳು ಮಾಡಿ ಮಾಡಿ ಸಾಕಾಗಿ ಹೋಗುತ್ತಿತ್ತು. ಅದ್ರೂ ಒಬ್ಬರಿಗೊಬ್ಬರು ಹೇಳಿದಾಗ ಕಿವಿಯೊಳಗೆ ಹಾಕಿಕೊಳ್ಳದೇ ಅದನ್ನು ವ್ಯಂಗ್ಯವಾಗಿ ತೆಗೆದುಕೊಳ್ಳುತ್ತಿದ್ದೆವು.

ಹೆಂಡ್ತಿ : ನಂಗೆ ತಲೆ ನೋಯಾಕತ್ಯಾದ

ನಾನು : ಯಾಕೆ ?

ಹೆಂಡ್ತಿ : ಕೆಲಸ ಮಾಡಿ ಮಾಡಿ ತಲೆ ಚಿಟ್ಟ ಹಿಡಿದು ನೋಯಾಕತ್ಯಾದ

ನಾನು : ಅಂಗಲ್ಲೋ ತಿಂದದ್ದು ಜಾಸ್ತಿ ಆಗಿ ತಲಿಗೆ ಏರಿ ನೋಯಾಕತ್ಯಾದ

ನಾನು : ಕಾಲು ನೋಯಾಕತ್ಯಾದ

ಹೆಂಡ್ತಿ : ಯಾಕೆ ?

ನಾನು : ಕೆಲಸ ಮಾಡಿ ಮಾಡಿ

ಹೆಂಡ್ತಿ : ಅಂಗಲ್ಲ ಖಾಲಿ ಉದ್ರಿ ತಿರ್ಗತ್ತಿದ್ಯಲ್ಲ ಅದ್ಕ ನೋಯಾಕತ್ಯಾದ

೧೧೯. ಬರೆ ತಲೆ ಅಷ್ಟೆ ತೆಗಿತಾರ

ನಮ್ಮ ಮನೆಯಲ್ಲಿ ಅಪ್ಪ ಅಮ್ಮ ಪಕ್ಕದ ಮನೆಯ ಒಂದು ಹುಡುಗಿಯನ್ನು ಚಿಕ್ಕವಳಾಗಿದ್ದಾಗಿನಿಂದಲೂ ಆಕೆಯನ್ನು ಸಾಕಿ ಸಲುಹಿದ್ದರು. ಆಕೆಯ ಮೇಲೆ ಬಹಳ ಪ್ರೀತಿ. ಎಲ್ಲಿಗೆ ಹೋದರೂ ಕರೆದುಕೊಂಡು ಹೋಗುತ್ತಿದ್ದರು. ಆಕೆಯನ್ನು ಮಗಳಂತೆ ಸಾಕಿದ್ದರು. ಒಂದು ಸಲ ಆಕೆಯ ಶಾಲೆಗಾಗಿ ಒಂದು ಆಫ್ ಪೋಟೊ ಬೇಕಿತ್ತು. ಆದಕ್ಕೆ ಆಕೆ ತಯಾರಾಗುತ್ತಿದ್ಲು. ತಯಾರಾಗುವದಕ್ಕೆ ಸ್ವಲ್ಪ ತಡ ಮಾಡಿದ್ಲು ಅದ್ಕೆ

ಅಪ್ಪ : ಅಷ್ಟೆಲ್ಲಾ ತಯಾರಾಗಬೇಡ ಬರೆ ತಲೆ ಅಷ್ಟೆ ತೆಗಿತಾರೆ, ಅಷ್ಟೆ ರೆಡಿ ಆಗು

೧೨೦. ಹೊಟ್ಟೆ ಗಡ ಗಡ

ನಾನು ಆಗಾಗ ಹೊರೆಗೆ ಊಟಕ್ಕೆ ಹೋಗುತ್ತಿದ್ದೆ. ಅಲ್ಲಿ ಯಾವ್ಯಾವ ಊಟ, ಯಾವ್ಯಾವ ತರ ತರದ ಅಡಿಗೆ ಮಾಡಿರುತ್ತಿದ್ದರೊ ಯಾರಿಗೆ ಗೊತ್ತು. ಕೆಲವೊಂದು ಸಲ ರಾತ್ರಿ ಊಟ ಮಾಡಿ ಬಂದ ಮ್ಯಾಲೆ ಮುಂಜಾನೆ ಹೊಟ್ಟೆ ಕೆಟ್ಟು ಗಡ ಗಡ ಅಂತ ಸೌಂಡ್ ಮಾಡ್ತಿತ್ತು ಅದ್ಕೆ.

ನಾನು : ನೋಡು ಅಡಿಗೆ ಯಾಂಗ್ ಮಾಡಿದ್ದಿ ? ಹೊಟ್ಟೆ ಗಡ ಗಡ ಅಂತದ

ಹೆಂಡ್ತಿ : ನಿನ್ನೆ ರಾತ್ರಿ ಯೇನೇನೋ ತಿಂದ ಬಂದಿದ್ದು ಗಡ ಗಡ ಅನ್ಲಾರ್ದ ಸುಮ್ನಿರ್ತದೇನು.

ನಾನು : ಇದು ಗಡ ಗಡ ನಿನ್ನ ರಾತ್ರಿದಲ್ಲೊ ಮಧ್ಯಾಹ್ನದ್ದು.

೧೨೧. ಡಿಸ್ಟ್ಬರ್ಬ್ ಮಾಡ್ಬೇಡಿ ನಾನು ಸೀರಿಯಸ್ ಆಗಿ ಓದ್ಬೇಕು

ಶಶಾಂಕ ಎಲ್. ಕೆ. ಜಿ. ಓದುತಾ ಇದ್ದ. ಫಸ್ಟ್ ಟೆಸ್ಟ್ ಇತ್ತು. ನಾಳೆ ಪರೀಕ್ಷೆ ಇತ್ತು. ಆ ದಿನ

ಶಶಾಂಕ : ಮಮ್ಮಿ ನಂಗೆ ಡಿಸ್ಟ್ಬರ್ಬ್ ಮಾಡ್ಬೇಡಿ ನಾನು ಸೀರಿಯಸ್ ಆಗಿ ಓದ್ಬೇಕು

ಮಮ್ಮಿ : ಯಾಕೆ?

ಶಶಾಂಕ : ನಾಳೆ ಎಕ್ಸಾಮ್ ಐದಾವ

ಮಮ್ಮಿ : ಅದ್ರಾಗ ಏನ್ ಬರೀಬೇಕು?

ಶಶಾಂಕ : ಎ.ಬಿ.ಸಿ.ಡಿ. ನಾಲ್ಕೆ ಬರಿಬೇಕು ಅಷ್ಟೇ

೧೨೨. ಹಂದಿನ ಹಿಡ್ಯಾಕತ್ಯಾರ

ಒಂದು ಸಲ ನಾನು ಬೇರೇ ಯಾವುದೋ ಕೆಲಸದ ನಿಮಿತ್ಯ ಬೆಂಗಳೂರಿಗೆ ಹೋಗಿದ್ದೆ. ಅವತ್ತು ಸಂಜೆ ಬರಬೇಕಾಗಿತ್ತು. ನನ್ನ ಹೆಂಡತಿ ಫೋನ್ ಮಾಡಿ ಒಂದು ಚಿಕ್ಕ ಹಂದಿ ನಮ್ ಗಟಾರದಲ್ಲಿ ಇಳಿದಾದ. ಅದು ಸಣ್ಣದು ಐತಿ, ಅದಕ ಮೇಲೇರಾಕ ಆಗವಲ್ತು. ಪಾಪ ಒದ್ರಾಕತ್ತೈತಿ ಅಂದ್ಲು. ಆಯ್ತು ಬಿಡು ನಾನು ನಾಳೆ ಬೆಳಿಗ್ಗೆ ಬರ್ತಿನಲ್ಲಾ ನೋಡಾಮು ಅಂದೆ. ನಾನು ಬೆಳಿಗ್ಗೆ ಬಂದು ಗಟಾರದೊಳಗೆ ಇಳಿದು ಹಂದಿನ ಹಿಡ್ಯಾಕ ಹೋದ್ರೆ ಅದು ತಪ್ಪಿಕೊಂಡು ಓಡ್ತಾ ಇತ್ತು. ಚಿಕ್ಕದ್ದಾಗಿದ್ದರಿಂದ ಆಕಡೆಯಿಂದ ಈಕಡೆ, ಈಕಡೆಯಿಂದ ಆಕಡೆಗೆ ಓಡಾಡ್ತಾ ಇತ್ತು. ನಾನು ಒಂದು ಗೋಣಿಚೀಲ ತಗಂಡು ಅದನ್ನ ಹಿಡಿದು ಮೇಲೆತ್ತಾಕ ಪ್ರಯತ್ನ ಮಾಡ್ತಾ ಇದ್ದೆ. ಆವಾಗ ಅದನ್ನು ನೋಡಿದ ಪಕ್ಕದ ಮನೆ

ಆಂಟಿ : ಸಾರ್ ಏನು ಮಾಡಕತ್ಯಾರ ?
ನನ್ನ ಹೆಂಡ್ತಿ : ಸಾರು ಹಂದಿನ ಹಿಡ್ಯಾಕತ್ಯಾರ.

೧೨೩. ಸತ್ತಿದ್ದು ಅಲ್ಲಿ; ಮಂಡಾಳು ಮನ್ಯಾಗ ಉಗ್ಯಾರ

ನಮ್ಮ ಹಳ್ಳಿಗಳಲ್ಲಿ ಒಂದು ಸಂಪ್ರದಾಯವಿದೆ. ಯಾರಾದ್ರು ಸತ್ರೆ ಅವರ ಶವ ಸಂಸ್ಕಾರ ಮಾಡುವುದಕ್ಕೆ ಹೆಣ ಒಯ್ಯುವಾಗ ದೇಹದ ಮೇಲೆ ಮಂಡಾಳು ಉಗ್ಗುವುದು ಒಂದು ಸಂಪ್ರದಾಯ. ಒಂದು ಸಲ ಯಾರೋ ಒಬ್ಬ ರಾಷ್ಟ್ರ ನಾಯಕ ಸತ್ತಿದ್ರು. ಅದ್ಕಾಗಿ ಸರಕಾರ ಶಾಲೆ–ಕಾಲೇಜುಗಳಿಗೆ ರಜೆ ನೀಡಿತ್ತು. ಅಂದು ಮಕ್ಕಳಿಗೆ ರಜೆ ಸಿಕ್ಕಿತ್ತು. ಮಕ್ಕಳು ಮನೇಲಿ ಉಳದ್ರೆ ಬಹಳ ಕಿರಿಕಿರಿ. ಏನೇನೋ ಸಾಮಾನುಗಳನ್ನು ಎಲ್ಲೆಲ್ಲೋ ತಂದು ಒಗೆದು ಬಿಡುತಿದ್ರು. ಅವತ್ತು ಮಕ್ಕಳ ಮನೆ ತುಂಬೆಲ್ಲಾ ಸಾಮಾನುಗಳು ಚೆಲ್ಲಾಪಿಲ್ಲಿಯಾಗಿ ಬೀಸಾಡಿದ್ದರು. ಅಷ್ಟೆ ಅಲ್ಲ ಮಂಡಾಳು ಸಾಕಷ್ಟು ತಿಂದು ಮನೆ ತುಂಬೆಲ್ಲಾ ಚೆಲ್ಲಾಡಿಟ್ಟಿದ್ದರು. ಅದನ್ನು ನೋಡಿದ ನನಗೆ ಯಾಕಪ್ಪಾ ಈ ರಜೆ ಬರ್ತಾದ ಅನ್ಕೊಂಡೆ. ನನಗೆ ಸ್ವಲ್ಪ ಕೋಪ ಬಂತು. ಅದ್ಕೆ ಹೆಂಡ್ತಿಗೆ

ನಾನು : ಅಲ್ಲೋ ಮನೆತುಂಬೆಲ್ಲಾ ಮಂಡಾಳು ಉಗ್ಗಿರೆಲ್ಲಾ ಇದೇನು ಕತೆ ?
ಹೆಂಡ್ತಿ : ಇಲ್ಲ ರಾಷ್ಟ್ರ ನಾಯಕ ಅಲ್ಲಿ ಸತ್ತಾನ ನಮ್ಮನ್ಯಾಗ ಮಂಡಾಳು ಉಗ್ಗೀವಿ.

೧೨೪. ಖರ್ಚಿಗೆ ಕಲೆಕ್ಷನ್ ಆಗ್ತದ

ನನ್ನ ಮಗಳು ಮೇಘನಾ ಸಂಗೀತ ಶಾಲೆಗೆ ಹೋಗ್ತಾ ಇದ್ಲು. ವಾರದಲ್ಲಿ ಮೂರು ದಿನ ಸಂಗೀತ ಕ್ಲಾಸ್ ಇರ್ತಿತ್ತು. ಅಲ್ಲಿ ಹಾಡುವುದು, ಹಾರ್ಮೋನಿಯಂ ಬಾರಿಸುವುದು ಇತ್ಯಾದಿ ಕಲಿಸ್ತಾ ಇದ್ರು. ಸಂಗೀತ

ಪಾಠಶಾಲೆ ಶ್ರೀ ಗವಿಮಠ ಸಂಸ್ಥಾನ ಆವರಣದೊಳಗೆ ಇತ್ತು. ಅಲ್ಲಿಗೆ ಅನೇಕ ಭಕ್ತರು ಬಂದು ಹೋಗ್ತಾ ದಾನ-ಧರ್ಮ ಬಹಳಷ್ಟು ಮಾಡ್ತಾ ಇದ್ರು. ಒಂದು ಸಲ ಮೇಘನಾ ಹಾರ್ಮೋನಿಯಂ ಬಾರಿಸುತ್ತಾ, ಹಾಡುತ್ತಾ ಕುಳಿತಾಗ ಒಂದು ಮುದುಕಿ ಏನು ಭಾವಿಸಿಕೊಂಡಳೋ ಯಾರಿಗೆ ಗೊತ್ತು ಅದನ್ನು ಸ್ವಲ್ಪ ಹೊತ್ತು ನೋಡಿ ಹಾರ್ಮೋನಿಯಂ ಮೇಲೆ ಒಂದು ರೂಪಾಯಿ ಎಸೆದು ಹೋದ್ಳು ಎಂದು ಮಗಳು ಮೇಘನಾ ಮನೆಗೆ ಬಂದು ಅವರಮ್ಮಗೆ ಹೇಳಿದ್ಳು. ಅದ್ಕೆ

ನಾನು : ಮಗಳೆ ಬೆಸ್ಟ ಆಯ್ತು ನಾಳೆ ನಾನು ನಿಮ್ಮಮ್ಮನ್ನೂ ಕರ್ಕಂಡು ಬರ್ತಿನಿ; ಮೂವರು ಹಾರ್ಮೋನಿಯಂ ಬಾರಿಸುತ್ತಾ ಕೂಡಾಮು ಒಂದಿಷ್ಟು ಕಲೆಕ್ಷನ್ ಆಗ್ತಾದ, ಮನೆ ಖರ್ಚಿಗಾರ ಆಗ್ತಾದ.

೧೨೫. ಬಗಲಾಗ ಬಂದು ಕುಂದ್ರತಾಳ

ಶಶಾಂಕ ಎಲ್.ಕೆ.ಜಿ. ಕ್ಲಾಸ್‌ಗೆ ಹೋಗ್ತಾ ಇದ್ದ. ವಾರದಲ್ಲಿ ಒಂದೆರಡು ದಿನ ಮಾತ್ರ ಕಲರ್ ಡ್ರೆಸ್ ಇತ್ತು. ಉಳಿದ ದಿನಗಳಂದು ಸ್ಕೂಲ್ ಡ್ರೆಸ್ ಹಾಕಿಕೊಂಡು ಹೋಗಬೇಕಿತ್ತು. ಹೀಗಾಗಿ ಕಲರ್ ಡ್ರೆಸ್ ಇದ್ದಾಗ ಚೆನ್ನಾಗಿರೋ ಡ್ರೆಸ್‌ಗಳನ್ನು ಹಾಕಿಕೊಂಡು ಹೋಗುತ್ತಿದ್ದನು. ಒಂದು ದಿನ ಅವರ ಅಮ್ಮನಿಗೆ

ಶಶಾಂಕ : ಮಮ್ಮಿ ಪ್ರಿಯಾ ಚೆನ್ನಾಗಿ ಡ್ರೆಸ್ ಮಾಡಿಕೊಂಡು ಬರ್ತಾಳಮ್ಮಾ.

ಅಮ್ಮಾ : ಲೇ ಮಗನೇ ಅಕಿ ಡ್ರೆಸ್ ಯಾಕ ನೋಡ್ತಿ.

ಶಶಾಂಕ : ನಾನೇನು ನೋಡಲ್ಲಾಮ್ಮ, ಆಕಿನೆ ತನ ಡ್ರೆಸ್ ನೋಡ್ಲಿ ಅಂತ ನನ ಬಗಲಾಗ ಬಂದು ಕುಂದ್ರತಾಳ

೧೨೬. ನಂದಾದೀಪ

ನನ್ ಹೆಂಡ್ತಿ ಟಿ.ವಿ. ಜಾಸ್ತಿ ನೋಡ್ತಾ ಇದ್ಳು. ತನ್ನ ಎಲ್ಲಾ ಮನೆ ಕೆಲಸ ಮುಗಿದ ಮೇಲೆ ಧಾರಾವಾಹಿ, ಸಿನಿಮಾ ಹೀಗೆ ಎಲ್ಲಾ ಕಾರ್ಯಕ್ರಮಗಳನ್ನು ನೋಡ್ತಾ ಇದ್ಳು. ಅದ್ರ ಜೊತೆಗೆ ಲೈಟು, ಫ್ಯಾನ್ ಹಚ್ತಾ ಇದ್ಳು. ಇದು ಎಲ್ಲಾ ಮನೆಯ ಹೆಣ್ಣು ಮಕ್ಕಳ ಕಥೆ. ಆದ್ರೂ ನಾನು ಲೈಟ್ ಬಂದು ಮಾಡೋ ಅಂತ ಹೇಳ್ತಾ ಇದ್ದೆ. ಒಂದು ಯಾವುದೋ ಪ್ರಸಂಗ ಬಂತು. ತನ್ನನ್ನು ಹೊಗಳಿಕೊಳ್ಳುವ ಪ್ರಸಂಗವಿತ್ತು. ಅದ್ಕೆ

ಹೆಂಡ್ತಿ : ನಾನು ಈ ಮನೆಯ ನಂದಾದೀಪ.
ನಾನು : ನಂಗೆ ಯಾವತ್ತೋ ಗೊತ್ತಾಯ್ತು.
ಹೆಂಡ್ತಿ : ಯಂಗೆ?
ನಾನು : ನೀನು ಲೈಟ್ ಆಫ್ ಮಾಡ್ದೆ ಇರ್ತಿದ್ಯಲ್ಲಾ ಅವಗ್ಲೆ ನಂಗೆ ಗೊತ್ತಾಯ್ತು, ನೀನು ಮನೆಯ ನಂದಾದೀಪ ಅಂತ

೧೨೭. ಬೇರೆಯವರನ್ನ ತುಂಬಿಕೊಳ್ಳಬೇಕು

ಹೆಂಡ್ತಿ: ಮನೆ ಕೆಲಸ ಜಾಸ್ತಿ ಆಗ್ಯೈಯ್ತಿ ಅಡುಗೆ ಮಾಡಬೇಕು, ಬಟ್ಟೆ ತೊಳಿಬೇಕು, ಮನಿ ತೊಳಿಬೇಕು, ಕಸ-ಮುಸುರೆ ನಂಗಂತೂ ಸಾಕಾಗೈತಿ.

ನಾನು: ನಂಗೇನು ಕಡಿಮೆನಾ ಕಾಲೇಜ್‌ದಲ್ಲಿ ಬಹಳ ಕೆಲಸ ಐತಿ. ಸಾಕಾಗ್ಯೈತಿ ರಾಜಿನಾಮೆ ಕೊಡಂಗ ಆಗ್ಯೈಯ್ತಿ.
ಹೆಂಡ್ತಿ: ನಂಗೂ ಕೆಲಸ ಜಾಸ್ತಿ ಆಗ್ಯೆತಿ ಅದಕೆ ನಾನೂ ಮನೆ ಕೆಲಸಕ್ಕೆ ರಾಜಿನಾಮೆ ಕೊಡಬೇಕು ಅಂತ ಮಾಡಿನಿ

ನಾನು :ಸರಿ ನಾನು ಕಾಲೇಜಿಗೆ ರಾಜಿನಾಮೆ ಕೊಟ್ರೆ
ಬೇರೆಯವರನ್ನ ತುಂಬಿಕ್ಯಂತರ ಅದ್ರಂಗ ಇಲ್ಲಿ
ಮನ್ಯಾಗ ನೀನೂ ಸಹ ರಾಜಿನಾಮೆ ಕೊಟ್ರೆ
ಬೇರೆಯವರನ್ನ ತುಂಬಿಕಂಡ್ರೆ ಆಯ್ತು ಬಿಡು.

೧೨೮. ಭಿಕ್ಷುಕಿ ನನ್ನೂ ಬಾ ಅಂದ್ರೆ ?

ನನ್ನತ್ರ ದುಡ್ಡಿದ್ದಾಗ ಕೊಡ್ತಿದ್ದೆ. ಇಲ್ಲದಿದ್ದಾಗ ಕೊಡ್ತಿರ್ಲಿಲ್ಲ. ಒಂದೊಂದು ಸಲ ದುಡ್ಡಿಲ್ಲದಾಗ ನನ್ನ ಹೆಂಡ್ತಿ ಬಹಳ ಪೀಡಿಸ್ತಾ ಇದ್ಲು, ದುಡ್ಡು ಕೊಡು ಅಂತ. ನಾನು ಇಲ್ಲಂದ್ರೂ ಕೇಳ್ತಿರ್ಲಿಲ್ಲ. ಒಂದು ಸಲ

ಹೆಂಡ್ತಿ: ಒಂದು ರೂಪಾಯಿನರಾ ಕೊಡು

ನಾನು: ಇಲ್ಲೊ ಇದ್ರೆ ಕೊಡ್ತಿರ್ಲಿಲ್ಲ. ಒಂದು ರೂಪಾಯಿ
ಯಾಕೆ ಬೇಕು?

ಹೆಂಡ್ತಿ: ಯಾರಾದ್ರೂ ಭಿಕ್ಷುಕರು ಬಂದ್ರೆ ಕೊಡಕ ಬೇಕು

ನಾನು: ಇಲ್ಲ ಅಂತಹೇಳು, ನನಗಂಡ ಕೊಟ್ಟಿಲ್ಲಾ ಅನ್ನು

ಹೆಂಡ್ತಿ: ಆ ಭಿಕ್ಷುಕಿ ನನ್ನ ಗಂಡ ಒಂದು ರೂಪಾಯಿ
ಕೊಡ್ಲಾರ್ದಕ್ಕೆ ನಾನು ಬಂದಿನಿ. ನಿಂಗೂ ಗಂಡ
ಕೊಟ್ಟಿಲ್ಲ ಅಂದ್ರೆ ನೀನೂ ನನ್ ಜೊತೆ ಬಾ ಅಂದ್ರೆ
ಏನ್ ಮಾಡ್ಲಿ?

೧೨೯. ಅಂಗಳ ಕಸ ಬಳಿದು, ನೀರು ಹಾಕಿ, ರಂಗೋಲಿ ಹಾಕು ಅಂದ್ರೆ ?

ನನ್ನ ಹೆಂಡತಿ ಕೆಲಸಗಳ ಬಗ್ಗೆ ಹಂಚಿಕೆ ವಿವರ ಹೇಳುತ್ತಿದ್ದಳು. ನಾನು ಅದನ್ನು ಒಪ್ಪುತ್ತಿರಲಿಲ್ಲ. ಯಾವುದೇ ಕೆಲಸಗಳನ್ನು ಹೇಳಿದರೆ ಆಕಿ ಒಪ್ಪುತ್ತಿರಲಿಲ್ಲ. ಇಲ್ಲ ಆ ಕೆಲಸ ನೀನೇ ಮಾಡಬೇಕು, ಅದು ನನ್ನ ಕೆಲಸ, ಇದು ನಿನ್ನ ಕೆಲಸ ಅಂತ ಹೀಗೆ ವಿವರಿಸುತ್ತಿದ್ದಳು. ಅಂಗಡಿ, ಮಾರ್ಕೆಟ್ ಹೀಗೆ ಇತ್ಯಾದಿ ಕೆಲಸಗಳನ್ನು ನನ್ನ ಕೈಲಿ ಆಗುವುದಿಲ್ಲ ನೀನೇ ಸಾಮಾನುಗಳನ್ನು ತರಬೇಕು ಎಂದು ವಾದಿಸುತ್ತಿದ್ದಳು. ಒಂದು ಸಲ ಕೆಲಸಗಳನ್ನು ಹಂಚುತ್ತ

ಹೆಂಡ್ತಿ: ಹೊರಗಿನ ಎಲ್ಲಾ ಕೆಲಸ ನಿಂದು ಮನೆ ಒಳಗಿನ ಎಲ್ಲಾ ಕೆಲಸ ನಂದು ಬಾಗಿಲ ಹೊರಗಿಂದು ಎಲ್ಲಾ ಕೆಲಸ ನಿಂದೇ

ನಾನು: ಅಂಗಂದ್ರೆ ಕಷ್ಟ

ಹೆಂಡ್ತಿ: ಯಾಕೆ?

ನಾನು: ಮನೆ ಹೊರಗಿಂದು ಅಂದ್ರೆ ಬಾಗಿಲು ದಾಟಿ ಅಂಗಳ ಕಸ ಬಳಿದು, ನೀರು ಹಾಕಿ,

ರಂಗೋಲಿ ಹಾಕುವ ಎಲ್ಲಾ ಕೆಲಸ ನಂದೆ ಅಂದ್ರೆ ಸ್ವಲ್ಪ ಕಷ್ಟ

೧೩೦. ಸಣ್ಣಪ್ಪ ಬಂದ

ಮೂರು ವರ್ಷದ ಮಗಳು ಮೇಘನಾ ಯಾರು ಯಾವ ರೀತಿಯಲ್ಲಿ ಕರೆಯುತ್ತಾರೆಯೋ ಅದೇ ರೀತಿಯಲ್ಲಿ ಕರೆಯುತ್ತಿದ್ದಳು.

ನಮ್ಮ ಮನೆಯಲ್ಲಿ ನಮ್ಮ ಸಂಬಂಧಿಕರ ಒಂದು ಹುಡುಗಿ ಇದ್ದಳು. ಆಕೆ ನನ್ನನ್ನು ಸಣ್ಣಪ್ಪ (ಚಿಕ್ಕಪ್ಪ) ಎಂದು ಕರೆಯುತ್ತಿದ್ದಳು. ಆಕೆ ಕರೆದಂತೆ ನನ್ನನ್ನು ಸಣ್ಣಪ್ಪ ಎಂದು ಕರೆಯುತ್ತಿದ್ದಳು. ಒಂದು ಸಲ ನಾನು ಹೊರಗಡೆಯಿಂದ ಬಂದಾಗ

ಮೇಘನಾ: ಮಮ್ಮಿ ಸಣ್ಣಪ್ಪ ಬಂದ

ನಾನು: ಆಕಿಗೂ ಮಮ್ಮಿ ಅಂತ ಯಾಕಂತಿಯಾ ಸಣ್ಣಮ್ಮ (ಚಿಕ್ಕಮ್ಮ) ಅನ್ನು ಎಲ್ಲಾ ಸರಿ ಹೋಗ್ತಾದ.

೧೩೧. ಮಿಸ್‌ನ ಬಿಟ್ಟು ಎಲ್ರೂ ಇಷ್ಟ ಪಡ್ತಾರ

ಶಶಾಂಕ ಎಲ್. ಕೆ. ಜಿ. ಕ್ಲಾಸ್‌ಗೆ ಹೋಗ್ತಾ ಇದ್ದ. ತನ್ನನ್ನು ಕ್ಲಾಸ್‌ನಲ್ಲಿ ಬಹಳಷ್ಟು ಜನ ಇಷ್ಟಪಡ್ತಾರ ಎಂದು ಜಂಬ ಕೊಚ್ಚಿಕೊಳ್ಳುತ್ತಿದ್ದ. ಒಂದು ಸಲ

ಶಶಾಂಕ : ಮಮ್ಮಿ ನನ್ನ ಕ್ಲಾಸ್‌ದಲ್ಲಿ ನನ್ನ ಎಲ್ರೂ ಇಷ್ಟಪಡ್ತಾರ.

ನಾನು : ಎಲ್ರೂ ಇಷ್ಟಪಡ್ತಾರ?

ಶಶಾಂಕ : ಒಬ್ರು ಬಿಟ್ಟು

ನಾನು : ಯಾರವರೂ?

ಶಶಾಂಕ : ಮಿಸ್‌ನ ಬಿಟ್ಟು ಎಲ್ರೂ ಇಷ್ಟಪಡ್ತಾರ.

೧೩೨. ಎಣ್ಣೆ ಮಜ್ಜನ

ನಾನು ದಿನಾಲೂ ತಲೆಗೆ ಕೊಬರಿ ಎಣ್ಣೆ ಹಚ್ಚಿಕೊಳ್ಳುತ್ತಿದ್ದೆ. ಸ್ನಾನ ಮುಗಿದ ಕೂಡಲೆ ಒಂದಿಷ್ಟು ಅಂದರೆ ಸ್ವಲ್ಪನೇ ಹಚ್ಚಿಕೊಳ್ಳುತ್ತಿದ್ದೆ.

ಒಂದೊಂದು ಸಲ ಡಬ್ಬಿಗೆ ಹತ್ತಿದ ಎಣ್ಣೆಯನ್ನೇ ತಲೆಗೆ ಹಚ್ಚಿಕೊಂಡು ಸರಿ ಮಾಡುತ್ತಿದ್ದೆ. ಆದರೆ ನನ್ನ ಹೆಂಡತಿ ತಲೆಗೆ ಕೊಬ್ಬರಿ ಎಣ್ಣೆ ಜಾಸ್ತಿ ಹಚ್ಚಿಕೊಳ್ಳುತ್ತಿದ್ದಳು. ಎಷ್ಟು ಜಾಸ್ತಿ ಎಂದರೆ ಎಣ್ಣೆ ಡಬ್ಬಿಯನ್ನು ತಲೆಯ ಮೇಲೆ ಡಬ್ಬಾಕಿ ಸುರಿದುಕೊಳ್ಳುತ್ತಿದ್ದಳು. ನಾನು ಡಬ್ಬಿಗೆ ಹತ್ತಿದ್ದು ಹಚ್ಚಿಕೊಂಡ್ರೆ ; ಆಕಿ ಡಬ್ಬಿನೇ ತಲಿಮ್ಯಾಲೆ ಸುರಕಳ್ಳಕತ್ತಿದ್ದು ನೋಡಿ

ನಾನು : ಅಲ್ಲೊ ನೀನೇನೂ ತಲಿಮ್ಯಾಲೆ ಎಣ್ಣೆ ಮಜ್ಜನ
ಮಾಡಿಕಂಡಂಗ ಮಾಡಿಕೊಳ್ಳಾಕತ್ತಿದ್ಯಲ್ಲ

೧೩೩. ಇನ್ನೂ ಎರಡುನೂರು ರೂಪಾಯಿ ನೀನೇ ಕೊಡಬೇಕು.

ನಾನು : ನಾನು ನಿಂಗೆ ದಿನಾ ಎಷ್ಟು ಖರ್ಚು ಮಾಡ್ತಿನಿ ಗೊತ್ತಾ ?

ಹೆಂಡ್ತಿ : ನನಗೋಸ್ಕರ ಎಷ್ಟು ಖರ್ಚು ಮಾಡ್ತಿಯಪ್ಪಾ ?

ನಾನು : ನಿಂಗೆ ದಿನಾ ನಾಷ್ಟ, ಊಟ, ಬಟ್ಟೆ, ಟಿ.ವಿ ನೋಡಿದ್ದು, ಲೈಟು-ಫ್ಯಾನು ಉರ್ಸಿದ್ದು, ರೂಂ, ಬಾಡಿಗೆ ಎಲ್ಲಾ ಸೇರಿಸಿದ್ರೂ ಏನಿಲ್ಲಾಂದ್ರೂ ದಿನಕ್ಕೆ ಅಂದಾಜು ಎಂಟುನೂರು ರೂಪಾಯಿ ಖರ್ಚು ಮಾಡ್ತಿನಿ ಗೊತ್ತಾ

ಹೆಂಡ್ತಿ : ನಂದೇನು ಕಡಿಮೇನಾ; ನಿನಮನೆ ತೊಳಿದು, ಮುಸುರೆ ತೊಳಿದು, ಅಡುಗೆ ಮಾಡಿ, ನಿನ ಬಟ್ಟೆ ತೊಳಿದು, ಕಸ ಬಳಿದು, ದಿನವಿಡಿ ಕೆಲಸ ಮಾಡಿದ್ರೆ ಒಂದು ಸಾವಿರ ರೂಪಾಯಿ ಕೊಡಬೇಕಾಗ್ತದ ಇನ್ನೂ ಎರಡುನೂರು ರೂಪಾಯಿ ನಿನೇ ಕೊಡಬೇಕು.

೧೩೪. ನಮ್ ಅಡುಗೆನಾ ನಾವೇ ಮಾಡ್ಕಬೇಕಾ?

ನಾನು ಮತ್ತು ನನ್ನ ಹೆಂಡ್ತಿ ಮಕ್ಕಳಿಗೆ ದಿನಂಪ್ರತಿ ಬುದ್ಧಿವಾದ ಹೇಳ್ತಾ ಇದ್ವಿ. ಅವ್ರು ಎಷ್ಟು ಬೇಕು ಅಷ್ಟು ತಲೆಯೊಳಗೆ ಹಾಕಿಕೊಳ್ಳುತ್ತಿದ್ದರು. ಆದರೂ ನಮ್ಮ ಕರ್ತವ್ಯವೆಂಬಂತೆ ದಿನನಿತ್ಯ ಸಲಹೆ ಮಾತುಗಳನ್ನು ಹೇಳ್ತಾ ಇದ್ವಿ. ಒಂದು ಸಲ ಮಕ್ಕಳಿಗೆ

ನಾನು : ನಿಮ್ಮ ನಿಮ್ಮ ಕೆಲಸಗಳನ್ನು ನೀವೇ ಮಾಡಿಕೊಳ್ಳಬೇಕು ನಮ್ ಸಹಾಯ ಕೇಳಬೇಡ್ರಿ.

ಮಕ್ಳು : ಅಂಗಾದ್ರೆ ನಮ್ ಬಟ್ಟೆ ನಾವೇ ತೊಳ್ಕಬೇಕಾ? ನಮ್ ಅಡಿಗೆನಾ ನಾವೇ ಮಾಡ್ಕಬೇಕಾ?

೧೩೫. ಮೈನೂ ತೊಳ್ಕಬೇಡ ಅಂತಾನಾ

ನಾನು ಮಕ್ಕಳಿಗೆ ಕರೆಂಟು ವೇಸ್ಟು ಮಾಡಬೇಡ್ರಿ ನೀರು ವೇಸ್ಟು ಮಾಡಬೇಡ್ರಿ ಎಂದು ಆಗಾಗ ಹೇಳ್ತಾ ಇದ್ದೆ. ಒಂದು ಸಲ ಮಗಳು ಮೇಘನಾ ಸ್ನಾನ ಮಾಡುವುದಕ್ಕೆ ಬಾತರೂಂಗೆ ಹೋದ್ಲು

ನಾನು : ಮಗಳೆ ನೀರು ಜಾಸ್ತಿ ಚಲ್ಲಬೇಡ

ಮೇಘನಾ : ಅಮ್ಮಾ ಅಪ್ಪ ಬಿಟ್ರೆ ಮಗಳೆ ಮೈನೂ ತೊಳ್ಕಬೇಡ, ನೀರು ವೇಸ್ಟ್ ಆಗ್ತಾವ ಅಂತಾನಾ

೧೩೬. ಇದೇನು ನಿಮ್ ಕಾಲೇಜು ಅಲ್ಲಾ

ಒಂದು ಸಲ ಗಾಡಿ ಮೇಲೆ ಹೆಂಡತಿ, ನಾನು ಎಲ್ಲಿಗೋ ಹೋಗಬೇಕಿತ್ತು ನಾನು ಯಾವುದೋ ಆಲೋಚನೆಯಲ್ಲಿ ಗಾಡಿ ಮೇಲೆ ಕುಳಿತಿದ್ದೆ. ಆಕೆ ಇನ್ನು ಗಾಡಿ ಹತ್ತಿರಲಿಲ್ಲ. ದಿಡೀರನೆ ಬಂದು ಗಾಡಿ ಮೇಲೆ ಹತ್ತಿದಳು. ಗಾಡಿ ಸ್ವಲ್ಪ ವಾಲಿತು. (ಜೋಲಿ) ಅದಕ್ಕೆ

ನಾನು : ಅಲ್ಲೊ ಗಾಡಿ ಮೇಲೆ ಕುಂದ್ರತಿನಿ ಅಂತ ಹೇಳಬಾರ್ದಾ

ಹೆಂಡತಿ : ಹೇಳಿ ಕುಂದ್ರಾಕ, ಕೇಳಿ ಬರಾಕ, ಕೇಳಿ ಹೋಗಾಕ ನಿಮ್ಮ ಕಾಲೇಜ ಅಲ್ಲ

೧೩೭. ರಾಕೇಟ್ ತಗೋ

ಒಂದು ಸಲ ಬಾಹ್ಯಕಾಶಕ್ಕೆ ಉಪಗ್ರಹ ಉಡಾವಣೆ ಕಾರ್ಯವನ್ನು ವಿಜ್ಞಾನಿಗಳು ನಡೆಸುತ್ತಿದ್ದರು. ಅದರ ತಯಾರಿ, ರಚನೆ, ಗಾತ್ರ, ವೇಗ ಎಲ್ಲವನ್ನೂ ನನ್ನ ಹೆಂಡತಿ ಟಿ.ವಿ.ಯಲ್ಲಿ ನೋಡಿದ್ದಳು. ನನ್ನ ಮುಂದೆ ಬಂದು

ಹೆಂಡ್ತಿ : ಅದು ರಾಕೇಟ್ ಒಂದು ನಿಮಿಷಕ್ಕೆ ಎಷ್ಟು ಕಿಲೋಮೀಟರ್ ವೇಗವಾಗಿ ಓಡ್ತಾದ

ನಾನು : ಒಂದು ನಿಮಿಷಕ್ಕೆ 2000–3000 ಕಿಲೋ ಮೀಟರ್ ವೇಗವಾಗಿ ಓಡ್ತಾದ

ಹೆಂಡ್ತಿ : ಆಂಗಾದ್ರೆ ಅಂತದ್ದೊಂದು ನಾವು ತಗಬೇಕು ನೋಡು

ನಾನು : ಯಾಕೆ?

ಹೆಂಡ್ತಿ : ನಮ್ಮೂರಿಗೆ ನಮಮ್ಮನ ಮಾತಡ್ಸಾಕ ಒಂದು ನಿಮಿಷದಾಗ ಊರಿಗೆ ಹೋಗಿ ಮತ್ತೆ ಒಂದು ನಿಮಿಷದಾಗ ವಾಪಸ ಬರಬಹುದಲ್ಲ ಅದ್ಕೆ ಅದ್ನ ತಗಾ ಅಂದೆ.

೧೩೮. ಹಲ್ಲುಸೆಟ್ಟು ದಾನ

ನಾವು ನಮ್ಮ ಕುಟುಂಬದ ಸದಸ್ಯರೆಲ್ಲಾ ಸೇರಿ ಮರಣಾನಂತರ ಕಣ್ಣುದಾನ ಮಾಡುವುದಾಗಿ ವಾಗ್ದಾನ ಮಾಡಿ ಹೆಸರು ನೋಂದಾಯಿಸಿದ್ದೆವು. ನಕ ಇಬ್ಬರೂ ಬೇಡ ನಮಗೆ ಭಯ ಆಗ್ತಾದ ಎಂದು ಹೇಳಿ ಸುಮ್ಮನಾದರು. ನನ್ನಾನು, ನನ್ನ ತಂದೆ, ತಾಯಿ ಮತ್ತು ನನ್ನ ಹೆಂಡತಿ ಎಲ್ಲರೂ ಸೇರಿ ನೇತ್ರದಾನದ ವಾಗ್ದಾನ ಮಾಡಿದೆವು. ಮಗಳು ಮೇಘನಾ ಮತ್ತು ಮಗ ಶಶಾಂ ಹೆಂಡತಿಯೂ ಸಹ ನಮ್ಮದು ನಮ್ಮಿಚ್ಛೆ, ಆ ಮಕ್ಕಳದು ಅವರಿಚ್ಛೆ, ಬೇಡ ಬಿಡು ಎಂದು ಸುಮ್ಮನಾಗಿ ನಾವು ಮಾತ್ರ ನೇತ್ರದಾನದ ವಾಗ್ದಾನ ಮಾಡಿ ಹೆಸರು ನೋಂದಾಯಿಸಿ ಪ್ರಮಾಣ ಪತ್ರ ಪಡೆದುಕೊಂಡು ಬಂದೆವು. ಮಗಳು ಮೇಘನಾಳಿಗೆ ಒಂದೆರಡು ಹಲ್ಲುಗಳು ಸ್ವಲ್ಪ ಹಿಂದೆ-ಮುಂದೆ ಬಂದಿದ್ದವು. ಅವು ನೋಡುವುದಕ್ಕೆ ಎರಡು ಸಾಲಿನಂತೆ ಕಾಣುತ್ತಿದ್ದವು. ಅದಕ್ಕೆ ಒಮ್ಮೆ,

ನಾನು : ಅಯ್ಯೋ ಮೇಘನಾ ನಿನ್ನ ಹಲ್ಲು ಎರಡು ಸೆಟ್ಟು ಬಂದಾವ.

ಮೇಘನಾ : ಇರ್ಲಿ ಬಿಡಪ್ಪ ಒಂದು ಹಲ್ಲುಸೆಟ್ಟು ಹೆಚ್ಚಿಗೆ ಬಂದಾದ ಅಲ್ಲಾ, ನೀವು ಕಣ್ಣುದಾನ ಮಾಡೀರಿ ನಾನು ಹಲ್ಲುಸೆಟ್ಟು ದಾನ ಮಾಡ್ತೀನಿ.

೧೩೯. ಡ್ರಿಂಕ್ಸ್ ಕುಡಿತಾರಲ್ಲಾ ಹೆಂಗಿರ್ತಾದ?

ಒಂದು ಸಲ ನಾನು ನನ್ನ ಹೆಂಡ್ತಿ ಇಬ್ರು ಟಿ.ವಿ. ನೋಡ್ತಾ ಕುಳಿತಿದ್ವಿ. ಅದರಲ್ಲಿ 4-6 ಜನ ಗೆಳೆಯರು ಕೂಡಿಕೊಂಡು ಡ್ರಿಂಕ್ಸ್ ಪಾರ್ಟಿ ಮಾಡ್ತಾ ಇದ್ರು. ಅವರು ರುಚಿ ಮಾಡಿಕೊಂಡು ಕುಡಿಯುವುದನ್ನು ನನ್ನ ಹೆಂಡ್ತಿ ಬಹಳ ಕುತೂಹಲಕಾರಿಯಾಗಿ ನೋಡ್ತಾ ಇದ್ಳು. ಅದನ್ನು ನೋಡಿದ.

ನಾನು : ಅದೇನೂ ಅವರು ಕುಡಿಯುವುದು ಅಷ್ಟು ಆಸಕ್ತಿಯಿಂದ ನೋಡ್ತಾ ಇದ್ದಿ?

ಹೆಂಡ್ತಿ : ಇಲ್ಲಾ ಅವರು ಅಷ್ಟು ರುಚಿ ಮಾಡಿ ಕುಡ್ಯಾಕ ಹತ್ಯಾರಲ್ಲಾ ಅದ್ಕೆ ನೋಡಾಕತ್ತಿನಿ.

ನಾನು : ಅದಕ್ಕೇನೀಗ?

ಹೆಂಡ್ತಿ : ಅಲ್ಲಾ ಅವರು ರುಚಿ ರುಚಿ ಮಾಡಿ ಕುಡ್ಯಾಕತ್ಯಾರಲ್ಲಾ ಅದು ಸಿಹಿ ಇರ್ತಾದಾ?

ನಾನು : ನಂಗೇನು ಗೊತ್ತು .....!!

೧೪೦. ತಿಪ್ಯಾಗ ಬಿದ್ದ ಚಪ್ಪಲಿ ಆಯ್ಕೊಂಡು ತಂದಿದ್ಯಾ?

ನನಗೆ ಹೀಟ್ ಜಾಸ್ತಿ. ಅದ್ಕೆ ಕಣ್ಣು ಉರಿ, ಕಣ್ಣು ಕೆಂಪಗೆ, ಮೈಯಲ್ಲಿ ಗುಳ್ಳೆ ಏಳುವುದು, ಕಾಲು ಉರಿಯುವು ಇತ್ಯಾದಿ ಸಮಸ್ಯೆಗಳು ಕಾಡ್ತಾ ಇದ್ವು. ಅದಕ್ಕಾಗಿ ನಾನು ಪ್ಯೂವರ್ ಲೆದರ್ ಚಪ್ಪಲಿ ತಂದು ತೊಡುತ್ತಿದ್ದೆ. ಅವು ಬಹಳ ತುಟ್ಟಿ ಇರ್ತಾ ಇದ್ವು. ಒಂದು ಸಲ ಒಂದು ಸಾವಿರ ರೂಪಾಯಿ ಕೊಟ್ಟು ಒಂದು ಜೊತೆ ಪ್ಯೂವರ್ ಲೆದರ್ ಚಪ್ಪಲಿ ತಂದಿದ್ದೆ. ಅವು ನೋಡುವುದಕ್ಕೆ ಹಳೆಯ ತರಹ ಕಾಣ್ತಾ ಇದ್ವು. ಅದನ್ನು ನೋಡಿದ ನನ್ನ

ಹೆಂಡ್ತಿ : ಇವು ಚಪ್ಪಲಿ ಹೊಸವುನಾ?

ನಾನು : ಹೌದು.

ಹೆಂಡ್ತಿ : ರೊಕ್ಕ ಕೊಟ್ಟು ತಂದಿ?

ನಾನು : ಹೌದು ಒಂದು ಸಾವಿರ ರೂಪಾಯಿ.

ಹೆಂಡ್ತಿ : ನಾನು ಎಲ್ಲೋ ತಿಪ್ಯಾಗ ಬಿದ್ದಿದ್ವು ಆರಿಸಿಕೊಂಡು ತಂದಾನಂತ ಮಾಡಿದ್ದೆ.

೧೪೧. ಲ:೩೦ಕ್ಕೆಲ್ಲಾ ಜ್ವರ ಹೊಂಟೋಗ್ತಾವ

ಮಗ ಶಶಾಂಕ ಗೆಳೆಯರ ಜೊತೆ ಜಾಸ್ತಿ ಆಟ ಆಡ್ತಾ ಇದ್ದ. ಶಾಲೆ ಇಲ್ಲದಾಗ, ರಜೆ ಇದ್ದಾಗ ಹೊರಗಡೆ ಗೆಳೆಯರೊಂದಿಗೆ ಸದಾ ಆಡುತ್ತಾ ಕಾಲ ಕಳೆಯುತ್ತಿದ್ದ. ಬಿಡುವು ಸಿಕ್ಕ ಕೂಡಲೇ ತನ್ನ ಸೈಕಲ್ ತೆಗೆದುಕೊಂಡು ಹೊರಗಡೆ ಗೆಳೆಯರೊಂದಿಗೆ ಹೋಗುತ್ತಿದ್ದ. ತನ್ನ ಮೈಯಲ್ಲಿ ಆರಾಮು ಇಲ್ಲದಿದ್ದರೂ ಸಹ ಆಟ ಆಡುವುದು ಬಿಡುತ್ತಿರಲಿಲ್ಲ. ಸ್ವಲ್ಪ ಆರಾಮು ತಪ್ಪಿದ ಕೂಡಲೇ ಶಾಲೆಗೆ ಹೋಗುವುದಕ್ಕೆ ಒಲ್ಲೆ ಎನ್ನುತ್ತಿದ್ದ. ಶಾಲೆಗೆ ಬಸ್ಸಿನಲ್ಲಿ ಹೋಗುತ್ತಿದ್ದ. ಅದು 8:30ಕ್ಕೆ ನಮ್ಮ ಮನೆಯ ಸುತ್ತಲ ವಿದ್ಯಾರ್ಥಿಗಳನ್ನು ಕರೆದುಕೊಂಡು ಹೋಗುತ್ತಿತ್ತು. ಒಂದು ಸಲ ಶಶಾಂಕಗೆ ಸ್ವಲ್ಪ ಆರಾಮು ತಪ್ಪಿತ್ತು. ಅದ್ಕೆ,

ಶಶಾಂಕ : ನಾನು ಇವತ್ತು ಶಾಲೆಗೆ ಹೋಗಲ್ಲ.

ನಾನು : ಯಾಕೆ?

ಶಶಾಂಕ : ನನಗೆ ಆರಾಮು ಇಲ್ಲಾ ಜ್ವರಾ ಬಂದಾವ.

ನಾನು : ಸದ್ಯಕ್ಕಂತೂ ಆರಾಮು ಇಲ್ಲ, ಜ್ವರ ಬಂದಾವ. 8:30ಕ್ಕೆ ಸ್ಕೂಲ್ ಬಸ್ಸು ಹೋದ ಕೂಡ್ಲೆ ಹೆಂಗ ಆರಾಮು ಆಗ್ತಾದ ನೋಡು. ಸೈಕಲ್ ಜೊತೆ ಜ್ವರನೂ ಹೊರಗೆ ಹೋಗ್ತಾವ ನೋಡ.

೧೪೨. ನಂಗೆ 8th ಸೆನ್ಸ್ ಇದೆ ಬಿಡು

ಮನುಷ್ಯನ ಜ್ಞಾನ ಪಂಚೇಂದ್ರಿಯಗಳಲ್ಲಿಯೇ ಅಡಗಿದೆ. ಕಣ್ಣು, ಕಿವಿ, ಮೂಗು, ನಾಲಗೆ, ಹಾಗೂ ಚರ್ಮ ಈ ಐದು ಮನುಷ್ಯನ ಜ್ಞಾನವನ್ನು ಹೆಚ್ಚಿಸುವ ಮತ್ತು ನಿಯಂತ್ರಣದಲ್ಲಿಯೂ ಇಡುವ ಪಂಚ ಇಂದ್ರಿಯಗಳು. ಇವು ಯಾವಾಗಲೂ ಶುದ್ಧವಾಗಿರಬೇಕು. ಅವುಗಳಲ್ಲಿ

ವ್ಯತ್ಯಾಸವಾದರೆ ಆರೋಗ್ಯದಲ್ಲಿ ಏರು–ಪೇರುಗಳು ಕಂಡುಬರುತ್ತದೆ. ಇವುಗಳನ್ನು ಮನುಷ್ಯನ ಜ್ಞಾನ ಎಂತಲೂ ಕರೆಯುತ್ತಾರೆ. ಜೊತೆಗೆ ಮನುಷ್ಯನ ಸ್ಪರ್ಶ ಜ್ಞಾನ ಕೂಡಾ ಹೌದು. ಇದನ್ನು ಇಂಗ್ಲೀಷನಲ್ಲಿ ಸೆನ್ಸ್ ಎಂದು ಕರೆಯುತ್ತಾರೆ.

ಕೆಲ ಸಾಧು–ಸಂತರು ಜ್ಞಾನಿಗಳಾಗಿರುತ್ತಾರೆ. ಅವರು ಮುಂದೆ ನಡೆಯುವುದನ್ನು ಹೇಳುವಷ್ಟು ಜ್ಞಾನ ಹೊಂದಿರುತ್ತಾರೆ. ಆದ್ದರಿಂದ ಅವರನ್ನು ನಾವು ಕಾಲಜ್ಞಾನಿಗಳೆಂದು ಕರೆಯುತ್ತೇವೆ. ಈ ಜ್ಞಾನವನ್ನು ನಾವು ಇಂಗ್ಲೀಷನಲ್ಲಿ 6^{th} ಸೆನ್ಸ್ ಎಂದು ಕರೆಯುತ್ತೇವೆ. ಇಂದಿನ ಸ್ಪರ್ಧಾ ಜಗತ್ತಿನಲ್ಲಿ ಎಷ್ಟು ಸೆನ್ಸಗಳಿದ್ದರೂ ಕಡಿಮೆ.

ಒಂದು ಸಲ ಯಾವುದೋ ವಿಷಯಕ್ಕೆ ನಾನು ಮತ್ತು ನನ್ನ ಹೆಂಡ್ತಿ ವಾದ ಮಾಡ್ತಾ ಇದ್ವಿ. ಆ ವಾದದಲ್ಲಿ ಬುದ್ಧಿವಂತಿಕೆಯ ಪ್ರಶ್ನೆ ಇತ್ತು. ವಾದ ಮಾಡ್ತಾ,

ನಾನು : ನಿಂಗೇನು ಗೊತ್ತೈತಿ?

ಹೆಂಡ್ತಿ : ಅಯ್ಯೋ ನಂಗೆ ಎಲ್ಲಾ ಗೊತ್ತೈತಿ ಬಿಡು

ನಾನು : ನಂಗೆ ಆ ಜ್ಞಾನ ಗೊತ್ತೈತಿ. ಅದರ ಬಗ್ಗೆ ನಂಗೆ ತಿಳುವಳಿಕೆ ಐತಿ. ನನ್ನತ್ರ 7^{th} ಸೆನ್ಸ ಐತಿ ಗೊತ್ತಾ.

ಹೆಂಡ್ತಿ : ಅಯ್ಯೋ ನನ್ನತ್ರ 8^{th} 9^{th} ಸೆನ್ಸ ಐತಿ ಬಿಡು.

೧೪೩. ಚೂರಿ ಹಾಕದಷ್ಟೆ ಬಾಕಿ

ನಮ್ಮ ಊರ ಕಡೆ ಪ್ರಾಣಿಗಳನ್ನು ಬಲಿಕೊಡುವಾಗ ಕುರಿ, ಕೋಳಿಗಳನ್ನು ಕೊಯ್ಯುವಾಗ ಇಲ್ಲವೆ ಬಲಿ ಕೊಡುವಾಗ ಮೊದಲು ಹಿರಿಯರು ಅವುಗಳ ಕುತ್ತಿಗೆಯನ್ನು ಕತ್ತರಿಸುತ್ತಾರೆ. ಈ ಕ್ರಿಯೆಗೆ ಚೂರಿ ಹಾಕು ಎಂದು ಕರೆಯುತ್ತಾರೆ. ಅವರು ಚೂರಿ ಹಾಕಿದ ನಂತರವೇ ಮುಂದಿನ ಪ್ರಕ್ರಿಯೆಗಳು ನಡೆಯುತ್ತವೆ. ನನ್ನ ಹೆಂಡತಿಗೆ ಒಂದು ಸಲ

ಅಪೆಂಡೆಕ್ಸ್ ಖಾಯಿಲೆ ಆಗಿತ್ತು. ಅದನ್ನು ತೋರಿಸಿಕೊಳ್ಳಲು ತಮ್ಮ ಊರಿಗೆ ಹೋಗಿದ್ದಳು. ಅಲ್ಲಿನ ವೈದ್ಯರು ಪರೀಕ್ಷಿಸಿ; ಇದನ್ನು ಕಡ್ಡಾಯವಾಗಿ ಆಪರೇಷನ್ ಮಾಡಲೇಬೇಕು. ಇದು ನಾರಮಲ್‌ಗೆ ಬಂದ ನಂತರ ಆಪರೇಷನ್ ಮಾಡ್ತೀವಿ; ಸ್ವಲ್ಪ ದಿನ ವಿಶ್ರಾಂತಿ ತೆಗೆದುಕೊಳ್ಳಿ ಎಂದು ಹೇಳಿ ಗುಳಿಗೆ–ಔಷಧಿ ಕೊಟ್ಟು ಮುಂದೆ ಆಪರೇಷನ್ ಮಾಡಬೇಕಾದ ದಿನಾಂಕ, ಟೈಮ್ ಫಿಕ್ಸ್ ಮಾಡಿ ಕಳುಹಿಸಿದರು. ಆಪರೇಷನ್ ಮಾಡ್ಸಿಕೊಂಡ ನಂತರವೇ ಮರಳಿ ಕೊಪ್ಪಳಕ್ಕೆ ಬರುವುದಾಗಿ ತಿಳಿಸಿದಳು. ಒಂದು ವಾರದ ಬಳಿಕ ಆಪರೇಷನ್ ದಿನ ಹತ್ತಿರ ಬಂದಾಗ ವಿಷಯ ತಿಳಿದುಕೊಳ್ಳಲು ಫೋನ್ ಮಾಡಿದೆ.

ನಾನು : ಆಪರೇಷನ್ ಕಥೆ ಏನಾಯ್ತು? ಡಾಕ್ಟರ್ ಯಾವಾಗ ಬಾ ಅಂದಾರ? ಯಾವಾಗ ಹೋಗ್ತಿ?

ಹೆಂಡ್ತಿ : ಡಾಕ್ಟರ್ ನಾಳೆ ಬಾ ಅಂದಾರ ಹೋಗ್ಬೇಕು. ಅವ್ರು ಚೂರಿ–ಚಾಕು ಸಾಣಿ ಹಿಡಿದು ಮಸ್ದು ಇಟ್ಟಾರ; ನಾನು ಹೋದ ಕೂಡ್ಲೆ ಚೂರಿ ಹಾಕ್ತಾರ ಅಷ್ಟೆ.

೧೪೪. ಕನ್ನಡಿ ಒಡೆದು ಹೋಯ್ತು ಅದ್ನ ಒಗದ್ವಿ ನೀನು ಮತ್ತೆ ವಾಪಸ್ ಬಂದಲ್ಯಾ?

ಮನೆಯಲ್ಲಿ ಯಾವುದಾದರೂ ಸಾಮಾನು ಬಿದ್ದು ಒಡೆದು ಹೋದರೆ ಅಪಶಕುನ. ಒಡೆದು ಹೋದ, ಮುಕ್ಕಾದ, ಮುರಿದ ಮತ್ತು ಹರಿದ ವಸ್ತುಗಳನ್ನು ಮನೆಯಲ್ಲಿ ಇಡಬಾರದು ಮತ್ತು ಅವುಗಳನ್ನು ಉಪಯೋಗಿಸಲೂ ಬಾರದು, ಇದು ಸಂಪ್ರದಾಯ.

ಒಂದು ದಿನ ನನ್ನ ಹೆಂಡ್ತಿಗೆ ಹೊಟ್ಟೆ ನೋವು ಎಂದು ಗೋಳಾಡಿದಳು. ತೋರಿಸುವುದಕ್ಕಾಗಿ ವೈದ್ಯರ ಹತ್ತಿರ ಕರೆದುಕೊಂಡು

ಹೋದೆ. ಅಲ್ಲಿನ ವೈದ್ಯರು ಪರೀಕ್ಷಿಸಿ ಇದು ಅಪೆಂಡೆಕ್ಸ್, ಇದನ್ನು ಕಡ್ಡಾಯವಾಗಿ ಆಪರೇಷನ್ ಮಾಡಲೇಬೇಕು ಇಲ್ಲವಾದರೆ ತೊಂದರೆಯಾಗುತ್ತದೆ ಎಂದು ತಿಳಿಸಿದರು. ಅದೇ ಪ್ರಕಾರವಾಗಿ ತಮ್ಮ ಊರಿಗೆ ಹೋಗಿ ಅಲ್ಲಿಯೇ ಅಪರೇಷನ್ ಮಾಡಿಸಿಕೊಂಡು ಮರಳಿ ಬಂದಳು. ಆ ಸಂದರ್ಭದಲ್ಲಿ ಬಹಳಷ್ಟು ತೊಂದರೆ ಅನುಭವಿಸಿದ್ದಳು. ಆಪರೇಷನ್ ಮಾಡಿಸಿಕೊಂಡು ಮರಳಿ ಮನೆಗೆ ಬಂದಾಗ ನನ್ನ

ಹೆಂಡ್ತಿ : ಅವತ್ತೆ ನಂಗೆ ಅನುಮಾನ ಬಂದಿತ್ತು.

ನಾನು : ಯಾವತ್ತು?

ಹೆಂಡ್ತಿ : ಹೊಟ್ಟೆ ನೋವು ಕಾಣಿಸಿಕೊಳ್ಳುವುದಕ್ಕೆ ಮುಂಚೆ ಕನ್ನಡಿ ಬಿದ್ದು ಒಡೆದು ಹೋಯ್ತು.

ನಾನು : ಅವತ್ತು ಕನ್ನಡಿ ಬಿದ್ದು ಒಡೆದು ಹೋಯ್ತು ನಿಜ. ಒಡೆದದ್ದು ಉಪಯೋಗಿಸಬಾರದು ಅಂತ ಅದನ್ನು ಹೊರಗಡೆ ಒಗೆದು ಬಂದೆ. ಆದ್ರ ನೀನು ಮತ್ತೆ ವಾಪಸ್ ಬಂದೆಲ್ಲಾ.

೧೪೫. ನಾನೇ ದೆವ್ವ ಆಗಿ ಕಾಡ್ತಿದ್ದೆ

ಎಂಗೆಂಗೋ ವರ್ತಿಸುವವರಿಗೆ ನಮ್ಮ ಊರ ಕಡೆ ದೆವ್ವ ಬಡದೈತಿ ಎಂದು ಕರೆಯುತ್ತಾರೆ. ಈ ರೀತಿ ದೆವ್ವ ಬಡಿದವರ ವರ್ತನೆ ವಿಚಿತ್ರವಾಗಿ ಕಾಣುತ್ತಿತ್ತು. ಕೆಲ ಸತ್ತವರೂಕೂಡಾ ಒಬ್ಬರ ಮೈ ಮೇಲೆ ಬಂದು ದೆವ್ವದ ರೂಪದಲ್ಲಿ ಕಾಡುತ್ತಾರೆಂಬ ನಂಬಿಕೆ ಇದೆ. ಈ ರೀತಿಯ ವರ್ತನೆಯನ್ನು ದೆವ್ವ ಬಡಿದುಕೊಂಡಾದ ಅಥವಾ ಗಾಳಿ ಬಡಿದುಕೊಂಡಾದ ಎಂದು ಕರೆಯುತ್ತಿದ್ದರು. ಇಂತವರಿಗೆ ಯಾವುದೇ

ಆಸ್ಪತ್ರೆಗೆ ಕರೆದುಕೊಂಡು ಹೋಗಿ ವೈದ್ಯರ ಹತ್ತಿರ ಚಿಕಿತ್ಸೆ ಕೊಡಿಸಿದರೆ ಉಪಯೋಗವಿಲ್ಲ. ಈ ರೀತಿ ದೆವ್ವ ಬಡಿದವರಿಗೆ; ದೆವ್ವ ಬಿಡಿಸುವ ವೈದ್ಯ ನಿಪುಣರು ಬೇರೆಯೇ ಇದ್ದಾರೆ. ಅವರ ಹತ್ತಿರ ಕರೆದುಕೊಂಡು ಹೋಗಬೇಕು. ಅವರು ಕೆಲ ಮಾಟ–ಮಂತ್ರಗಳನ್ನು ಮಾಡಿ ಈ ದೇಹ ಬಿಟ್ಟು ಹೋಗು ಎಂದು ಕಾಲ್ಮರಿ(ಕೆರ–ಚಪ್ಪಲಿ)ಯಿಂದ ಎರಡೇಟು ದೆವ್ವ ಬಡಿದವರಿಗೆ ಹೊಡೆಯುತ್ತಾರೆ. ಈ ರೀತಿ ಕೆರದಿಂದ ಹೊಡೆದ ಕೂಡಲೇ ದೆವ್ವ ಆ ದೇಹದಿಂದ ಬಿಟ್ಟು ಹೋಗುತ್ತದೆ. ಎಂತೆಂತಹ ದೊಡ್ಡ ವೈದ್ಯರಿಂದ ವಾಸಿಯಾಗದ ಈ ಖಾಯಿಲೆ; ಇಂತಹ ವೈದ್ಯ ನಿಪುಣರು ಈ ರೀತಿ ಮಾಡುವುದರಿಂದ ವಾಸಿಯಾದ ಎಷ್ಟೋ ಉದಾಹರಣೆಗಳು ನಮ್ಮ ಕಣ್ಣ ಮುಂದಿವೆ. ಇದೊಂದು ಪೇತು ರೋಗ, ಅದಕ್ಕೆ ಹೀಗೆ ಮಾಡಲೇಬೇಕು ಎಂತಲೂ ಹೇಳುತ್ತಾರೆ.

ನನ್ನ ಮಕ್ಕಳಿಗೆ ಅಥವಾ ನನ್ನ ಹೆಂಡತಿಗೆ ಆರೋಗ್ಯದಲ್ಲಿ ಸ್ವಲ್ಪ ವ್ಯತ್ಯಾಸವಾದರೂ ಆಸ್ಪತ್ರೆಗೆ ಹೋಗಿ ತೋರಿಸಿಕೊಂಡು ಬರೋಣ ಎಂದು ಪೀಡಿಸುತ್ತಿದ್ದಳು. ನಾನು ಸಣ್ಣ–ಪುಟ್ಟ ವ್ಯತ್ಯಾಸಗಳಿಗೆ ಬೇಡ ಎನ್ನುತ್ತಿದ್ದೆ. ಆದರೂ ಆಕೆ ಬಿಡುತ್ತಿರಲಿಲ್ಲ. ಹಠ ಮಾಡಿ ನನ್ನನ್ನು ವೈದ್ಯರ ಹತ್ತಿರ ಕರೆದುಕೊಂಡು ಹೋಗುತ್ತಿದ್ದಳು. ಅದಕ್ಕೆ ನಾನು ಹೂಂ ಎಂದು, ನಡಿ ಡಾಕ್ಟರ್ ಹತ್ರ ಎರಡು ಕಾಲ್ಮರಿ ಏಟು ಹೊಡಿಸಿಕೊಂಡು ಬರೋಣ ದೆವ್ವ ಬಿಡುತ್ತೈತಿ ಎನ್ನುತ್ತಿದ್ದೆ.

ಒಂದು ಸಲ ನನ್ನ ಹೆಂಡತಿಗೆ ಹೊಟ್ಟೆ ನೋವು ಕಾಣಿಸಿಕೊಂಡಿತ್ತು. ಅದಕ್ಕೆ ವೈದ್ಯರ ಹತ್ತಿರ ಕರೆದುಕೊಂಡು ಹೋಗಿ ತೋರಿಸಿದೆ. ಪರೀಕ್ಷಿಸಿದ ವೈದ್ಯರು ಇದು ಅಪೆಂಡಿಕ್ಸ್; ಇದಕ್ಕೆ ಅಪರೇಶನ್ ಮಾಡಲೇಬೇಕು, ನೀವು ತಡ ಮಾಡಿದ್ದೀರಿ, ಇನ್ನೂ ತಡಮಾಡಿದರೆ ಜೀವಕ್ಕೆ ಅಪಾಯ ಎಂದು ಸಲಹೆ ನೀಡಿದರು. ವೈದ್ಯರ ಸಲಹೆಯಂತೆ ಅಪರೇಶನ್ ಮಾಡಿಸಿದೆವು. ಆಕೆ ಅಪರೇಶನ್

ಸಂದರ್ಭದಲ್ಲಿ ಬಹಳಷ್ಟು ತೊಂದರೆ ಅನುಭವಿಸಿದಳು. ಅದಾದ ನಂತರ ತನ್ನ ಮತ್ತು ಮಕ್ಕಳ ಆರೋಗ್ಯದಲ್ಲಿ ಬಹಳ ಎಚ್ಚರಿಕೆ ವಹಿಸುತ್ತಿದ್ದಳು. ಇದಾದ ನಂತರ ಒಂದು ಸಲ ತನಗೆ ಏನೋ ಹೊಟ್ಟೆ ನೋವು ಕಾಣಿಸಿಕೊಂಡಿತು. ಅದಕ್ಕೆ

ಹೆಂಡ್ತಿ : ನಂಗೆ ಹೊಟ್ಟೆ ನೋವು ಬಂದೈತಿ ಡಾಕ್ಟರ್ ಹತ್ರ ಹೋಗೋಣ

ನಾನು : ಆಯ್ತು ನಡಿ ದೆವ್ವ ಬಡ್ಕಂಡಾದ ಅಲ್ಲಾ ಡಾಕ್ಟರ್ ಹತ್ರ ಹೋಗಿ ಎರಡೇಟು ಕಾಲ್ಮರಿ ಹೊಡಿಸ್ಕೊಂಡು ಬಂದ್ರ ಸರಿ ಹೋಗ್ತಾದ

ಹೆಂಡ್ತಿ : ಎಲ್ಲಿ ಕಾಲ್ಮರಿ ಏಟೋ ಮಾರಾಯ, ಅವಾಗ ನಾಲ್ಕು ದಿನ ತಡ ಮಾಡಿದ್ರೆ ನಾನೇ ಎಲ್ರೂಗಿ ದೆವ್ವ ಆಗಿ ಕಾಡಿ ನಾನೇ ಎರಡೇಟು ಕಾಲ್ಮರಿಲಿ ಹೊಡಿಸ್ಕೋತ್ತಿದ್ದೆ.

೧೪೬. ಒಂದು ನಾಯಿನ್ನಾರ ಸಾಕ್ಬೇಕಿತ್ತು

ನಾನು ಕೆಲವೊಂದು ಸಲ ಗೆಳೆಯರ ಜೊತೆ ಹೊರಗಡೆ ಊಟಕ್ಕೆ ಹೋಗುವ ಹವ್ಯಾಸ ಇತ್ತು. ಕೆಲವೊಂದು ಸಲ ಹೊರಗಡೆ ಊಟಕ್ಕೆ ಹೋಗುವುದು ಮೊದಲೇ ನಿರ್ಧಾರವಾಗಿರುತ್ತಿತ್ತು. ಇನ್ನೂ ಕೆಲಸವೊಂದು ಸಲ ನಿರ್ಧಾರವಾಗಿರುತ್ತಿರಲಿಲ್ಲ. ಒಂದು ಸಲ ಸತತವಾಗಿ 2–3ದಿನ ಊಟಕ್ಕಾಗಿ ಹೊರಗಡೆ ಹೋಗಬೇಕಾಗಿ ಬಂದಿತ್ತು. ಆವಾಗ ನಾನು ಮನೆಯಲ್ಲಿ ಮೊದಲೇ ತಿಳಿಸುವುದಕ್ಕೆ ಆಗಿರಲಿಲ್ಲ. ಬಹುಶಃ ಮನೆಯಲ್ಲಿ ಅಡುಗೆ ಮಾಡಿ ಅದು ವ್ಯರ್ಥವಾಗಿರಬೇಕು ಅನಿಸಿತು. ಅದಕ್ಕಾಗಿ ಮಗಳು

ಮೇಘನಾ: ಅಪ್ಪ ನೀನು ಒಂದು ನಾಯಿನ್ನಾರ ಸಾಕಬೇಕಿತ್ತು ನೋಡು

ನಾನು: ಯಾಕೆ?

ಮೇಘನಾ: ಇಲ್ಲಾ ದಿನಾ ಮಾಡಿದ ಅಡಿಗೆ ವೇಸ್ಟ ಆಗ್ತಾದಲ್ಲಾ. ಅದ್ಕೆ ಅದನಾರ ಸಾಕಿದ್ರೆ ತಿನ್ನತಿತ್ತು.

ನಾನು: ಅಂದ್ರೆ?

ಮೇಘನಾ: ಇಬ್ರಲ್ಲಿ ಒಬ್ರು ತಿನ್ಬೇಕಲ್ಲಾ ಅದ್ಕೆ ಹೇಳಿದೆ.

೧೪೭. ಇಲ್ಲಾ ಯಾರಾದ್ರೂ ಸತ್ರೆ ಶಾಲೆಗೆ ರಜೆ ಕೊಡ್ತಾದ

ಒಂದು ಸಲ ಶಶಾಂಕ ಶಾಲೆಗೆ ಹೋಗಲು ಮನಸಿರಲಿಲ್ಲ ಅಂತ ಕಾಣಿಸ್ತು. ಬೆಳಿಗ್ಗೆ ಏಳುವುದು, ಸ್ನಾನ, ತಯಾರಿ ಇತ್ಯಾದಿ ಎಲ್ಲವೂ ತಡ ಮಾಡಿದ. ಮನಸಿಲ್ಲದ ರೀತಿಯಲ್ಲಿ ತಯರಾಗಿ ಶಾಲೆಗೆ ಹೊರಡಲು ಶಾಲೆ ಡ್ರೆಸ್ ಹಾಕಿಕೊಂಡು ಸಿದ್ಧನಾದ. ಶಾಲೆಯ ಬ್ಯಾಗ ತಲೆಯ ಹಿಂಬದಿ ಮಾಡಿಕೊಂಡು ಮಲಗಿಕೊಂಡ. ಆಗ ಅವರಮ್ಮ ಬಯ್ದು ಶಾಲೆಗೆ ಹೋಗಲು ತಿಳಿಸಿದಳು. ಅನಿವಾರ್ಯವಾಗಿ ಬ್ಯಾಗ್ ಹಾಕಿಕೊಂಡು ಹೊರ ಹೋಗಿ

ಶಶಾಂಕ: ಯಮ್ಮ ಟಿ.ವಿ ಹಚ್ಚು

ಮಮ್ಮಿ : ಯಾಕೆ?

ಶಶಾಂಕ: ಏನಿಲ್ಲಾ ಯಾರಾದ್ರೂ ಸತ್ತಾರೇನು ನೋಡು

ಮಮ್ಮಿ : ಅದ್ಕೇನೀಗ?

ಶಶಾಂಕ: ಇಲ್ಲಾ ಯಾರಾದ್ರೂ ಸತ್ರೆ ಶಾಲೆಗೆ ರಜೆ ಕೊಡ್ತಾರ

೧೪೮. ಪುಸ್ತಕ ಮಾರಿದ್ರೆ ನೂರು–ಇನ್ನೂರು ರೂಪಾಯಿ ಬರಲ್ಲ

ನಾನು ತಿಂಗಳಿಗೆ ಏನಿಲ್ಲವೆಂದರೂ ಕನಿಷ್ಠ ಸಾವಿರದ ಐದುನೂರು ರೂಪಾಯಿಗಳ ಪುಸ್ತಕಗಳನ್ನು ಖರೀದಿಸುತ್ತಿದ್ದೆ. ಓದುವ ಹವ್ಯಾಸ ಹೆಚ್ಚೇನೂ ಇರಲಿಲ್ಲ. ಆದರೂ ಆಗಾಗ ಲೇಖನ ಬರೆಯಲು, ಪುಸ್ತಕ ಬರೆಯಲು ಅವು ತುಂಬಾ ಸಹಕಾರಿಯಾಗುತ್ತಿದ್ದವು. ಹೀಗಾಗಿ ಮನೆಯಲ್ಲಿ ಸದ್ಯ ಸುಮಾರು 1500ಕ್ಕೂ ಅಧಿಕ ಪುಸ್ತಕಗಳಿವೆ. ಮನೆಗೆ ಪುಸ್ತಕಗಳನ್ನು ತಂದಾಗ ನನ್ನ ಹೆಂಡತಿ ಬಯ್ಯುತ್ತಿದ್ದಳು. ಒಂದು ಸಲ ಮಗಳು ಮೇಘನಾ ತನಗೆ ಯಾವುದಕ್ಕೊ ಹಣ ಬೇಕೆಂದು ಕೇಳಿದ್ದಳು. ನನ್ನತ್ರ ಹಣ ಇರಲಿಲ್ಲ. ಅದಕ್ಕಾಗಿ ನಾನು ಕೊಡಲಿಲ್ಲ. ನನ್ನನ್ನು ಬೈದು ಸುಮ್ಮನಾದಳು. ಒಮ್ಮೆ ಟಿ.ವಿ.ಯ ವಾರ್ತೆಗಳಲ್ಲಿ ಒಂದು ವಿಷಯ ಚರ್ಚೆಯಾಗುತ್ತಿತ್ತು. ಒಬ್ಬ ರೈತನಿಗೆ ಯಾವುದೋ ಪರಿಹಾರದ ಹಣವನ್ನು ಜಿಲ್ಲಾಧಿಕಾರಿಗಳು ಕೊಡಬೇಕೆಂದು ನ್ಯಾಯಾಲಯವು ಆದೇಶಿಸಿ ವಾಯಿದೆ ನೀಡಿತ್ತು. ಆ ರೈತನಿಗೆ ಪರಿಹಾರ ನೀಡಲು ವಿಧಿಸಿದ್ದ ವಾಯಿದೆ ಮೀರಿದ್ದು ಮತ್ತು ನ್ಯಾಯಾಲಯದ ಆದೇಶದ ಉಲ್ಲಂಘನೆ ಮಾಡಿದ್ದಕ್ಕಾಗಿ ಜಿಲ್ಲಾಧಿಕಾರಿಗಳ ಕಛೇರಿಯ ಸಾಮಾನುಗಳನ್ನು ಮುಟ್ಟುಗೋಲು ಹಾಕಿಕೊಂಡು ಆ ರೈತನಿಗೆ ಒಪ್ಪಿಸಲು ನ್ಯಾಯಾಲಯ ಸೂಚಿಸಿತ್ತು. ಆ ಪ್ರಕಾರ ಜಿಲ್ಲಾಧಿಕಾರಿಗಳ ಕಛೇರಿಯ ಸಾಮಾನುಗಳನ್ನು ರೈತ ತೆಗೆದುಕೊಂಡು ಹೋಗುವ ದೃಶ್ಯ ಟಿ.ವಿ.ಯಲ್ಲಿ ಪ್ರಸಾರವಾಗುತ್ತಿತ್ತು. ಅದನ್ನ ನೋಡಿದ ಮಗಳು:

ಮೇಘನಾ : ಅಪ್ಪ ಜಿಲ್ಲಾಧಿಕಾರಿಗಳು ಪರಿಹಾರ ಕೊಡದಿದ್ದಾಗ ಹಿಂಗೆ ಸಾಮಾನುಗಳನ್ನು ತಗಂಡು ಹೋಗಬಹುದಾ?

ನಾನು : ಹೌದು.

ಮೇಘನಾ: ಆ ಸಾಮಾನು ತಂಗಡು ಹೋಗಿ ಏನು ಮಾಡ್ತಾರಾ?

ನಾನು: ಮಾರ್ತಾರ, ತಮ್ಮ ಪರಿಹಾರದ ಹಣ ತಾವು ತಗೋಳ್ತಾರ.

ಮೇಘನಾ: ಮಮ್ಮಿ ಹಂಗಾದ್ರೆ ಅಪ್ಪನ ಪುಸ್ತಕ ತಗಂಡು ಹೋಗಿ ನಾವು ಮಾರಿ ಬಿಡಮಾ?

ಹೆಂಡ್ತಿ: ನಿಮ್ಮಪ್ಪನ ಪುಸ್ತಕ ತಗಂಡೋಗಿ ರದ್ದಿ ಅಂಗಡಿಗೆ ಹಾಕಿದ್ರು ನಿಂಗೆ ನೂರು–ಇನ್ನೂರು ರೂಪಾಯಿ ಸಿಗಲ್ಲ.

೧೪೯. ವರದಕ್ಷಣೆಗೆ ಮೂಮೆಂಟು, ಶಾಲು ಕೊಡ್ತಾನ

ನಾನು ಕನ್ನಡ ಉಪನ್ಯಾಸಕ. ಮೇಲಾಗಿ ನಾಲ್ಕಾರು ಪುಸ್ತಕಗಳನ್ನು ಬರೆದಿದ್ದೆ; ಹೀಗಾಗಿ ನನಗೆ ಅನೇಕ ಸಾಹಿತ್ಯಿಕ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಆಮಂತ್ರಣ ನೀಡುತ್ತಿದ್ದರು. ತಿಂಗಳಲ್ಲಿ ಏನಿಲ್ಲವೆಂದರೂ 2–3 ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಅವಕಾಶ ಸಿಗುತ್ತಿತ್ತು. ಆ ಕಾರ್ಯಕ್ರಮದಲ್ಲಿ ಗೌರವ ಸಮರ್ಪಣೆಗಳು ಕಡ್ಡಾಯವಾಗಿ ನಡೆಯುತ್ತಿದ್ದವು. ಅದರಲ್ಲಿ ಹಾರ, ಶಾಲು, ಮೂಮೆಂಟು (ನೆನಪಿನ ಕಾಣಿಕೆ) ಇತ್ಯಾದಿಗಳನ್ನು ನೀಡಿ ಗೌರವಿಸುತ್ತಿದ್ದರು. ನನ್ನ ಹೆಂಡತಿಗೆ ಕಾರ್ಯಕ್ರಮಗಳಿಗೆ ಹೋಗುವುದು ಅಷ್ಟೇನೂ ಇಷ್ಟವಿರುತ್ತಿರಲಿಲ್ಲ. ಅದರಿಂದ ಏನು ಲಾಭ? ಎಂದು ಪ್ರಶ್ನಿಸುತ್ತಿದ್ದಳು. ಆ ಕಾರ್ಯಕ್ರಮದಲ್ಲಿ ನೀಡಿದ ಮೂಮೆಂಟುಗಳನ್ನು ತಂದರೆ ರೇಗಾಡುತ್ತಿದ್ದಳು. ಅವುಗಳು ತಂದು ಮನೆಯಲ್ಲಿ ಇಡುವುದಕ್ಕೆ ಜಾಗವಿಲ್ಲದಂತೆ ಆಗಿತ್ತು. ಹೀಗಾಗಿ ಬಯ್ದಾಡುತ್ತಿದ್ದಳು. ಆದರೂ ನಾನು ಆ ಕಾರ್ಯಕ್ರಮಗಳಲ್ಲಿ ನೀಡಿದ ಸನ್ಮಾನವನ್ನು ತರುತ್ತಿದ್ದೆ.

ನಿರಾಕರಿಸಿದರೆ ಆಯೋಜಕರಿಗೆ ಅವಮಾನ ಮಾಡಿದಂತೆ ಎಂದು ಬಾವಿಸಿ ಅವುಗಳನ್ನು ತರುತ್ತಿದ್ದೆ. ಒಂದು ಸಲ ಕಾರ್ಯಕ್ರಮ ಮುಗಿಸಿಕೊಂಡು ಸನ್ಮಾನದ ಸಾಮಾನು ತಗಂಡು ಮನೆಗೆ ಬಂದೆ ಅವುಗಳನ್ನು ನೋಡಿದ ನನ್ನ ಹೆಂಡ್ತಿ : ಮಗಳೆ ಬಾ ಇಲ್ಲಿ

ಮೇಘನಾ :ಏನಮ್ಮಾ?

ಹೆಂಡ್ತಿ : ನಿಮ್ಮಪ್ಪ ನಿಂಗೆ ಮುಂದೆ ಮದ್ವೆ ಮಾಡಿಕೊಡೊ ಟೈಮ್ ನಿಂಗೆ ವರದಕ್ಷಣೆ ಏನು ಕೊಡ್ತಾನ ಗೊತ್ತಾ?

ಮೇಘನಾ : ಏನು?

ಹೆಂಡ್ತಿ : ಮನ್ಯಾಗ ಎಲ್ಲಾ ತಂದು ತಂದು ಇಟ್ಟಾನಲ್ಲಾ ಸನ್ಮಾನದ ಶಾಲು, ಮೂಮೆಂಟ್ ಅವುಟ್ರನೆ ನೀನಗೆ ಗಂಡನ ಮನಿಗೆ ಹೋಗೊ ಟೈಮ್ ಕೊಡ್ತಾನ.

೧೫೦. ನಂಗೆ ಮುಂದಿನ ಬ್ಯಾಲೆನ್ಸ್ ಮುಖ್ಯ

ಒಂದು ಸಲ ನಾನು ನನ್ನ ಹೆಂಡ್ತಿ ಇಬ್ರು ಕೆಲ ಸಾಮಾನು ತರುವುದಕ್ಕೆ ಗಾಡಿ ಮೇಲೆ ಹೋಗಿದ್ವಿ. ಕೆಲ ಸಣ್ಣ-ಪುಟ್ಟ ಸಾಮಾನುಗಳನ್ನು ತೆಗೆದುಕೊಂಡು ಗಾಡಿ ಮೇಲೆ ಅವುಗಳನ್ನು ಇಟ್ಟು ಕುಳಿತುಕೊಂಡಿವೆ. ಒಂದಿಷ್ಟು ಸಣ್ಣ ಸಣ್ಣ ಚೀಲಗಳನ್ನು ಗಾಡಿ ಮುಂದೆ ಪೆಟ್ರೋಲ್ ಟ್ಯಾಂಕ್‌ನ ಮೇಲಿಟ್ಟಳು. ಇನ್ನೊಂದಿಷ್ಟು ತಾನೇ ಹಿಡಿದುಕೊಂಡು ಹಿಂದೆ ಗಾಡಿ ಮೇಲೆ ಕುಳಿತಳು. ಆಗ

ನಾನು : ಅಲ್ಲೋ ಹಿಂದೆ ಮುಂದೆ ಗಾಡಿ ಮ್ಯಾಲೆ ಸಾಮಾನು ಇಟ್ರ ಹೆಂಗೆ? ನಾನು ಯಾವುದಂತ ಬ್ಯಾಲೆನ್ಸ್ ಹಿಡಿಲಿ. ಹಿಂದಿನ ಬ್ಯಾಲೆನ್ಸ್ ಹಿಡಿಬೇಕಾ.? ಮುಂದಿನ ಬ್ಯಾಲೆನ್ಸ್ ಹಿಡಿಬೇಕಾ?

■■

ಡಾ. ಸಿದ್ಧಲಿಂಗಪ್ಪ ಕೊಟ್ನೆಕಲ್‌ರವರ ಕೃತಿಗಳು

ಸ್ವತಂತ್ರ ಕೃತಿಗಳು:–

1. **ಕೊಪ್ಪಳ ಜಿಲ್ಲೆಯ ಶಾಸನಗಳು ಮತ್ತು ಸಾಂಸ್ಕೃತಿಕ ಇತಿಹಾಸ**
   (ಪಿಎಚ್.ಡಿ ಸಂಶೋಧನಾ ಮಹಾಪ್ರಬಂಧ)
   ಪ್ರಥಮ ಮುದ್ರಣ – 2010
   ಪರಿಷ್ಕೃತ ದ್ವಿತೀಯ ಮುದ್ರಣ– 2020
2. **ಸಂಸಾರ ಸಗ್ಗ**
   (ನಮ್ಮ ಕುಟುಂಬದಲ್ಲಿ ನಡೆದ ಹಾಸ್ಯ ಪ್ರಸಂಗಗಳು)
   ಪ್ರಥಮ ಮುದ್ರಣ – 2014
   ಪರಿಷ್ಕೃತ ದ್ವಿತೀಯ ಮುದ್ರಣ – 2017
   ಪರಿಷ್ಕೃತ ತೃತಿಯ ಮುದ್ರಣ – 2020
3. **ಮಾನವಿ ತಾಲೂಕಿನ ಇತಿಹಾಸ ಮತ್ತು ಸಂಸ್ಕೃತಿ**
   (ಸಂಶೋಧನಾ ಕೃತಿ – 2017
   ಡಾ. ಚನ್ನಬಸವಯ್ಯ ಹಿರೇಮಠರವರೊಂದಿಗೆ)
4. **ಕೊಪ್ಪಳದ ಕಿಷ್ಕಿಂದೆಯ ಅಂಜನಾದ್ರಿ ಪರ್ವತ ಪ್ರದೇಶವೇ ಹನುಮನ ಜನ್ಮಸ್ಥಳ;ಒಂದು ಸಮರ್ಥನೆ**
   (ಕಿರುಹೊತ್ತಿಗೆ–2021)
5. **ಕೊಪ್ಪಳ ಸ್ಥಳನಾಮ: ಒಂದು ವಿಶ್ಲೇಷಣೆ** (2022)

ಸಂಪಾದಿತ ಕೃತಿಗಳು:–

1. **ತುಂಗಾ ಲಹರಿ**
   (ಮಾನವಿ ತಾಲೂಕ ಪ್ರಾತಿನಿಧಿಕ ಕವನ ಸಂಕಲನ,
   ಪ್ರಧಾನ ಸಂಪಾದಕರು – ಶ್ರೀ ರಾಮಚಂದ್ರಪ್ಪ – 2008)

2 **ಮಾನ್ವಿಯ ಮಹನೀಯರು**
   (ಮಾನ್ವಿ ತಾಲೂಕಿನ ಸಾಹಿತ್ಯ ಕ್ಷೇತ್ರದ ಮಹನೀಯರ
   ಜೀವನ ಚರಿತ್ರೆಗಳ ಸಂಗ್ರಹ – 2014)

3 **ಸಮಕಾಲೀನ ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ**
   (ಕನ್ನಡ, ಹಿಂದಿ ಹಾಗೂ ಇಂಗ್ಲೀಷ ಆಧುನಿಕ ಸಾಹಿತ್ಯದಲ್ಲಿ
   ಸ್ತ್ರೀ ಸಂವೇದನೆ ಎಂಬ ವಿಷಯದ ಮೇಲೆ ನಡೆದ ವಿಚಾರ
   ಸಂಕಿರಣದ ಪ್ರಬಂಧಗಳ ಸಂಗ್ರಹ,
   ಪ್ರಧಾನ ಸಂಪಾದಕರು – ಡಾ. ದಯಾನಂದ ಸಾಳುಂಕೆ – 2017)

ಸಹ ಸಂಪಾದಕರಾಗಿ:–

1. **ಮನಸಿರಿ**
(ಮಾನ್ವಿ ತಾಲೂಕ ನಾಲ್ಕು ಕನ್ನಡ ಸಾಹಿತ್ಯ ಸಮ್ಮೇಳನಗಳ
ವಿಶೇಷ ಸ್ಮರಣ ಸಂಚಿಕೆ
ಪ್ರಧಾನ ಸಂಪಾದಕರು– ಶ್ರೀ ರಾಮಚಂದ್ರಪ್ಪ –2004)

ಸಂಪಾದಕ ಮಂಡಳಿ ಸದಸ್ಯರಾಗಿ :–

1. **ಕೊಪಣಸಿರಿ (ಕೊಪ್ಪಳ ಜಿಲ್ಲಾ ಅಧ್ಯಯನ)**
(ಅಖಿಲ ಭಾರತ 78ನೇ ಕನ್ನಡ ಸಾಹಿತ್ಯ ಸಮೇಳನ
ಗಂಗಾವತಿ, ಜಿಲ್ಲೆ ಕೊಪ್ಪಳ ಸ್ಮರಣ ಸಂಚಿಕೆ
ಸಂಪಾದಕರು – ಶ್ರೀ ಹೆಚ್. ಎಸ್. ಪಾಟೀಲ್ – 2013

2. **ಸ್ನೇಹ ಜೀವಿ**
(ಬಿ.ಎಸ್.ಪಾಟೀಲರ ಅಭಿನಂದನಾ ಗ್ರಂಥ,
ಪ್ರಧಾನ ಸಂಪಾದಕರು – ಶ್ರೀ ಜಿ.ಎಸ್.ಗೋನಾಳ–2013)

ಮುದ್ರಣದಲ್ಲಿರುವ ಕೃತಿಗಳು :

1. **ಕೊಪ್ಪಳ ಜಿಲ್ಲೆಯ ಜೈನ ನೆಲೆಗಳು** (ಸಂಶೋಧನಾ ಕೃತಿ)
2. **ಕೊಪ್ಪಳ ಜಿಲ್ಲೆಯ ಸುಗಮ ಸಂಗೀತ ಪರಂಪರೆ**
3. **ಕೊಪ್ಪಳ ತಾಲೂಕ ಗ್ಯಾಜಿಟಿಯರ್**

■■